೪) ಮೃಗದ ಸೇಡು ನಮ್ಮ ಪಾಡು. ೪. -----------------------------

**ಈ ಕೆಳಗಿನ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ.**

| ಮಾತು ಬೆಳ್ಳಿ; ಮೌನ ಬಂಗಾರ. | |
|---|---|
| ಗಾದೆಯ ಮಹತ್ವ | ಗಾದೆಗಳು ವೇದಗಳಿಗೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಗ್ರಾಮೀಣ ಜನರ ಜೀವನಾಡಿಗಳಾಗಿವೆ. ಗಾದೆಗಳು ಹಿರಿಯರ ಅನುಭವ ಸಾರಗಳಾಗಿವೆ. ಮಾತೇ ಮುತ್ತು ಮಾತೇ ಮೃತ್ಯು ಎಂಬ ಈ ಗಾದೆಯು ಕನ್ನಡದ ಪ್ರಸಿದ್ದ ಗಾದೆಗಳಲ್ಲಿ ಒಂದಾಗಿದೆ. |
| ಅರ್ಥ ವಿವರಣೆ | ನಾವಾಡುವ ಪ್ರತಿ ಮಾತು ಮುತ್ತಿನಂತಿರಬೇಕು. ಹಿತ–ಮಿತವಾಗಿರಬೇಕು. ನುಡಿದರೆ ಮುತ್ತಿನ ಹಾರದಂತಿರಬೇಕು. ಎಂದು ಜಗಜ್ಯೋತಿ ಬಸವಣ್ಣನವರು ಹೇಳಿದ್ದಾರೆ. ಮಾತುಗಳು ಮನಸ್ಸು ಮುಟ್ಟುವಂತಿರಬೇಕು ವಿನಃ ಮನಸ್ಸನ್ನು ಹಾಳು ಮಾಡುವಂತಿರಬಾರದು. ಮಾತು ಮೃತ್ಯುವಾಗಬಾರದು. ಆಡಿದ ಮಾತು, ಬಿಟ್ಟ ಬಾಣ ಎರಡೂ ಒಂದೇ. ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ. ಎಂಬಂತೆ ಮಾತಿನಲ್ಲಿ ಮಿತಿಯಿರಬೇಕು. ಆದ್ದರಿಂದ ನಾವು ಮಾತನಾಡುವಾಗ ಸನ್ನಿವೇಶ ಅರಿತು ಹಿತಮಿತವಾಗಿ ಮಾತನಾಡಬೇಕೆಂದು ಪ್ರಸ್ತುತ ಗಾದೆ ಮಾತಿನ ಅರ್ಥವಾಗಿದೆ. |

**ಚಟುವಟಿಕೆ–೯. ಮಾದರಿಯಂತೆ ನೋಡಿ ಬರೆಯಿರಿ.**

| ೧. ಮಾತು ಬೆಳ್ಳಿ; ಮೌನ ಬಂಗಾರ. | |
|---|---|
| ಗಾದೆಯ ಮಹತ್ವ | |
| ಅರ್ಥ ವಿವರಣೆ | |

| ೨. ಕೈ ಕೆಸರಾದರೆ ಬಾಯಿ ಮೊಸರು | |
|---|---|
| ಗಾದೆಯ ಮಹತ್ವ | ಗಾದೆಗಳು ವೇದಗಳಿಗೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ.. ಗಾದೆಗಳು ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ನೀಡುತ್ತವೆ. ಗಾದೆಗಳು ಗ್ರಾಮೀಣ ಜನರ ಜೀವನಾಡಿಗಳಾಗಿವೆ. ಗಾದೆಗಳು ಹಿರಿಯರ ಅನುಭವ ಸಾರಗಳಾಗಿವೆ. ಕೈ ಕೆಸರಾದರೆ ಬಾಯಿ ಮೊಸರು ಎಂಬ ಈ ಗಾದೆಯು ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಒಂದಾಗಿದೆ. |
| ಅರ್ಥ ವಿವರಣೆ | ಕೈಕೆಸರಾದರೆ ಬಾಯಿ ಮೊಸರು ಅಂದರೆ ಕಷ್ಟಪಟ್ಟು ದುಡಿದರೆ ಸುಖವುಂಟು ಎಂದರ್ಥ. ಸೋಮಾರಿಯಾಗಿ ಸುಮ್ಮನೆ ಕುಳಿತುಕೊಳ್ಳಬಾರದು. ಯಾವುದಾದರೊಂದು ಕೆಲಸ ಮಾಡುವುದರಿಂದ ನಮ್ಮ ಹೊಟ್ಟೆ ತುಂಬುತ್ತದೆ. ನಮ್ಮ ಬಾಯಿ ಮೊಸರಿನ ರುಚಿ ನೋಡುವಂತಾಗುತ್ತದೆ. ಛೀ! ಕೈ ಕೆಸರಾಗುವುದಲ್ಲಾ ಈ ಕೆಲಸವನ್ನು ಮಾಡುವುದಾದರೂ ಹೇಗೆ ಎಂದು ಯೋಚಿಸುತ್ತಾ ಕುಳಿತರೆ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. ಕೆಲಸ ಮಾಡದಿದ್ದರೆ ಹಣ ಸಂಪಾದನೆಯಾಗುವುದಿಲ್ಲ. ಸಂಪಾದನೆಯಾಗದಿದ್ದರೆ ಹೊಟ್ಟೆ ತುಂಬುವುದಿಲ್ಲ. ಜೀವನ ಸಾಗಬೇಕಾದರೆ ಕೈ ಕೆಸರಾಗಲೇ ಬೇಕು. ಕೈ ತುಂಬಾ ಸಂಪಾದನೆಯಾಗಲೇಬೇಕು. ಆಗ ನಮಗೆ ಒಳ್ಳೆಯ ಊಟ, ಆಹಾರ ಸಿಗುವಂತಾಗುತ್ತದೆ. |

| ೨. ಕೈ ಕೆಸರಾದರೆ ಬಾಯಿ ಮೊಸರು. | |
|---|---|
| ಗಾದೆಯ ಮಹತ್ವ | |
| ಅರ್ಥ ವಿವರಣೆ | |

| ೩. ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ. | |
|---|---|
| ಗಾದೆಯ ಮಹತ್ವ | ಗಾದೆಗಳು ವೇದಗಳಿಗೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ನೀಡುತ್ತವೆ. ಗಾದೆಗಳು ಗ್ರಾಮೀಣ ಜನರ ಜೀವನಾಡಿಗಳಾಗಿವೆ. ಗಾದೆಗಳು ಹಿರಿಯರ ಅನುಭವ ಸಾರಗಳಾಗಿವೆ. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಎಂಬ ಈ ಗಾದೆಯು ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಒಂದಾಗಿದೆ. |
| ಅರ್ಥ ವಿವರಣೆ | ಕುಂಬಾರ ಒಂದು ಗಡಿಗೆಯನ್ನು ಮಾಡಲು ಹಲವಾರು ದಿನ, ಸಮಯ, ಹಣ ಬೇಕು. ಆದರೆ ಅದೇ ಗಡಿಗೆಯನ್ನು ಹಾಳು ಮಾಡಲು ಕಷ್ಟ ಪಡಬೇಕಾಗಿಲ್ಲ. ಒಂದು ದೊಣ್ಣೆ ಪೆಟ್ಟು ಸಾಕು. ಅದೇ ರೀತಿ ಒಳ್ಳೆಯ ವ್ಯಕ್ತಿ ಎನಿಸಿಕೊಳ್ಳುವುದು ತುಂಬಾ ಕಷ್ಟ. ಕೆಟ್ಟವನೆನಿಸಿಕೊಳ್ಳಲು ಕಷ್ಟ ಪಡಬೇಕಿಲ್ಲ. ಒಂದು ಕೊಡ ಹಾಲು ಕೆಡಲು ಒಂದು ತೊಟ್ಟು ಹುಳಿ ಸಾಕು. ಆದ್ದರಿಂದ ಹಿರಿಯರು ಹೇಳಿದ್ದಾರೆ ಕಟ್ಟುವುದು ಕಠಿಣ ಕೆಡಿಸುವುದು ಸುಲಭ ಎಂದು. ಅಂದರೆ ಯಾವುದನ್ನಾದರೂ ಹಾಳುಗೆಡಿಸುವುದು ಸುಲಭ. ರೂಪಿಸುವುದು ಕಷ್ಟ. ಹಾಳು ಮಾಡುವ ಬುದ್ದಿ ಒಳ್ಳೆಯದಲ್ಲ ಎಂಬುದು ಈ ಗಾದೆಯ ಮೌಲ್ಯವಾಗಿದೆ. |

| ೩. ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ. | |
|---|---|
| ಗಾದೆಯ ಮಹತ್ವ | |
| ಅರ್ಥ ವಿವರಣೆ | |

**ಈ ಕೆಳಗಿರುವ ಗಾದೆ ಮಾತಗಳನ್ನು ಶಿಕ್ಷಕರಿಂದ ಕೇಳಿ ತಿಳಿದು ವಿಸ್ತರಿಸಿ ಬರೆಯಿರಿ.**

| | |
|---|---|
| ೧. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ? | ೫. ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳ ಇಲ್ಲ |
| ೨. ಹಾಸಿಗೆ ಇದ್ದಷ್ಟು ಕಾಲು ಚಾಚು. | ೬. ದೇಶ ಸುತ್ತಿ ನೋಡು; ಕೋಶ ಓದಿ ನೋಡು. |
| ೩. ಅತಿ ಆಸೆ ಗತಿಗೇಡು. | ೭. ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ. |
| ೪. ಬೆಕ್ಕಿಗೆ ಚೆಲ್ಲಾಟ; ಇಲಿಗೆ ಪ್ರಾಣ ಸಂಕಟ | ೮. ಕಾಯಕವೇ ಕೈಲಾಸ |

## ಪಠ್ಯಪೂರಕ ಅಧ್ಯಯನ-೧. ಸಾರ್ಥಕ (ಪದ್ಯ)



-ದಿನಕರ ದೇಸಾಯಿ

ಚಟುವಟಿಕೆ-೧. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ. (ಮಾದರಿಯಂತೆ ನೋಡಿ ಬರೆಯಿರಿ.)

೧. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ?

ಉತ್ತರ: ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಭತ್ತ ಬೆಳೆಯುವಲ್ಲಿ ಬೀಳುತ್ತದೆ.

ಉತ್ತರ:

೨. ಬೂದಿಯನ್ನು ಹೊಳೆಯಲ್ಲಿ ಹರಿಯಬಿಟ್ಟಾಗ ಯಾರಿಗೆ ಸಿಗುತ್ತದೆ?

ಉತ್ತರ: ಬೂದಿಯನ್ನು ಹೊಳೆಯಲ್ಲಿ ಹರಿಯಬಿಟ್ಟಾಗ ಮೀನಿಗೆ ಸಿಗುತ್ತದೆ.

ಉತ್ತರ:

೩. ದೇಹ ಏಕೆ ವ್ಯರ್ಥವಾಗಿದೆ?

ಉತ್ತರ: ತನ್ನ ಸ್ವಾರ್ಥವ ನೆನೆದು ದೇಹ ವ್ಯರ್ಥವಾಗಿದೆ.

ಉತ್ತರ:

೪. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ? ವಿವರಿಸಿ.

ಉತ್ತರ: ದೇಹದ ಬೂದಿಯನ್ನು ತಾವರೆಯು ಬೆಳೆಯುವ ಕೊಳದಲ್ಲಿ ಬಿಟ್ಟಾಗ ಆ ಬೂದಿ ಕೆಸರನು ಸೇರಿ ಹೊಸ ತಾವರೆಯು ಅರಳಿದರೆ, ಆ ಮೂಲಕ ಹುಟ್ಟು ಸಾವಿನಲ್ಲಿ ಧನ್ಯವಾಗುತ್ತದೆ ಎಂದು ಕವಿ ಹೇಳಿದ್ದಾರೆ.

೫. ಸಾರ್ಥಕ ಪದ್ಯದ ಯಾವ ಅಂಶಗಳನ್ನು ನೀವು ಮೆಚ್ಚುವಿರಿ?

ಉತ್ತರ: ಮಾನವನು ಸ್ವಾರ್ಥಿಯಾಗಿದ್ದಾನೆ. ಆತನು ಬದುಕಿದ್ದಾಗ ಆತನ ಜೀವನ ಸಾರ್ಥಕತೆ ಪಡೆಯದಿದ್ದರೂ ಸತ್ತ ಮೇಲಾದರೂ ಧನ್ಯತೆಯನ್ನು ಪಡೆಯಲಿ ಎಂದು ಕವಿ ಮಾರ್ಮಿಕವಾಗಿ ಹೇಳಿರುವ ಮಾತು ಮೆಚ್ಚುವ ಅಂಶವಾಗಿದೆ. ಸತ್ತ ನಂತರ ದೇಹವನ್ನು ಸುಡಲಾಗುತ್ತದೆ. ಆನಂತರ ಆ ಬೂದಿಯನ್ನು ಭತ್ತಬೆಳೆಯುವ ಗದ್ದೆಗೆ, ಮೀನು ವಾಸಿಸುವ ಹೊಳೆಗೆ, ತಾವರೆ ಬೆಳೆಯುವ ಕೊಳಕ್ಕೆ ಹಾಕುವುದರ ಮೂಲಕ ಸತ್ತಮೇಲಾದರೂ ಪರೋಪಕಾರಕ್ಕೆ ದೇಹ ಬಳಕೆಯಾಗಲಿ ಎಂದು ಕವಿ ಹೇಳಿರುವ ಮಾತುಗಳು ಮೆಚ್ಚುಗೆಯಾಗುತ್ತವೆ.

ಉತ್ತರ:



## ಗದ್ಯ ಪಾಠ-೨. ಸಾರ್ಥಕ ಬದುಕಿನ ಸಾಧಕ

- ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ.



| | |
|---|---|
|  | ವಿಶ್ವೇಶ್ವರಯ್ಯ: ಸರ್ ಎಂ.ವಿ (ಸೆಪ್ಟೆಂಬರ್ ೧೫, ೧೮೬೧ – ಏಪ್ರಿಲ್ ೧೨, ೧೯೬೨) ಎಂದು ಜನಪ್ರಿಯರಾಗಿದ್ದ ಸರ್ ಮೋಕ್ಷಗೊಂಡಂ ವಿಶ್ವೇಶ್ವರಯ್ಯರವರು ಭಾರತದ ಗಣ್ಯ ಅಭಿಯಂತರರಲ್ಲಿ ಒಬ್ಬರು. ಇವರು ೧೯೧೨ ರಿಂದ ೧೯೧೮ರವರೆಗೆ ಮೈಸೂರು ಸಂಸ್ಥಾನದ ದಿವಾನರಾಗಿದ್ದವರು.ಇವರ ಹುಟ್ಟಿದ ದಿನವನ್ನು ಭಾರತ ದೇಶದಾದ್ಯಂತ 'ಅಭಿಯಂತರ ದಿನ' ಎಂದು ಆಚರಿಸುತ್ತಾರೆ. |
|  | **ಮಹಾತ್ಮಗಾಂಧಿಜಿ:** **ಮೋಹನ್‌ದಾಸ್ ಕರಮ್ ಚಂದ್ ಗಾಂಧಿಯವರು ಭಾರತೀಯ ಸ್ವಾತಂತ್ರ್ಯ ಆಂದೋಲನದ ಕಾಲದಲ್ಲಿ ಭಾರತದ ಸರ್ವೋತ್ಕೃಷ್ಟ ರಾಜಕೀಯ ಹಾಗೂ ಅಧ್ಯಾತ್ಮಿಕ ನಾಯಕರಾಗಿದ್ದರು. ಅವರಿಗೆ ಮಹಾತ್ಮ ಎಂಬ ಬಿರುದು ಇತ್ತಲ್ಲದೇ ಭಾರತೀಯ ಜನರು ಅವರನ್ನು ಬಾಪೂಜೀ ಎಂದು ಸಂಭೋಧಿಸುತ್ತಿದ್ದರು.** |
|  | **ಸ್ವಾಮಿವಿವೇಕಾನಂದ:** **ಇವರು ಭಾರತದ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ತ್ವಜ್ಞಾನಿಗಳಲ್ಲಿ ಒಬ್ಬರು. ನಿರ್ಭಯತೆ,ಆಶಾವಾದ, ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ದೃಷ್ಟಿಯ ಸಂಕೇತವಾಗಿ ಅವರು ಪರಿಗಣಿತರಾಗಿ ದ್ದಾರೆ. ಸ್ವಾಮಿವಿವೇಕಾನಂದರ ಜನ್ಮದಿನವಾದ ಜನವರಿ ೧೨ ರಂದು 'ರಾಷ್ಟ್ರೀಯಯುವದಿನ'ವೆಂದು** ಆಚರಿಸಲಾಗುತ್ತದೆ. |
|  | ಬಸವೇಶ್ವರ: ಬಸವಣ್ಣ ಜನಿಸಿದ್ದು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ. ತಂದೆ ಮಾದರಸ, ತಾಯಿ=ಮಾದಲಂಬಿಕೆ (ಬಸವ, ಬಸವೇಶ್ವರ) ಭಾರತದ ೧೨ನೇ ಶತಮಾನದ ಕನ್ನಡದ ಒಬ್ಬ ತತ್ವಜ್ಞಾನಿ, ಕಲಚೂರಿ ಅರಸ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ. ಮತ್ತು ಸಾಮಾಜಿಕ ಸುಧಾರಕರಾಗಿದ್ದರು. ಶಿವ ಕೇಂದ್ರೀಕೃತ ಭಕ್ತಿ ಚಳುವಳಿಯಲ್ಲಿ ಕನ್ನಡ ವಚನಕಾರರಾಗಿದ್ದರು. |

ಚಟುವಟಿಕೆ-೧.**ಮಾದರಿಯಂತೆ ನೋಡಿ ಬರೆಯಿರಿ.**

| ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ. | |
|---|---|
| ಜನನ/ ಸ್ಥಳ | ೨೯/೧೦/೧೯೩೬ ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. |
| ತಂದೆ/ತಾಯಿ | ತಂದೆ ಶಿವರಾಮ ಭಟ್ಟ, ತಾಯಿ ಮೂಕಾಂಬಿಕೆ. |
| ಕವನ ಸಂಕಲನಗಳು | ವೃತ್ತ, ಚಿತ್ರಕೂಟ, ಸುಳಿ ಇವರ ಪ್ರಸಿದ್ಧ ಧ್ವನಿ ಸುರುಳಿಗಳು. ದೀಪಿಕಾ, ಭಾವಸಂಗಮ, ಬಂದೇಬರತಾವ ಕಾಲ, ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ ಮಕ್ಕಳ ಧ್ವನಿ ಸುರುಳಿಗಳು: ನಂದನ, ಕಿನ್ನರಿ, ನವಿಲುಗರಿ, ಕಿಶೋರಿ ಮುಂತಾದವು. 'ಸಾಹಿತ್ಯ ರತ್ನ ಸಂಪುಟ' ಕೃತಿಯನ್ನು ರಚಿಸಿದ್ದಾರೆ. |
| ಅಧ್ಯಕ್ಷತೆ | ೨೦೦೦ದಲ್ಲಿ ಹೂಸ್ಟನ್ನಿನಲ್ಲಿ ನಡೆದ ಪ್ರಥಮ ಅಮೆರಿಕಾ ವಿಶ್ವ ಕನ್ನಡ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. |
| ಪ್ರಶಸ್ತಿಗಳು | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಲಭಿಸಿವೆ. |
| | ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರ 'ಸಾಹಿತ್ಯ ರತ್ನ ಸಂಪುಟ' ಕೃತಿಯಿಂದ ಪ್ರಸ್ತುತ ಗದ್ಯ ಭಾಗವನ್ನು ಆರಿಸಿಕೊಳ್ಳಲಾಗಿದೆ. |

ಚಟುವಟಿಕೆ–೨. **ಮಾದರಿಯಂತೆ ನೋಡಿ ಬರೆಯಿರಿ.**

| ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ. | |
|---|---|
| ಜನನ/ ಸ್ಥಳ | |
| ತಂದೆ/ತಾಯಿ | |
| ಕವನ ಸಂಕಲನಗಳು | |
| ಅಧ್ಯಕ್ಷತೆ | |
| ಪ್ರಶಸ್ತಿಗಳು | |
| | |

**ಪ್ರಮುಖ ವಿಷಯಾಂಶಗಳು–**

- ಡಿವಿಜಿ ಯವರು ದೊಡ್ಡದೊಡ್ಡ ಡಿಗ್ರಿ ಪಡೆದವರಲ್ಲ; ಎಸ್.ಎಸ್.ಎಲ್.ಸಿ. ಕೂಡ ದಾಟದ ಓದು ಅವರದು.
- ಭಾರಿ ಶ್ರೀಮಂತರೋ ಎಂದರೆ ದಿನದಿನದ ಆಗತ್ಯ ಪೂರೈಸಿದ್ದೇ ಹೆಚ್ಚು ಎನ್ನುವಂಥ ಕೆಲಸ, ಸರ್ಕಾರಿ ಉದ್ಯೋಗವಲ್ಲವಾಗಿ ದೊಡ್ಡ ಅಧಿಕಾರದ ಮಾತಂತೂ ಇಲ್ಲವೇ ಇಲ್ಲ.
- ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು. ಎಷ್ಟೇ ಬಡತನದಲ್ಲಿದ್ದರೂ ಅವರು ಎಂದಿಗೂ ಹಣಕ್ಕಾಗಿ ಆಸೆಪಡಲಿಲ್ಲ.
- ಇಂಥಾ ಸತ್ವಶಾಲಿ ವ್ಯಕ್ತಿತ್ವ ಡಿವಿಜಿಗೆ ಬಂದದ್ದು ಕೇವಲ ಅವರ ಶೀಲ, ವಿವೇಕ, ನಿಸ್ಸಹತೆ, ಸ್ವಯಂ ಅರ್ಜಿತ ಪಾಂಡಿತ್ಯ, ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ, ಮಿರ್ಜಾರ ಕಾಲಕ್ಕೆ ಡಿವಿಜಿ ದೊಡ್ಡ ಮೇಧಾವಿಯೆಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.
- ಡಿವಿಜಿ ಅವರದ್ದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ, ಹೆಸರಾಂತ ಪತ್ರಕರ್ತರಾಗಿದ್ದರು.
- ಹಿರಿಯ ವೇದಾಂತಿಯಾಗಿದ್ದರು. ರಾಜ್ಯಶಾಸ್ತ್ರದಲ್ಲಿ ಅಳವಾದ ತಿಳಿವಳಿಕೆಯುಳ್ಳವರಾಗಿದ್ದರು.

ಚಟುವಟಿಕೆ–೩. **ಪ್ರಮುಖ ವಿಷಯಾಂಶಗಳ ಆಧರಿಸಿ ಡಿವಿಜಿ ಅವರ ವ್ಯಕ್ತಿತ್ವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಚಟುವಟಿಕೆ–೪.

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರವನ್ನು ನೋಡಿ ಉತ್ತರಿಸಿ.**

೧. ಡಿವಿಜಿ ಅವರ ಹುಟ್ಟೂರು ಯಾವುದು?

ಉತ್ತರ: ಡಿವಿಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಗೆ ಸೇರಿದ ಮುಳಬಾಗಿಲು.

ಉತ್ತರ:

೨. ಡಿವಿಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಯಾರು?

ಉತ್ತರ: ಡಿವಿಜಿಯವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಅಜ್ಜಿ ಸಾಕಮ್ಮ ಮತ್ತು ಸೋದರ ಮಾವ ತಿಮ್ಮಪ್ಪ.

ಉತ್ತರ:

೩. ಡಿವಿಜಿ ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಯಾರು?

ಉತ್ತರ: ಡಿವಿಜಿ ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ರಸೂಲ್ ಖಾನ್.

ಉತ್ತರ:

೪. ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ್ದ ಹುದ್ದೆ ಯಾವುದು?

ಉತ್ತರ: ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ದಿವಾನ ಹುದ್ದೆಯನ್ನು ಅಲಂಕರಿಸಿದ್ದರು.

ಉತ್ತರ:

೫. ಡಿವಿಜಿ ಅವರು ಸ್ಥಾಪಿಸಿದ ಸಂಸ್ಥೆ ಯಾವುದು?

ಉತ್ತರ: ಡಿವಿಜಿ ಅವರು ಸ್ಥಾಪಿಸಿದ ಸಂಸ್ಥೆ; ಗೋಖಲೆ ಸಾರ್ವಜನಿಕ ಸಂಸ್ಥೆ.

ಉತ್ತರ:

## ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

| "ಏನು ಬಂದಿರಿ ಗುಂಡಪ್ಪ?" | |
|---|---|
| ಆಯ್ಕೆ | ಈ ವಾಕ್ಯವನ್ನು ಲಕ್ಷ್ಮೀನಾರಾಯಣಭಟ್ಟ ಅವರು ಬರೆದಿರುವ 'ಸಾಹಿತ್ಯ ರತ್ನ ಸಂಪುಟ' ಕೃತಿಯಿಂದ ಆರಿಸಲಾಗಿರುವ 'ಸಾರ್ಥಕ ಬದುಕಿನ ಸಾಧಕ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ದಸರಾ ಉತ್ಸವ ಕುರಿತು ವರದಿ ಮಾಡಿದ್ದಕ್ಕಾಗಿ ಗುಂಡಪ್ಪನವರಿಗೆ ಸರ್ಕಾರದಿಂದ ಸಂಭಾವನೆ ಬಂದಾಗ ಅದನ್ನು ಇಷ್ಟಪಡದೆ ಡಿವಿಜಿ ಅವರು ಹಣವನ್ನು ಹಿಂದಿರುಗಿಸಲು ಸರ್.ಎಂ.ವಿಶ್ವೇಶ್ವರಯ್ಯ ಅವರ ಬಳಿಗೆ ಹೋದ ಸಂದರ್ಭದಲ್ಲಿ ಸರ್. ಎಂ. ವಿ ಅವರು ಡಿವಿಜಿಯವರನ್ನು ಆತ್ಮೀಯತೆಯಿಂದ ಹೀಗೆ ಪ್ರಶ್ನಿಸುತ್ತಾರೆ. |
| ಸ್ವಾರಸ್ಯ | ಮೈಸೂರು ಸರ್ಕಾರದ ದಿವಾನ ಹುದ್ದೆಯಲ್ಲಿದ್ದ ಸರ್.ಎಂ.ವಿಶ್ವೇಶ್ವರಯ್ಯನವರಂತಹವರೂ ಡಿವಿಜಿ ಅವರ ಮೇಲೆ ಹೊಂದಿದ್ದ ವಿಶ್ವಾಸ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ. |

ಚಟುವಟಿಕೆ– *೫.* ಮೇಲಿರುವ **ಮಾದರಿಯಂತೆ ನೋಡಿ ಬರೆಯಿರಿ.**

| "ಏನು ಬಂದಿರಿ ಗುಂಡಪ್ಪ?" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| ೨. "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?" | |
|---|---|
| ಆಯ್ಕೆ | ಈ ವಾಕ್ಯವನ್ನು ಲಕ್ಷ್ಮೀನಾರಾಯಣಭಟ್ಟ ಅವರು ಬರೆದಿರುವ 'ಸಾಹಿತ್ಯ ರತ್ನ ಸಂಪುಟ' ಕೃತಿಯಿಂದ ಆರಿಸಲಾಗಿರುವ 'ಸಾರ್ಥಕ ಬದುಕಿನ ಸಾಧಕ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ಒಮ್ಮೆ ಡಿವಿಜಿಯ ಬಂಧುಗಳೊಬ್ಬರ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಆರತಿ ಅಕ್ಷತೆಯ ಹೊತ್ತಾದರೂ ಹೆಂಡತಿ ಮನೆಯಲ್ಲೇ ಇದ್ದಾರೆ. ಆ ಸಂದರ್ಭದಲ್ಲಿ ಡಿವಿಜಿ ಅವರು ಶ್ರೀಮತಿಯವರನ್ನು ಹೀಗೆ ಪ್ರಶ್ನಿಸುತ್ತಾರೆ. |
| ಸ್ವಾರಸ್ಯ | ಡಿವಿಜಿಯವರು ನಿಜ ಸಂಗತಿ ತಿಳಿಯದೆ, ತಮ್ಮ ಹೆಂಡತಿ ಬಂಧುಗಳ ಮನೆಗೆ ಹೋಗುವುದಿಲ್ಲವೇ? ಎಂದು ಪ್ರಶ್ನಿಸುವುದು ಇಲ್ಲಿನ ಸ್ವಾರಸ್ಯವಾಗಿದೆ. |

| ‘‘ ನೀನು ಉತ್ಸವಕ್ಕೆ ಹೋಗುವುದಿಲ್ಲವೇ?" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| ‘‘ ನನ್ನ ಹತ್ತಿರ ಇರುವುದು ಇದೊಂದೇ ಸೀರೆ" | |
|---|---|
| ಆಯ್ಕೆ | ಈ ವಾಕ್ಯವನ್ನು ಲಕ್ಷ್ಮೀನಾರಾಯಣಭಟ್ಟ ಅವರು ಬರೆದಿರುವ 'ಸಾಹಿತ್ಯ ರತ್ನ ಸಂಪುಟ' ಕೃತಿಯಿಂದ ಆರಿಸಲಾಗಿರುವ 'ಸಾರ್ಥಕ ಬದುಕಿನ ಸಾಧಕ' ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ಡಿವಿಜಿ ಅವರ ಹೆಂಡತಿಯವರು ತಾವು ಬಂಧುಗಳ ಮನೆಯ ಉತ್ಸವಕ್ಕೆ ಹೋಗದಿರುವುದಕ್ಕೆ ಕಾರಣಗಳನ್ನು ಕೋಡುತ್ತಾ ಹೋದಾಗ ಡಿವಿಜಿ ಅವರು ಪಟ್ಟುಬಿಡದೆ ಸವಾಲು ಕೊಡುತ್ತಾ "ನಾನು ಮನೆಯಲ್ಲಿರುತ್ತೇನೆ. ನೀನು ಹೋಗಿಬಾ" ಎಂದು ಹೇಳಿದ ಸಂದರ್ಭದಲ್ಲಿ ಅವರ ಶ್ರೀಮತಿಯವರು "ನನ್ನ ಹತ್ತಿರ ಇರುವುದು ಇದೊಂದೇ ಸೀರೆ" ಎಂದು ನಿಜಸಂಗತಿ ಒಪ್ಪಿಕೊಳ್ಳುತ್ತಾರೆ. |
| ಸ್ವಾರಸ್ಯ | ಹಣಕ್ಕೆ ಆಸೆಪಡದೆ ಬಡತನದಲ್ಲೇ ಸರಳ ಜೀವನ ನಡೆಸಿದ ಡಿವಿಜಿಯವರ ಗೌರವ ಕಾಯಬೇಕೆಂದು ಬಯಸಿದ ಅವರ ಶ್ರೀಮತಿಯವರ ಸದ್ಗುಣ ಈ ಸಂದರ್ಭದಲ್ಲಿ ಸ್ವಾರಸ್ಯಕರವಾಗಿ ಮೂಡಿ ಬಂದಿದೆ. |

| ‘‘ ನನ್ನ ಹತ್ತಿರ ಇರುವುದು ಇದೊಂದೇ ಸೀರೆ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| ‘‘ ಹೊಲಿ ನಿನ್ನ ತುಟಿಗಳನ್ನು ಮಂಕುತಿಮ್ಮ" | |
|---|---|
| ಆಯ್ಕೆ | ಈ ವಾಕ್ಯವನ್ನು ಲಕ್ಷ್ಮೀನಾರಾಯಣಭಟ್ಟ ಅವರು ಬರೆದಿರುವ ‘ಸಾಹಿತ್ಯ ರತ್ನ ಸಂಪುಟ’ ಕೃತಿಯಿಂದ ಆರಿಸಲಾಗಿರುವ ‘ಸಾರ್ಥಕ ಬದುಕಿನ ಸಾಧಕ’ ಎಂಬ ಗದ್ಯದಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ಲೇಖಕರು ಡಿವಿಜಿ ಅವರ ‘ಮಂಕುತಿಮ್ಮನ ಕಗ್ಗ’ ಕೃತಿಯಿಂದ ಆರಿಸಲಾಗಿರುವ ಕವನದ ಸಾಲುಗಳನ್ನು ಉದಾಹರಿಸಿದ್ದು, ‘ಭೂಮಿಯಲ್ಲಿ ಬೀಜ ಮೊಳಕೆ ಒಡೆದು ಬೆಳೆದು ಫಲಬಿಟ್ಟರೂ, ಇಡೀ ಭೂಮಿಗೆ ಬೆಳಕನ್ನು ಕೊಡುವ ಸೂರ್ಯಚಂದ್ರರು ತಾವು ಬೆಳಕು ನೀಡಿದರೂ ಗರ್ವ ಪಡುವುದಿಲ್ಲ. ಆದ್ದರಿಂದ ಗರ್ವ ಪಡುವ ಮಾನವನನ್ನು ಕವಿ ನಿನ್ನ ತುಟಿಗಳನ್ನು ಹೊಲಿದುಕೋ’ ಎಂದು ಈ ಸಂದರ್ಭದಲ್ಲಿ ಹೇಳಿದ್ದಾರೆ. |
| ಸ್ವಾರಸ್ಯ | ಸ್ವಲ್ಪ ಮಾಡಿದರೂ ಏನೋ ದೊಡ್ಡದ್ದನ್ನು ಮಾಡಿದೆನೆಂದು ಗರ್ವ ಪಡುವ ಮಾನವನನ್ನು ನಿನ್ನ ಬಾಯಿಮುಚ್ಚು ಎಂದು ಇಲ್ಲಿ ಪರೋಕ್ಷವಾಗಿ, ಸ್ವಾರಸ್ಯವಾಗಿ ಹೇಳಲಾಗಿದೆ. |

| ‘‘ ನನ್ನ ಹತ್ತಿರ ಇರುವುದು ಇದೊಂದೇ ಸೀರೆ " | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| ‘‘ ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ " | |
|---|---|
| ಆಯ್ಕೆ | ಈ ವಾಕ್ಯವನ್ನು ಲಕ್ಷ್ಮೀನಾರಾಯಣಭಟ್ಟ ಅವರು ಬರೆದಿರುವ 'ಸಾಹಿತ್ಯ ರತ್ನ ಸಂಪುಟ' ಕೃತಿಯಿಂದ ಆರಿಸಲಾಗಿರುವ ‘ಸಾರ್ಥಕ ಬದುಕಿನ ಸಾಧಕ’ ಎಂಬ ಗದ್ಯದಿಂದ ಆಯ್ದುಕೊಳ್ಳಲಾಗಿದೆ. |
| ಸಂದರ್ಭ | ಲೇಖಕರು ಡಿವಿಜಿ ಅವರ ‘ಮಂಕುತಿಮ್ಮನ ಕಗ್ಗ’ ಕೃತಿಯಿಂದ ಆರಿಸಲಾಗಿರುವ ಕವನದ ಸಾಲುಗಳನ್ನು ಉದಾಹರಿಸ ಲಾಗಿದ್ದು ಮಾನವನು ಎಲ್ಲರೊಳಗೆ ಒಂದಾಗಿ ಹೇಗೆ ಬಾಳಬೇಕೆಂಬುದನ್ನು ತಿಳಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ. |
| ಸ್ವಾರಸ್ಯ | ದೀನ–ದುರ್ಬಲ ವರ್ಗದವರ ಕಷ್ಟ–ನೋವುಗಳಿಗೆ ಬೆಲ್ಲ–ಸಕ್ಕರೆಯಂತೆ ಸಿಹಿಯಾಗಿ ಸ್ಪಂದಿಸಬೇಕೆಂಬುದು ಇಲ್ಲಿನ ಸ್ವಾರಸ್ಯವಾಗಿದೆ. |

| ೫. ‘‘ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ" | |
|---|---|
| ಆಯ್ಕೆ | |
| ಸಂದರ್ಭ | |

| | |
|---|---|
| | |
| ಸ್ವಾರಸ್ಯ | |

**ಬಿಟ್ಟ ಸ್ಥಳ ತುಂಬಿ.**

೧. ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದವರು ಮಿರ್ಜಾ ಇಸ್ಮಾಯಿಲ್

೨. ಮಿರ್ಜಾ ಅವರ ಕಾಲಕ್ಕೆ ಡಿವಿಜಿ ದೊಡ್ಡ ಮೇಧಾವಿ ಎಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

೩. ಮುಳಬಾಗಿಲು ಕೋಲಾರ ಜಿಲ್ಲೆಗೆ ಸೇರಿದೆ.

೪. ಡಿವಿಜಿ ಅವರು ಮುಳಬಾಗಿಲಿನ ಆಂಗ್ಲ ವರ್ನಾಕ್ಯುಲರ್ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಪೂರ್ತಿಗೊಳಿಸಿದರು.

೫ .ಡಿವಿಜಿ ಅವರು ಕನ್ನಡ ಸಾರಸ್ವತ ಲೋಕದ ಭೀಷ್ಮ ಎಂದು ಕರೆಸಿಕೊಂಡರು.

ಚಟುವಟಿಕೆ–೬. **ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

| |
|---|
| ೧. ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದವರು. |
| ೨. ಮಿರ್ಜಾ ಅವರ ಕಾಲಕ್ಕೆ ಡಿವಿಜಿ ದೊಡ್ಡ ಎಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು. |
| ೩. ಮುಳಬಾಗಿಲು ಜಿಲ್ಲೆಗೆ ಸೇರಿದೆ. |
| ೪. ಡಿವಿಜಿ ಅವರು ಮುಳಬಾಗಿಲಿನ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಪೂರ್ತಿಗೊಳಿಸಿದರು. |
| ೫. ಡಿವಿಜಿ ಅವರು ಕನ್ನಡ ಸಾರಸ್ವತ ಲೋಕದ ಎಂದು ಕರೆಸಿಕೊಂಡರು. |

# ನಾಮಪದ

ಒಂದು ವಸ್ತು, ಒಬ್ಬ ವ್ಯಕ್ತಿ, ಒಂದು ಸ್ಥಳದ ಹೆಸರಾಗಿರಬಹುದು ಅಥವಾ ಒಂದು ಗುಂಪನ್ನು ಸೂಚಿಸುವ ಪದವಾಗಿರಬಹುದು ಅಥವಾ ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ ಇತ್ಯಾದಿಗಳನ್ನು ಸೂಚಿಸುವ ಪದಗಳಾಗಿರಬಹುದು. ಅವುಗಳನ್ನು ನಾಮಪದಗಳೆಂದು ಕರೆಯುತ್ತೇವೆ.

ನಾಮಪದದ ವಿಧಗಳು :

೧. ವಸ್ತುವಾಚಕ ಅಥವಾ ನಾಮವಾಚಕ : ಯಾವುದೇ ವಸ್ತು, ವ್ಯಕ್ತಿ, ಪ್ರಾಣಿ ಹಾಗೂ ಸ್ಥಳಗಳಿಗೆ ಇರುವ ಹೆಸರುಗಳನ್ನು 'ವಸ್ತುವಾಚಕ'ಗಳೆನ್ನುವರು. ಇವುಗಳಲ್ಲಿ ಮೂರುವಿಧ.

| ವಸ್ತುವಾಚಕ ಅಥವಾ ನಾಮವಾಚಕದ ಮೂರು ವಿಧ | |
|---|---|
| ರೂಢನಾಮ | ಅನಾದಿಕಾಲದಿಂದ ರೂಢಿಯಾಗಿ ಬಂದಿರುವ ಸಾಮಾನ್ಯ ಹೆಸರುಗಳನ್ನು 'ರೂಢನಾಮ' ಎಂದು ಕರೆಯುತ್ತಾರೆ. ಉದಾ : ಹೆಂಗಸು, ಗಂಡಸು, ಮಕ್ಕಳು, ಜನರು, ನದಿ, ಬೆಟ್ಟ ಇತ್ಯಾದಿ |
| ಅಂಕಿತನಾಮ | ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡಿರುವ ಹೆಸರುಗಳನ್ನು 'ಅಂಕಿತನಾಮ' ಎಂದು ಕರೆಯುತ್ತಾರೆ. ಉದಾ : ಗಣೇಶ, ಗಂಗಾ, ರಾಮ, ರಹೀಮ, ಧಾರವಾಡ ಇತ್ಯಾದಿ. |
| ಅನ್ವರ್ಥನಾಮ | ವಸ್ತುವಿನ ರೂಪ, ಗುಣ, ವೃತ್ತಿ, ಸ್ವಭಾವಾದಿ ವಿಶೇಷವಾದ ಹಾಗೂ ಅರ್ಥಕ್ಕೆ ಅನುಸಾರ ನೀಡುವ ಹೆಸರುಗಳಿಗೆ 'ಅನ್ವರ್ಥನಾಮ' ಎಂದು ಕರೆಯುತ್ತಾರೆ. ಉದಾ : ಜಾಣ, ಪಂಡಿತ, ಶಿಕ್ಷಕ, ವಿದ್ಯಾರ್ಥಿ, ವಿಜ್ಞಾನಿ – ಇತ್ಯಾದಿ. |

ಚಟುವಟಿಕೆ–೭. **ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

| ವಸ್ತುವಾಚಕ ಅಥವಾ ನಾಮವಾಚಕದ ಮೂರುವಿಧ. | |
|---|---|
| ರೂಢನಾಮ | |
| ಅಂಕಿತನಾಮ | |
| ಅನ್ವರ್ಥನಾಮ | |

**ಚಟುವಟಿಕೆ–೮. ಈ ಕೆಳಗಿನ ಪದಗಳಲ್ಲಿ ರೂಢನಾಮ, ಅಂಕಿತನಾಮ, ಅನ್ವರ್ಥಕನಾಮ ಪದಗಳನ್ನು ವಿಂಗಡಿಸಿ ಬರೆಯಿರಿ.**

ಜಾಣ, ಪಂಡಿತ, ಗಣೇಶ, ಗಂಗಾ, ರಾಮ, ಹೆಂಗಸು, ಗಂಡಸು, ನದಿ, ಬೆಟ್ಟ, ರಹೀಮ, ಧಾರವಾಡ, ಜನರು, ಶಿಕ್ಷಕ, ವಿದ್ಯಾರ್ಥಿ, ವಿಜ್ಞಾನಿ ಮಕ್ಕಳು.

ರೂಢನಾಮ :

ಅಂಕಿತನಾಮ :

ಅನ್ವರ್ಥನಾಮ :

೨. ಗುಣವಾಚಕ: ವಸ್ತು ಅಥವಾ ವ್ಯಕ್ತಿಗಳ ಗುಣ, ರೀತಿ ಸ್ವಭಾವಗಳನ್ನು ತಿಳಿಸುವ ವಿಶೇಷಣಗಳಿಗೆ 'ಗುಣವಾಚಕ' ಎನ್ನುವರು. ವಿಶೇಷಣ ಗಳನ್ನು ಯಾವುದಕ್ಕೆ ಹೇಳಲಾಗುತ್ತದೋ ಅಂಥ ಶಬ್ದಗಳನ್ನು ವಿಶೇಷ್ಯಗಳು ಎನ್ನುತ್ತಾರೆ. ಉದಾ :

| ಗುಣವಾಚಕ | |
|---|---|
| ವಿಶೇಷಣ | ವಿಶೇಷ್ಯ |
| ಸಿಹಿ | ಹಣ್ಣು |
| ದೊಡ್ಡ | ನದಿ |
| ಒಳ್ಳೆಯ | ಹುಡುಗಿ |

ಚಟುವಟಿಕೆ–೮. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.

| ಗುಣವಾಚಕ | |
|---|---|
| ವಿಶೇಷಣ | ವಿಶೇಷ್ಯ |
| | |
| | |
| | |

೩. ಸಂಖ್ಯಾವಾಚಕ : ಸಂಖ್ಯೆಯನ್ನು ಹೇಳುವ ಶಬ್ದಗಳನ್ನು ಸಂಖ್ಯಾ ವಾಚಕಗಳೆನ್ನುವರು.

ಉದಾ : ಒಂದು, ಎರಡು, ಮೂರು, ಹತ್ತು, ಸಾವಿರ, ಲಕ್ಷ, ಕೋಟಿ ಇತ್ಯಾದಿ.

**ಚಟುವಟಿಕೆ–೯. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

ಸಂಖ್ಯಾವಾಚಕ:

೪. ಸಂಖ್ಯೇಯ ವಾಚಕ : ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ದಗಳೆಲ್ಲಾ ಸಂಖ್ಯೇಯ ವಾಚಕಗಳು ಎನ್ನುತ್ತಾರೆ.

ಉದಾ: ಒಂದನೇ, ಹತ್ತನೇ, ಹನ್ನೊಂದನೇ, ಇಪ್ಪತ್ತೊಂದನೇ ಶತಮಾನ, ಮೂರನೆಯ, ಇತ್ಯಾದಿ.

ಚಟುವಟಿಕೆ–೧೦. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.

ಸಂಖ್ಯೇಯ ವಾಚಕ :

| ಸಂಖ್ಯಾವಾಚಕ | ಸಂಖ್ಯೇಯ ವಾಚಕ |
|---|---|
| ಎರಡು | ಇಬ್ಬರು, ಎರಡನೆಯ. |
| ಮೂರು | ಮೂವರು, ಮೂರನೆಯ, ಮೂರರಿಂದ. |
| ಐದು | ಐವರು, ಐದನೆಯ. |

**ಚಟುವಟಿಕೆ–೧೧. ಮೇಲಿನ_ಮಾದರಿಯಂತೆ ನೋಡಿ ಬರೆಯಿರಿ.**

| ಸಂಖ್ಯಾವಾಚಕ | ಸಂಖ್ಯೇಯ ವಾಚಕ |
|---|---|
| | |
| | |
| | |

೫. ಭಾವನಾಮ : ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳನ್ನು 'ಭಾವನಾಮ' ಎನ್ನುತ್ತಾರೆ. 'ಭಾವ' ಎಂದರೆ ಇರುವಿಕೆ, ಸ್ಥಿತಿ ಎಂದು ಅರ್ಥೈಸಬಹುದು. ಉದಾ : ಬಿಳಿಯದರ ಭಾವ–ಬಿಳುಪು, ಆಡುವುದರ ಭಾವ–ಆಟ

**ಚಟುವಟಿಕೆ–೧೨. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

ಭಾವನಾಮ:

೬. ಪರಿಮಾಣ ವಾಚಕ: ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು 'ಪರಿಮಾಣ ವಾಚಕ' ಎನ್ನುತ್ತಾರೆ.

ಉದಾ : ಹಲವು, ಕೆಲವು. (ಹಲವು ನದಿಗಳು, ಕೆಲವು ಹಣ್ಣುಗಳು)

ಗಾತ್ರ– ಅಷ್ಟು, ಇಷ್ಟು (ಗುಡ್ಡದಷ್ಟು, ಆನೆಯಷ್ಟು)

ಅಳತೆ – ಅಷ್ಟು, ಇಷ್ಟು (ಅಷ್ಟು ದೂರ, ಇಷ್ಟು ಪುಸ್ತಕಗಳು) – ಇತ್ಯಾದಿ.

ಪರಿಮಾಣ ವಾಚಕ :

೭. ಪ್ರಕಾರ ವಾಚಕ: ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳನ್ನು 'ಪ್ರಕಾರ ವಾಚಕ' ಎನ್ನುವರು. ಇವು ಒಂದು ಬಗೆಯ ಗುಣವಾಚಕಗಳೇ ಆಗಿವೆ. ಉದಾ : ಅಂಥ, ಅಂಥದು, ಅಂತಹುದು, ಇಂಥ, ಇಂಥದು, ಇಂತಹುದು, ಎಂತಹ ಇತ್ಯಾದಿ.

ಪ್ರಕಾರ ವಾಚಕ:

೮. ದಿಗ್ವಾಚಕಗಳು: ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳನ್ನು 'ದಿಗ್ವಾಚಕ' ಎನ್ನುವರು. ಉದಾ: ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ಆಗ್ನೆಯ, ವಾಯವ್ಯ, ನೈರುತ್ಯ ಇತ್ಯಾದಿ.

ದಿಗ್ವಾಚಕಗಳು:

## ಸರ್ವನಾಮ

ನಾಮಪದಗಳ ಬದಲಾಗಿ ಬಳಸುವ ಪದಗಳಿಗೆ ಸರ್ವನಾಮಗಳು ಎನ್ನುವರು.

ಉದಾ : ಅವನು, ಅವಳು, ಅದು. ಇದು, ಅವರು, ಇವರು, ಇವುಗಳಿಂದ ಇತ್ಯಾದಿ.

೯. ಸರ್ವನಾಮ :

ಸರ್ವನಾಮಗಳನ್ನು 'ಪುರುಷಾರ್ಥಕ ಸರ್ವನಾಮ', 'ಆತ್ಮಾರ್ಥಕ ಸರ್ವನಾಮ', 'ಪ್ರಶ್ನಾರ್ಥಕ ಸರ್ವನಾಮ' ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು.

೧. ಪುರುಷಾರ್ಥಕ ಸರ್ವನಾಮ : ಪುರುಷಾರ್ಥಕ ಸರ್ವನಾಮಗಳಲ್ಲಿ ಮೂರು ವಿಧ.

ಅ. ಉತ್ತಮ ಪುರುಷ : ಮಾತನಾಡುವ ವ್ಯಕ್ತಿ ತನ್ನನ್ನು ನಿರ್ದೇಶಿಸಿಕೊಳ್ಳುವ ಸರ್ವನಾಮಗಳನ್ನು 'ಉತ್ತಮ ಪುರುಷ' ಎನ್ನಲಾಗುತ್ತದೆ.  ಉದಾ : ನಾನು, ನಾವು.

ಆ. ಮಧ್ಯಮ ಪುರುಷ : ಮಾತನಾಡುವವನು ತನ್ನ ಮುಂದಿರುವ ವ್ಯಕ್ತಿಯನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಮಧ್ಯಮ ಪುರುಷ' ಎನ್ನಲಾಗುತ್ತದೆ.  ಉದಾ : ನೀನು, ನೀವು.

ಇ. ಪ್ರಥಮ ಪುರುಷ : ಮಾತನಾಡುವವನಿಂದ ದೂರವಿರುವ ವ್ಯಕ್ತಿ ಇಲ್ಲವೇ ವಸ್ತುವನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಪ್ರಥಮ ಪುರುಷ' ಎನ್ನಲಾಗುತ್ತದೆ. ಉದಾ : ಅವರು, ಅವನು, ಅವಳು, ಅದು, ಅವು, ಇದು, ಇವು.

ಅ. ಉತ್ತಮ ಪುರುಷ =

ಆ. ಮಧ್ಯಮ ಪುರುಷ =

ಇ. ಪ್ರಥಮ ಪುರುಷ =

೨. ಆತ್ಮಾರ್ಥಕ ಸರ್ವನಾಮ : ಮಾತನಾಡುವವನು ತನ್ನನ್ನು ಹಾಗೂ ಇತರರನ್ನು ಗೌರವ ಸೂಚಕವಾಗಿ ಆತ್ಮಪ್ರಶಂಸೆಯಿಂದ ಬಳಸುವ ಸರ್ವನಾಮಗಳನ್ನು ಆತ್ಮಾರ್ಥಕ ಸರ್ವನಾಮ ಎನ್ನುತ್ತಾರೆ. ಉದಾ : ತಾನು, ತಾವು, ತನ್ನ, ತಮ್ಮ.

ಆತ್ಮಾರ್ಥಕ ಸರ್ವನಾಮ:

೩. ಪ್ರಶ್ನಾರ್ಥಕ ಸರ್ವನಾಮ : ಪ್ರಶ್ನೆಯಿಂದ ಕೂಡಿದ ಎಲ್ಲ ಸರ್ವನಾಮಗಳನ್ನು ಪ್ರಶ್ನಾರ್ಥಕ ಸರ್ವನಾಮ ಎನ್ನಲಾಗುತ್ತದೆ.

ಉದಾ : ಯಾವುವು? ಯಾವುದು? ಯಾರು? ಏತರದು? ಆವುದು?

ಪ್ರಶ್ನಾರ್ಥಕ ಸರ್ವನಾಮ:

ಚಟುವಟಿಕೆ–೧೩. **ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ನಾಮಪದ ಎಂದರೇನು?

೨. ಭಾವನಾಮ ಎಂದರೇನು?

೩. ಸರ್ವನಾಮ ಎಂದರೇನು? ವಿಧಗಳಾವುವು?

೪. ಪುರುಷಾರ್ಥಕ ಸರ್ವನಾಮಗಳಲ್ಲಿ ಎಷ್ಟು ವಿಧ?

**ಅ. ಕೊಟ್ಟಿರುವ ವಾಕ್ಯಗಳಲ್ಲಿರುವ ನಾಮಪದಗಳನ್ನು ಆರಿಸಿ ಬರೆಯಿರಿ.**

೧. ಡಿವಿಜಿಯ ಊರು ಮುಳಬಾಗಿಲು. ೨. ಬೆಂಗಳೂರಿನ ರೈಲಿನಲ್ಲಿ ಕೂರಿಸುತ್ತೇನೆ.

೩. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲವದು. ೪. ಡಿವಿಜಿಯ ಬಂಧುಗಳ ಮನೆಯಲ್ಲಿ ಒಂದು ಉತ್ಸವವು ನಡೆಯಿತು.

**ನಾಮಪದಗಳು:**

## ವಿಭಕ್ತಿ ಪ್ರತ್ಯಯ:

ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆದು ಅದು ಯಾವ ವಿಭಕ್ತಿ ಎಂಬುದನ್ನು ಬರೆಯಿರಿ.ದಿವಾನರನ್ನು. ದಿನದಿನದ , ಡಿವಿಜಿಗೆ, ಬಲದಿಂದ, ವಲಯದಲ್ಲಿ, ಮಂಕುತಿಮ್ಮನ, ಶಿಕ್ಷಣವನ್ನು, ಓದಿಗೆ, ಸಹಾಯಕ್ಕೆ. ಬಂಡಿಯಲ್ಲಿ, ದಯೆಯಿಂದ, ರಸೂಲ್‌ಖಾನನ.

ಮಾದರಿ– ದಿವಾನರನ್ನು: ದಿವಾನರು+ಅನ್ನು= ದ್ವಿತೀಯಾ ವಿಭಕ್ತಿ.

| ವಿಭಕ್ತಿಗಳು | ವಿಭಕ್ತಿ ಪ್ರತ್ಯಯಗಳು | ಕಾರಕಾರ್ಥ | ನಾಮಪದ |
|---|---|---|---|
| ಪ್ರಥಮಾ | ಉ | ಕರ್ತೃ ಅರ್ಥ | ಮನೆಯು |
| ದ್ವಿತೀಯಾ | ಅನ್ನು | ಕರ್ಮಾರ್ಥ | ಮನೆಯನ್ನು |
| ತೃತೀಯಾ | ಇಂದ | ಕರಣಾರ್ಥ (ಸಾಧನ) | ಮನೆಯಿಂದ |
| ಚತುರ್ಥೀ | ಕ್ಕೆ, ಗೆ. ಇಕೆ, | ಸಂಪ್ರದಾನ (ಕೂಡುವಿಕೆ) | ಮನೆಗೆ |
| ಪಂಚಮೀ | ದೆಸೆಯಿಂದ | ಅಪಾದಾನ (ಅಗಲುವಿಕೆ) | ಮನೆಯ ದೆಸೆಯಿಂದ |
| ಷಷ್ಠಿ | ಅ | ಸಂಬಂಧ | ಮನೆಯ |
| ಪಂಚಮೀ | ಅಲ್ಲಿ | ಅಧಿಕರಣ | ಮನೆಯಲ್ಲಿ |

**ಚಟುವಟಿಕೆ–೧೪.**

| | | | |
|---|---|---|---|
| ದಿನದಿನದ = | ವಲಯದಲ್ಲಿ = | ಓದಿಗೆ = | ಡಿವಿಜಿಗೆ = |
| ಮಂಕುತಿಮ್ಮನ = | ಸಹಾಯಕ್ಕೆ = | ಬಲದಿಂದ = | ಶಿಕ್ಷಣವನ್ನು = |
| ಬಂಡಿಯಲ್ಲಿ = | ದಯೆಯಿಂದ = | ರಸೂಲ್‌ಖಾನನ = | |

ಚಟುವಟಿಕೆ–೧೫.

**ಈ ಗದ್ಯ ಭಾಗದಲ್ಲಿ ಬಂದಿರುವ ಪ್ರಮುಖ ನಾಮಪದ ಮತ್ತು 'ಸರ್ವನಾಮ' ಪದಗಳನ್ನು ಸಂಗ್ರಹಿಸಿ ಪಟ್ಟಿ ಮಾಡಿ.**

| |
|---|
| ನಾಮಪದಗಳು: |
| ಸರ್ವನಾಮ: |

## ಪದ್ಯ ಭಾಗ–**೨. ಭಾರತೀಯತೆ.**



–ಕೆ.ಎಸ್. ನರಸಿಂಹಸ್ವಾಮಿ

**ಚಟುವಟಿಕೆ–೧. ಈ ಚಿತ್ರ ನೋಡಿ, ನಿಮ್ಮ ಅಭಿಪ್ರಾಯ ಬರೆಯಿರಿ.**






| ಕೆ.ಎಸ್. ನರಸಿಂಹಸ್ವಾಮಿ | |
|---|---|
| ಜನನ/ ಸ್ಥಳ | ೨೬–೦೧–೧೯೧೫ ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಕಿಕ್ಕೇರಿಯಲ್ಲಿ ಜನಿಸಿದರು. |
| ಕವನ ಸಂಕಲನಗಳು | ಮೊದಲ ಕವನ ಸಂಕಲನ– ಮೈಸೂರು ಮಲ್ಲಿಗೆ ೧೯೪೨ರಲ್ಲಿ ಪ್ರಕಟವಾಯಿತು. ಶಿಲಾಲತೆ, ಐರಾವತ, ನವಪಲ್ಲವ, ಇರುವಂತಿಗೆ, ದೀಪದಮಲ್ಲಿ, ಮನೆಯಿಂದ ಮನೆಗೆ, ತೆರೆದ ಬಾಗಿಲು ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. |
| ಅಧ್ಯಕ್ಷತೆ | ೧೯೯೦ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. |
| ಪ್ರಶಸ್ತಿಗಳು | ೧೯೭೭ ರಲ್ಲಿ ಇವರ ತೆರೆದ ಬಾಗಿಲು ಎಂಬ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರ ದುಂಡು ಮಲ್ಲಿಗೆ ಕವನ ಸಂಕಲನಕ್ಕೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ ಲಭಿಸಿದೆ. ಇವರನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರೇಮಕವಿ ಎಂದೇ ಗುರುತಿಸಿದೆ. |
| ನಿಧನ | ೨೦೦೩ರಲ್ಲಿ ದೈವಾಧೀನರಾದರು. |
| ಆಯ್ಕೆ | ಭಾರತೀಯತೆ ಕವನವನ್ನು ಕೆ. ಎಸ್. ನರಸಿಂಹಸ್ವಾಮಿ ಅವರ ನವಪಲ್ಲವ ಕವನ ಸಂಕಲನ ದಿಂದ ಆರಿಸಿ ಕೊಂಡಿದೆ. |

**ಚಟುವಟಿಕೆ–೨. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

| ಕೆ.ಎಸ್. ನರಸಿಂಹಸ್ವಾಮಿ | |
|---|---|
| ಜನನ/ಸ್ಥಳ | |
| ಕವನ ಸಂಕಲನಗಳು | |
| ಅಧ್ಯಕ್ಷತೆ | |
| ಪ್ರಶಸ್ತಿಗಳು | |
| ನಿಧನ | |
| ಆಯ್ಕೆ | |

**ಪ್ರಮುಖ ವಿಷಯಾಂಶಗಳು:**

- ಭಾರತೀಯತೆ ಕವನದಲ್ಲಿ ಕವಿ ಭಾರತೀಯರ ಏಕತೆಯನ್ನು ಕುರಿತು ಅಭಿಮಾನದಿಂದ ಹೇಳಿದ್ದಾರೆ.
- ಭಾರತದೇಶದ ಆಕಾಶದೆತ್ತರದ ಪರ್ವತ ಪ್ರದೇಶಗಳಲ್ಲಿ ಕರಾವಳಿಯ ತೀರಗಳಲ್ಲಿ, ಬಯಲ ಪ್ರದೇಶಗಳಲ್ಲಿ ಕೋಟ್ಯಾಂತರ ಜನ ಭಾರತೀಯರು ವಾಸಿಸುತ್ತಿದ್ದು ಅವರೆಲ್ಲರ ಕಣ್ಣುಗಳು ಬೇರೆಯಾದರೂ ನೋಟ ಒಂದೇ ಆಗಿದೆ.
- ನಮ್ಮ ನಾಡಿನಲ್ಲಿ ಹಲವಾರು ಗಡಿ ಪ್ರದೇಶಗಳು, ಎತ್ತರವಾದ ಬಾನು ಕಡಲುಗಳಿವೆ. ಯೋಧರು ನಮ್ಮ ಧ್ವಜವನ್ನು ಅಲ್ಲಿ ಹಾರಿಸುತ್ತಿದ್ದಾರೆ.
- ನಮ್ಮ ತಾಯಿ ಭಾರತಾಂಬೆಯು ನಮ್ಮೆಲ್ಲರನ್ನು ಒಂದೇ ತೊಟ್ಟಿಲಿನಲ್ಲಿ ಪೊರೆಯುತ್ತಿದ್ದಾಳೆ.
- ಭಾರತೀಯರ ಭಾಷೆಗಳು ಬೇರೆ ಬೇರೆಯಾದರೂ ಭಾವನೆಗಳು ಒಂದೇ ಆಗಿದೆ. ಹಾಗೂ ತಾಯ್ನಾಡಿಗಾಗಿ ಪ್ರಾಣ ತ್ಯಾಗ ಮಾಡಿರುವ ಅನೇಕ ಹುತಾತ್ಮರು, ನಮ್ಮ ದೇಶದಲ್ಲಿದ್ದಾರೆ.
- ನಾವು ಕಷ್ಟದಲ್ಲಿದ್ದರೂ ಪರರ ಕಷ್ಟಗಳಿಗೆ ಮಿಡಿಯುವ ಸ್ವಭಾವ ಮತ್ತು ಸಂಸ್ಕೃತಿ ನಮ್ಮದಾಗಿದೆ.
- ಬಿರುಗಾಳಿಯೆಂಬ ಕಷ್ಟದಲ್ಲಿಯೂ ನಾವೂ ನಮ್ಮ ಗುರಿಯ ಬೆಳಕಿನೆಡೆಗೆ ಸಾಗುತ್ತದ್ದೇವೆ.
- ಯಾವುದೇ ರಾಜ್ಯದಲ್ಲಿದ್ದರೂ ನಾವು ಒಂದೇ, ನಾವೆಲ್ಲರೂ ಭಾರತೀಯರು ಎಂದು ಕವಿ ಅಭಿಮಾನದಿಂದ ಹೇಳಿದ್ದಾರೆ.

ಚಟುವಟಿಕೆ–೩. ಪ್ರಮುಖ ವಿಷಯಾಂಶಗಳ ಆಧರಿಸಿ ಭಾರತೀಯತೆ ಪದ್ಯದ ಸಾರಾಂಶ ನಿಮ್ಮ ಮಾತುಗಳಲ್ಲಿ ಬರೆಯಿರಿ.

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

೧. ಪರ್ವತ ಹಿಮ ಯಾವ ಎತ್ತರಕ್ಕೆ ಎದ್ದು ನಿಂತಿದೆ?

ಉತ್ತರ: ಪರ್ವತ ಹಿಮ ಆಕಾಶದ ಎತ್ತರಕ್ಕೆ ಎದ್ದು ನಿಂತಿದೆ

೨. ಪೆರ್ದೆರೆಗಳು ಯಾವುದಕ್ಕೆ ಮುತ್ತನಿಡುತ್ತಿವೆ?

ಉತ್ತರ: ಪೆರ್ದೆರೆಗಳು ಕರಾವಳಿಗೆ ಮುತ್ತನಿಡುತ್ತಿವೆ.

೩. ಹಸಿರು ದೀಪವನ್ನು ಎಲ್ಲಿ ಹಚ್ಚಲಾಗಿದೆ?

ಉತ್ತರ: ಹಸಿರು ದೀಪವನ್ನು ಬಯಲ ತುಂಬಾ ಹಚ್ಚಲಾಗಿದೆ.

೪. ಯಂತ್ರಘೋಷ ಏಳುತ್ತಿರುವ ಬಗೆ ಹೇಗೆ?

ಉತ್ತರ: ನೀಲಿಯಲ್ಲಿ ಹೊಗೆಯ ಚೆಲ್ಲಿ ಯಂತ್ರಘೋಷ ಏಳುತ್ತಿದೆ.

೫. ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರುಯಾರು?

ಉತ್ತರ: ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ನಮ್ಮ ಸೈನಿಕರು.

೬. ನಮ್ಮ ಪಯಣ ಎತ್ತ ಸಾಗಿದೆ?

ಉತ್ತರ: ನಮ್ಮ ಪಯಣ ಗುರಿಯ ಕಡೆಗೆ ಸಾಗಿದೆ.

ಚಟುವಟಿಕೆ–೩. ಮೇಲಿನ ಮಾದರಿಯಂತೆ, ಪ್ರಶ್ನೆ ಸಂಖ್ಯೆಗಳಿಗೆ ಮುಂದೆ ಉತ್ತರವನ್ನು ಪುನಃ ಬರೆದು ರೂಢಿಸುವುದು.

೧.

೨.

೩.

೪.

೫.

೬.

## ಸಂದರ್ಭಾನುಸಾರ ವಿವರಿಸಿ.

| ೧. "ಕಣ್ಣು ಬೇರೆ, ನೋಟವೊಂದು" | |
|---|---|
| ಆಯ್ಕೆ | ಪ್ರಸ್ತುತ ವಾಕ್ಯವನ್ನು ಕೆ. ಎಸ್. ನರಸಿಂಹಸ್ವಾಮಿ ಅವರ ನವಪಲ್ಲವ ಕವನ ಸಂಕಲನದಿಂದ ಆಯ್ದ 'ಭಾರತೀಯತೆ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ಭಾರತ ದೇಶದ ಪರ್ವತದ ತಪ್ಪಲು ಪ್ರದೇಶಗಳಲ್ಲಿ, ಕರಾವಳಿ ಪ್ರದೇಶಗಳಲ್ಲಿ, ಹಸಿರಾದ ಬಯಲು ನಾಡಿನಲ್ಲಿ ನದಿ ತೀರ ಗಳಲ್ಲಿ, ನೀಲಿ ಹೊಗೆ ಕಾರುವ ಯಂತ್ರಘೋಷಗಳು ಏಳುವಲ್ಲಿ, ಎಲ್ಲಡೆ ವಾಸಿಸುವ ಕೋಟ್ಯಾಂತರ ಜನರ ಕಣ್ಣು ಬೇರೆ–ಬೇರೆಯಾದರೂ ನೋಟವು ಒಂದೇ ಆಗಿದೆ ಎನ್ನುವ ಸಂದರ್ಭದಲ್ಲಿ ಕವಿ ಈ ಮೇಲಿನ ವಾಕ್ಯವನ್ನು ಹೇಳಿದ್ದಾರೆ. |
| ಸ್ವಾರಸ್ಯ | ನಾವೆಲ್ಲರೂ ದೇಶದ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೂ ನಾವೆಲ್ಲರೂ ಒಂದೇ ಎಂಬ ಐಕ್ಯತಾ ಭಾವವೇ ಇಲ್ಲಿರುವ ಸ್ವಾರಸ್ಯವಾಗಿದೆ. |

**ಚಟುವಟಿಕೆ–೪. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

| " ಕಣ್ಣು ಬೇರೆ, ನೋಟವೊಂದು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| " ಭಾಷೆ ಬೇರೆ, ಭಾವವೊಂದು" | |
|---|---|
| ಆಯ್ಕೆ | ಪ್ರಸ್ತುತ ವಾಕ್ಯವನ್ನು ಕೆ. ಎಸ್. ನರಸಿಂಹಸ್ವಾಮಿ ಅವರ ನವಪಲ್ಲವ ಕವನ ಸಂಕಲನದಿಂದ ಆಯ್ದ 'ಭಾರತೀಯತೆ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ನಮ್ಮ ನಾಡಿನಲ್ಲಿ ಹಲವಾರು ಗಡಿ ಪ್ರದೇಶಗಳಿದ್ದು ವಿಸ್ತಾರವಾದ ಬಾನು (ಆಕಾಶ) ಕಡಲುಗಳಿವೆ. ನಮ್ಮ ಯೋಧರು ನಮ್ಮ ನಾಡಿನ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದಿದ್ದಾರೆ. ನಾವೆಲ್ಲರೂ ವಾಸಿಸುತ್ತಿರುವ ನಮ್ಮ ದೇಶವಾದ ಭಾರತವು ನಮ್ಮೆಲ್ಲರನ್ನು ಪೊರೆದ ತೊಟ್ಟಿಲಾಗಿದೆ. ಯುಗ–ಯುಗಗಳಲ್ಲಿಯೂ ನಮ್ಮ ಕೊರಳಿನಿಂದ ಐಕ್ಯತೆಯ ಧ್ವನಿ ಮೂಡಿ ಬಂದಿದೆ. ಆದ್ದರಿಂದ ನಮ್ಮ ಭಾಷೆಗಳು ಬೇರೆ ಬೇರೆಯಾದರೂ ಭಾವವು ಒಂದೇ ಎಂದು ಕವಿ ಹೇಳುವ ಸಂದರ್ಭದಲ್ಲಿ ಈ ವಾಕ್ಯವು ಬಂದಿದೆ. |
| ಸ್ವಾರಸ್ಯ | ನಮ್ಮ ನಾಡು ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವ ನಾಡಾಗಿದೆ ಎಂಬುದೇ ಇಲ್ಲಿನ ಸ್ವಾರಸ್ಯವಾಗಿದೆ. |

| " ಭಾಷೆ ಬೇರೆ, ಭಾವವೊಂದು " | |
|---|---|
| ಆಯ್ಕೆ | |
| ಸಂದರ್ಭ | |

| | |
|---|---|
| | |
| ಸ್ವಾರಸ್ಯ | |

| " ಎಲ್ಲೆ ಇರಲಿ, ನಾವು ಒಂದು " | |
|---|---|
| ಆಯ್ಕೆ | ಪ್ರಸ್ತುತ ವಾಕ್ಯವನ್ನು ಕೆ. ಎಸ್. ನರಸಿಂಹಸ್ವಾಮಿ ಅವರ ನವಪಲ್ಲವ ಕವನ ಸಂಕಲನದಿಂದ ಆಯ್ದ 'ಭಾರತೀಯತೆ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ನಮ್ಮಲ್ಲಿ ನಾಡಿಗಾಗಿ ಪ್ರಾಣತ್ಯಾಗ ಮಾಡಿರುವ ಅನೇಕ ಹುತಾತ್ಮರಿದ್ದಾರೆ. ನಮ್ಮ ಕಷ್ಟದಲ್ಲಿಯೂ ಪರರಿಗೆ ಮಿಡಿಯುವ ಸಂಸ್ಕೃತಿ ನಮ್ಮದು. ಬಿರುಗಾಳಿಯಂತಹ ಕಷ್ಟವನ್ನೂ ಸಹಿಸಿ ನಮ್ಮ ಗುರಿಯೆಡೆಗೆ ಸಾಗುವ ಧೀರ ಪ್ರಯಾಣದಲ್ಲಿ ನಾವಿದ್ದೇವೆ. ನಾವು ಯಾವುದೇ ರಾಜ್ಯದಲ್ಲಿದ್ದರು ನಾವೆಲ್ಲರೂ ಒಂದೇ ಎಂದು ಕವಿ ಹೇಳುವ ಸಂದರ್ಭದಲ್ಲಿ ಈ ವಾಕ್ಯವು ಬಂದಿದೆ. |
| ಸ್ವಾರಸ್ಯ | ನಾವು ದೇಶದ ಯಾವುದೇ ಭಾಗದಲ್ಲಿ ವಾಸಿಸಿದರೂ ನಾವು ಭಾರತೀಯರೆಂಬ ಅರಿವು ಎಲ್ಲರಿಗೂ<br>ಇರಬೇಕು ಎಂಬುದೇ ಇಲ್ಲಿನ ಸ್ವಾರಸ್ಯವಾಗಿದೆ. |

| " ಎಲ್ಲೆ ಇರಲಿ, ನಾವು ಒಂದು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

ಬಿಟ್ಟ ಸ್ಥಳ ತುಂಬಿರಿ.

೧. ಯಂತ್ರ ಘೋಷ ವೇಳುವಲ್ಲಿ.

೨. ಒಂದೇ ನೆಲದ ತೊಟ್ಟಿಲಲ್ಲಿ.

೩. ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ ಹಾಡಿನಲ್ಲಿ.

೪. ಎಲ್ಲೆ ಇರಲಿ ನಾವು ಒಂದು.

೫. ನಡೆವ ಧೀರ ಪಯಣದಲ್ಲಿ.

ಚಟುವಟಿಕೆ–೫. **ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

| |
|---|
| ಬಿಟ್ಟ ಸ್ಥಳ ತುಂಬಿರಿ. |
| ೧. ಯಂತ್ರ ----------------- ವೇಳುವಲ್ಲಿ. |
| ೨. ಒಂದೇ ನೆಲದ ----------------- |
| ೩. ನಮ್ಮ ಯುಗದ ದನಿಗಳಾಗಿ ಮೂಡಿದೆಲ್ಲ ----------------- |
| ೪. ಎಲ್ಲೆ ಇರಲಿ ನಾವು ----------------- |
| ೫. ನಡೆವ ----------------- ಪಯಣದಲ್ಲಿ. |

ಚಟುವಟಿಕೆ–೬. **ಈ ಕೆಳಗಿನ ಪದ್ಯವನ್ನು ನೋಡಿ, ಮಾದರಿಯಂತೆ ಬರೆಯಿರಿ.**

| | |
|---|---|
| ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ<br>ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ<br>ದಾರಿ ಬಳಸಿ ಏರುವಲ್ಲಿ ಬಿರುಗಾಳಿಯೆ ಮೊಳಗುವಲ್ಲಿ<br>ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ | ನಾಡಿಗಾಗಿ ---------------------------------------------<br>ನಮ್ಮ ---------------------------------------------<br>ದಾರಿ ---------------------------------------------<br>ನಮ್ಮ --------------------------------------------- |
| ನಾಡಿಗಾಗಿ ----------------<br>---------------------------------------------<br>---------------------------------------------<br>------------------------------ ಪಯಣದಲ್ಲಿ | ---------------------------------------------<br>---------------------------------------------<br>---------------------------------------------<br>--------------------------------------------- |

## ಛಂದಸ್ಸು ಪರಿಚಯಾತ್ಮಕ ವಿವರ

ಪದ್ಯವನ್ನು ರಚಿಸಲು ಬೇಕಾದ ನಿರ್ದಿಷ್ಟ ಪಾದಗಳ ಬಗ್ಗೆ ಮತ್ತು ಪ್ರತಿ ಪಾದದಲ್ಲಿ ಇರಬೇಕಾದ ಪ್ರಾಸ, ಯುತಿ, ಗಣಗಳ ಬಗ್ಗೆ ತಿಳಿಸುವ ಶಾಸ್ತ್ರವೇ ಛಂದಸ್ಸು.

ಛಂದಸ್ಸು ಎಂದರೇನು?

ಉತ್ತರ:

ಗುರು ಹಿರಿಯರ ಅರಿಯದವನ ಅರಿವದೇತಕೆ
ಪರ ಹಿತಾರ್ಥಕಿಲ್ಲದವನ ಶರೀರವೇತಕೆ
ಹರಿಯ ಪೂಜೆ ಮಾಡದವನ ಜನುಮವೇತಕೆ
ಸೇರಿದವರ ಹೊರೆಯದಂಥ ದೊರೆಯು ಏತಕೆ

ಈ ಪದ್ಯವನ್ನು ಗಮನಿಸಿದಾಗ ಪ್ರತಿ ಸಾಲಿನ ಎರಡನೆಯ ಅಕ್ಷರದಲ್ಲಿರುವ ವ್ಯಂಜನಾಕ್ಷರ ಒಂದೇ ಆಗಿದೆ. ಅದೇ ರೀತಿ ಪ್ರತಿ ಸಾಲಿನ ಕೊನೆಯ ವ್ಯಂಜನವೂ ಒಂದೇ ಆಗಿದೆ. ಹೀಗೆ ಇರುವುದನ್ನು 'ಪ್ರಾಸ' ಎನ್ನತ್ತೇವೆ..

ಪ್ರಾಸ:

ಪ್ರತಿಸಾಲಿನ ಎರಡನೆಯ ಅಕ್ಷರ ಪ್ರಾಸವಾಗಿದ್ದರೆ ಆದಿಪ್ರಾಸ ಎಂತಲೂ, ಅಂತ್ಯದಲ್ಲಿ ಬರುವ ಪ್ರಾಸವನ್ನು ಅಂತ್ಯಪ್ರಾಸ ಎಂತಲೂ ಮತ್ತು (ಹೆಚ್ಚಾಗಿ ರಗಳೆ ಛಂದಸ್ಸಿನಲ್ಲಿ ಕಾಣಬಹುದು) ಮಧ್ಯದಲ್ಲಿ ಬರುವ ಪ್ರಾಸವನ್ನು ಒಳಪ್ರಾಸ ಅಥವಾ ಮಧ್ಯಪ್ರಾಸ ಎಂತಲೂ ಕರೆಯುವರು.

ಆದಿಪ್ರಾಸ:

ಅಂತ್ಯಪ್ರಾಸ:

ಮಧ್ಯಪ್ರಾಸ:

ಯತಿ : ಪದ್ಯವನ್ನು ವಾಚಿಸುವಾಗ ಅರ್ಥಕ್ಕೆ ಲೋಪವಾಗದಂತೆ ನಿಲ್ಲಿಸುವ ಸ್ಥಳವನ್ನು ಯತಿ ಎನ್ನುವರು. ಯತಿ ಎಂಬುದು ಸಂಸ್ಕೃತ ಕಾವ್ಯಗಳಲ್ಲಿ ಬಳಕೆಯಾದಷ್ಟು ಕನ್ನಡದಲ್ಲಿ ಬಳಕೆಯಾಗಿಲ್ಲ.

ಯತಿ–

ಗಣ : ಗಣ ಎಂದರೆ ಗುಂಪು ಎಂದರ್ಥ. ಪದ್ಯದ ಪ್ರತಿಸಾಲಿನ ಅಕ್ಷರ ಅಥವಾ ಮಾತ್ರೆ ಅಥವಾ ಅಂಶಗಳ ಗುಂಪೇ ಗಣ. ಮಾತ್ರೆಗಳ ಲೆಕ್ಕಾಚಾರದಿಂದ ಗುಂಪು ಮಾಡಿದರೆ ಮಾತ್ರಾಗಣ ಎಂತಲೂ ಅಕ್ಷರಗಳ ಲೆಕ್ಕಾಚಾರದಿಂದ ಗುಂಪು ಮಾಡಿದರೆ ಅಕ್ಷರಗಣ ಎಂತಲೂ ಅಂಶಗಳ ಆಧಾರದಿಂದ ಗುಂಪು ಮಾಡಿದರೆ ಅಂಶಗಣ ಎಂತಲೂ ಕರೆಯುವರು.

## ಸರ್ಕಾರಿ ಪ್ರೌಢ ಶಾಲೆ

ಸಮಯ–೪೦ ನಿ. **ಮೌಲ್ಯಮಾಪನ–೧** ೨೦ ಅಂಕಗಳು

**ಪ್ರತಿಯೊಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಸರಿ ಉತ್ತರವನ್ನು ಆರಿಸಿ ಬರೆಯಿರಿ. ೧X ೩ =೦೩**

೧. ಜ್. ನ್, ಹ್, ನ್, ಮ್ ಇವುಗಳು;

ಎ) ಸ್ವರಾಕ್ಷರಗಳು ಬಿ) ಅಲ್ಪಪ್ರಾಣಾಕ್ಷರಗಳು ಸಿ) ಮಹಾಪ್ರಾಣಾಕ್ಷರಗಳು ಡಿ) ಅನುನಾಸಿಕಾಕ್ಷರಗಳು

೨. ಕೆಳಗಿನವುಗಳಲ್ಲಿ ಸಜಾತಿ ಸಂಯುಕ್ತಾಕ್ಷರದಿಂದ ಕೂಡಿದ ಪದವಿದು:

ಎ) ವ್ಯಕ್ತಿ ಬಿ) ಸ್ಥಾನ ಸಿ) ಮಗ್ಗ ಡಿ) ಮಾತ್ರ

೩. ಇವುಗಳಲ್ಲಿ ಅಂಕಿತನಾಮಕ್ಕೆ ಉದಾಹರಣೆ:

ಎ) ರಹೀಮ್ ಬಿ) ಉಪಾಧ್ಯಾಯ ಸಿ) ನೇಕಾರ ಡಿ) ಅವನು

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೧X ೪=೦೪**

೧. ಅಬ್ದುಲ್ ರಹೀಮನ ಹಠವೇನು?

೨. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು?

೩. ದೇಹ ಏಕೆ ವ್ಯರ್ಥವಾಗಿದೆ?

೪. ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ಯಾರು?

ಕೊಟ್ಟಿರುವ ಪ್ರತಿ ಹೇಳಿಕೆಯನ್ನು ಸಂದರ್ಭದೊಡನೆ ವಿವರಿಸಿರಿ. **೩X೧=೦೩**

೧. "ನಿನ್ನ ಕಲ್ಲೆ ನುಡಿವುದಲ್ಲ!" ಅಥವಾ . "ನನ್ನ ಹತ್ತಿರ ಇರುವುದು ಇದೊಂದೇ ಸೀರೆ"

**ಕೆಳಗಿನ ಗಾದೆ ಮಾತುಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.** **೧X೩=೦೩**

೧. ಕೈ ಕೆಸರಾದರೆ ಬಾಯಿ ಮೊಸರು ಅಥವಾ ಮಾತು ಬೆಳ್ಳಿ; ಮೌನ ಬಂಗಾರ.

**ಈ ಕೆಳಗಿನ ಕವಿ/ ಲೇಖಕರಲ್ಲಿ ಒಬ್ಬರ ಕುರಿತಾಗಿ ಸಂಕ್ಷಿಪ್ತ ಪರಿಚಯ ಬರೆಯಿರಿ.** **೧X೩=೦೩**

೧. ಬಾಗಲೋಡಿ ದೇವರಾಯ ಅಥವಾ ಎಂ.ಗೋವಿಂದ ಪೈ.

**ಕೆಳಗೆ ನೀಡಿರುವ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ, ವಿಭಕ್ತಿಯನ್ನು ಹೆಸರಿಸಿರಿ.** **೧X೩=೦೩**

೧. ದಿವಾನರನ್ನು :

೨. ದಿನದಿನದ:

೩. ಡಿವಿಜಿಗೆ:

೪. ಬಲದಿಂದ:

## ಪಠ್ಯ ಪೂರಕ ಅಧ್ಯಯನ-೨. ಆಹುತಿ.



– ಕೊಡಗಿನ ಗೌರಮ್ಮ

ಜನನ : ೧೯೧೨

ಸ್ಥಳ : ಮಡಿಕೇರಿ.

ಕತೆಗಳು : ಕಂಬನಿ, ಚಿಗುರು ಹಾಗೂ ಗೌರಮ್ಮನ ಕಥೆಗಳು ಕೊಡಗಿನ ಗೌರಮ್ಮನವರು ಮಿಸ್ಸೆಸ್ ಟಿ.ಜಿ ಕೃಷ್ಣ ಎನ್ನುವ ಹೆಸರಿನಲ್ಲಿ ಕತೆಗಳನ್ನು ಬರೆದಿದ್ದಾರೆ.ಸ್ವತಂತ್ರ ಆಂದೋಲನದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿ ಅವರು ಕೊಡಗಿನಲ್ಲಿ ಪ್ರವಾಸ ಕೈಗೊಂಡಾಗ ಕೊಡಗಿನ ಗೌರಮ್ಮನವರು ಬಾಪೂಜಿಯವರನ್ನು ಮನೆಗೆ ಬರಮಾಡಿಕೊಂಡು ತಮ್ಮ ಆಭರಣಗಳನ್ನೆಲ್ಲ ಹೋರಾಟಕ್ಕಾಗಿ ದಾನ ನೀಡಿದರು.

ಚಟುವಟಿಕೆ–೧.

ಕೊಡಗಿನ ಗೌರಮ್ಮನವರ ಕುರಿತಾದ ಈ ಮೇಲಿನ ಅಂಶಗಳನ್ನು ಗಮನಿಸಿ, ಅವರ ಪರಿಚಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗವೇನು?

ಉತ್ತರ: ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗ ರತ್ನದ ವ್ಯಾಪಾರ ಮಾಡುವುದು.

೨. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಏಕೆ ಬಂದನು?

ಉತ್ತರ: ಯುವಕನ ಕೈಲಿದ್ದ ಹಣವೆಲ್ಲಾ ಖರ್ಚಾಗಿ ಮುಂದೇನು ಮಾಡಬೇಕೆಂದು ದಿಕ್ಕು ತೋಚದೆ ಮುದುಕನ ಮನೆಗೆ ಬಂದನು.

೩. ಮುದುಕನ ಮಗಳು ಮತ್ತು ಸೊಸೆಯ ಹೆಸರೇನು?

ಉತ್ತರ: ಮುದುಕನ ಮಗಳ ಹೆಸರು ಸೀತೆ ಮತ್ತು ಸೊಸೆಯ ಹೆಸರು ಶಾಂತಿ.

೪. ವರದಕ್ಷಿಣೆಯ ಪಿಶಾಚಿ ಯಾರನ್ನು ಬಲಿ ತೆಗೆದುಕೊಂಡಿದೆ?

ಉತ್ತರ: ವರದಕ್ಷಿಣೆಯ ಪಿಶಾಚಿ ಶಾಂತಿಯನ್ನು ಬಲಿ ತೆಗೆದುಕೊಂಡಿತು.

೫. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣಗಳೇನು?

ಉತ್ತರ: ಯುವಕನಿಗೆ ತಾನು ಐಶ್ವರ್ಯವಂತರ ಅಳಿಯನಾಗಬೇಕೆಂದು ಬಹಳ ಆಸೆಯಿತ್ತು. ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರನಾಗಬೇಕೆಂಬುದು ಅವನ ಬಲವಾದ ಇಚ್ಛೆ. ಇಂಗ್ಲೆಂಡಿಗೆ ಹೋಗಬೇಕಾದರೆ ಹಣಬೇಕು. ಐಶ್ವರ್ಯವಂತರ ಅಳಿಯನಾದರೆ

ತಾನು ಇಂಗ್ಲೆಂಡಿಗೆ ಸುಲಭವಾಗಿ ಹೋಗಬಹುದು ಎಂಬ ಕಾರಣದಿಂದ ಅವನು ಆ ಬಡವರ ಹುಡುಗಿಯನ್ನು ಮದುವೆಯಾಗಲು ಇಷ್ಟಪಡಲಿಲ್ಲ.

೬. ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ ಏನು ಹೇಳಿದಳು?

ಉತ್ತರ: ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ "ನೋಡುತ್ತಿದ್ದುದು ನೀನು ಕೊಂದ ಹುಡುಗಿಯನ್ನು" ಎಂದು ಹೇಳಿದಳು.

ಚಟುವಟಿಕೆ–೨. **ಮೇಲಿನಂತೆ ಪ್ರಶ್ನೆಗಳ ಕ್ರಮ ಸಂಖ್ಯೆಯ ಮುಂದೆ ಉತ್ತರವನ್ನು ಪುನಃ ಬರೆಯಿರಿ.**

೧.

೨.

೩.

೪.

೫.

೬.

# ಗದ್ಯಪಾಠ–೩. ನೀರು ಕೊಡದ ನಾಡಿನಲ್ಲಿ.



–ನೇಮಿಚಂದ್ರ





**ಚಟುವಟಿಕೆ–೧. ಮೇಲಿನ ಚಿತ್ರವನ್ನು ನೋಡಿ ನಿಮ್ಮ ಅಭಿಪ್ರಾಯ ಬರೆಯಿರಿ.**

| ಶ್ರೀಮತಿ ನೇಮಿಚಂದ್ರ. | |
|---|---|
| ಜನನ/ಸ್ಥಳ | ಚಿತ್ರದುರ್ಗದಲ್ಲಿ ಜುಲೈ ೧೬, ೧೯೫೯ ರಂದು ಜನಿಸಿದರು. ತಂದೆ ಪ್ರೊ. ಜಿ.ಗುಂಡಣ್ಣ, ತಾಯಿ ತಿಮ್ಮಕ್ಕ. |
| ಸೇವೆ | ಬೆಂಗಳೂರಿನ ಎಚ್.ಎ.ಎಲ್.ಸಂಸ್ಥೆಯಲ್ಲಿ ಉನ್ನತ ತಂತ್ರಜ್ಞ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. |
| ಪ್ರಮುಖ ಕೃತಿಗಳು | ಯಾದ್ ವಶೇಮ್ – ಕಾದಂಬರಿ, ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ ಕಥೆಗಳು, ನೇಮಿಚಂದ್ರರ ಕಥೆಗಳು ಮುಂತಾದ ಕಥಾಸಂಕಲನಗಳು. ಒಂದು ಕನಸಿನ ಪಯಣ, ಪೆರುವಿನ ಪವಿತ್ರ ಕಣಿವೆಯಲ್ಲಿ ಪ್ರವಾಸ ಕಥನಗಳು. ಬದುಕು ಬದಲಿಸಬಹುದು ಅಂಕಣ ಬರಹಗಳು. |
| ಪ್ರಶಸ್ತಿಗಳು | ಪೆರುವಿನ ಪವಿತ್ರ ಕಣಿವೆಯಲ್ಲಿ ಕೃತಿಗೆ ಕರ್ನಾಟಕ ಸಾಹಿತ್ಯ ಪ್ರಶಸ್ತಿ. ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಸಂದಿವೆ. |
| ಆಯ್ಕೆ | 'ನೀರು ಕೊಡದ ನಾಡಿನಲ್ಲಿ' ಅಂಕಣ ಬರೆಹವನ್ನು ಶ್ರೀಮತಿ ನೇಮಿಚಂದ್ರ ಅವರ 'ಬದುಕು ಬದಲಿಸಬಹುದು' ಕೃತಿಯಿಂದ ಆಯ್ದು, ಸಂಪಾದಿಸಿ ನಿಗದಿಪಡಿಸಿದೆ. |

**ಚಟುವಟಿಕೆ–೨. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

| ಶ್ರೀಮತಿ ನೇಮಿಚಂದ್ರ | |
|---|---|
| ಜನನ/ಸ್ಥಳ | |
| ಸೇವೆ | |
| ಪ್ರಮುಖ ಕೃತಿಗಳು | |
| ಪ್ರಶಸ್ತಿಗಳು | |
| ಆಯ್ಕೆ | |

**ಪ್ರಮುಖ ವಿಷಯಾಂಶಗಳು:**

- ನಮ್ಮಲ್ಲಿರುವಂತೆ ರೈಲು ನಿಲ್ದಾಣಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲೂ 'ದುಡ್ಡಿಲ್ಲದೆ ಕುಡಿಯಬಲ್ಲ' ನೀರನ್ನು ವಿದೇಶಗಳಲ್ಲಿ ಇರಿಸುವುದಿಲ್ಲ.
- ನೀರು ಸಲೀಸಾಗಿ ಎಲ್ಲೆಂದರಲ್ಲಿ ಪುಕ್ಕಟ್ಟೆಯಾಗಿ ವಿದೇಶಗಳಲ್ಲಿ ಖಂಡಿತ ಸಿಗುವುದಿಲ್ಲ.
- ಬಾಯಾರಿದಾಗ ಈಗಲೂ ಹೋಟೆಲ್ ಒಂದಕ್ಕೆ ಹೊಕ್ಕು, ನೀರು ಮಾತ್ರ ಕುಡಿದು ಹೊರ ಬರಬಹುದಾದ ಸವಲತ್ತು ಇಲ್ಲಿಲ್ಲ.
- ಮನೆಯ ಹೊರಗೆ ಕಂಪೌಡ್ ಗೋಡೆಗೆ ಸಣ್ಣ ತೊಟ್ಟಿ ಕಟ್ಟಿ, 'ದನಕರುಗಳು ಕುಡಿದು ಹೋಗಲಿ' ಎಂದು ನೀರು ತುಂಬಿಡುತ್ತಿದ್ದ ಬಾಲ್ಯದ ದಿನಗಳು ಲೇಖಕರಿಗೆ ಇನ್ನೂ ನೆನಪಿವೆ.
- ದಿಲ್ಲಿಯಲ್ಲೂ ಯಾರೋ ಪುಣ್ಯಾತ್ಮರು ದೊಡ್ಡ ಮಣ್ಣಿನ ಮಡಕೆಗಳಲ್ಲಿ ನೀರು ತುಂಬಿಟ್ಟಿರುತ್ತಿದ್ದರು.
- ಅನೇಕ ಗುರುದ್ವಾರಗಳ ಬಳಿ, ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು, ನಿಲ್ಲಿಸಿದ ಆಟೋ, ಬಸ್ಸು ಹಾಗೂ ದಾರಿ ಹೋಕರಿಗೆಲ್ಲ ನೀರು ತುಂಬಿ ತುಂಬಿ ಕುಡಿಸುತ್ತಿದ್ದರು.
- ನಮ್ಮ ಭಾರತೀಯ ಸಂಸ್ಕೃತಿಯ ಬುನಾದಿಯನ್ನು ಜೀವನ ಶೈಲಿಯನ್ನು, ನಂಬಿಕೆಗಳನ್ನು, ಮೌಲ್ಯಗಳನ್ನು, ಸಂಸ್ಕೃತಿಯ ಬುನಾದಿಯನ್ನು ಅಲುಗಿಸುವಂತೆ ಮಾಡಿರುವುದು ಕೊಳ್ಳುಬಾಕತನ.
- ಅಗತ್ಯಗಳಲ್ಲಿ ನಡೆದು ಹೋಗುತ್ತಿದ್ದ ಬದುಕು. ಇಂದು 'ಬೇಕು'ಗಳ ಬಲೆಗೆ ಬಿದ್ದಿದೆ. ಬೇಕುಗಳನ್ನು 'ಅಗತ್ಯ'ಗಳಾಗಿ ಹಾಗೂ 'ಅತ್ಯಗತ್ಯತೆ'ಗಳಾಗಿ ಬಲು ಜಾಣತನದಿಂದ ಬದಲಿಸುವ ಜಾಹೀರಾತುಗಳು ಮತ್ತೆ ಮತ್ತೆ ಬಿತ್ತರಿಸುತ್ತವೆ.
- ಕಂಪನಿಗಳು ಆರಾಮ, ಐಷಾರಾಮದ, ಅಪ್ಪಟ ಅನಗತ್ಯದ ವಸ್ತುಗಳನ್ನು 'ಇವಿಲ್ಲದೆ ಬದುಕಿಲ್ಲ' ಎಂಬಂತೆ ಬಿಂಬಿಸುತ್ತವೆ.
- 'ಡಿಓಡರೆಂಟ್' ಹಾಕಿಕೊಳ್ಳದೆ ಇದ್ದರೆ 'ತಾನು ನಾತ ಬಡಿಯುತ್ತೇನೆ' ಎಂಬಷ್ಟು ಕೀಳರಿಮೆಯನ್ನು ಕಂಪನಿಗಳು ಹುಟ್ಟಿಸಬಲ್ಲವು. ಕೊನೆಗೆ ಎಲ್ಲವೂ ನಮ್ಮನ್ನು ಕೊಳ್ಳುವಂತೆ ಪ್ರೇರೇಪಿಸುತ್ತವೆ.

**ಚಟುವಟಿಕೆ–೩. ಪ್ರಮುಖ ವಿಷಯಾಂಶಗಳ ಆಧರಿಸಿ 'ನೀರು ಕೊಡದ ನಾಡಿನಲ್ಲಿ' ಪಾಠದ ಸಾರಾಂಶ ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಎಲ್ಲೆಲ್ಲಿ ನೀರು ಕೊಡುವ ಸಂಪ್ರದಾಯವಿಲ್ಲ?

ಉತ್ತರ: ಯೂರೋಪಿನಲ್ಲಾಗಲಿ, ಅಮೇರಿಕದಲ್ಲಾಗಲಿ ನೀರು ಕೊಡುವ ಸಂಪ್ರದಾಯವಿಲ್ಲ.

೨. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ?

ಉತ್ತರ: ಮನೆಗೆ ಬಂದವರಿಗೆ 'ಮೊದಲು ನೀರು ಕೊಡುವ' ಸಂಪ್ರದಾಯವಿದೆ.

೩. ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು?

ಉತ್ತರ: ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಕೋಲಾ ಸಿಗುತ್ತದೆ.

೪. ಭಾರತದಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ?

ಉತ್ತರ: ಪ್ರತಿಯೊಬ್ಬರೂ ನೀರನ್ನು ಕೊಂಡು ಕುಡಿಯುವಂತೆ ಮಾಡುವ ಹುನ್ನಾರ ಭಾರತದಲ್ಲಿ ಇತ್ತೀಚೆಗೆ ನಡೆದಿದೆ.

೫. ಸರ್ವರಿಗೂ ವೇದ್ಯವಾಗಿರುವ ಅಂಶಗಳಾವುವು?

ಉತ್ತರ: 'ಮದರ್ಸ್ ಡೇ,' 'ಫಾದರ್ಸ್ ಡೇ', 'ವ್ಯಾಲೆಂಟೈನ್ ಡೇ' ಆಚರಿಸುವುದು 'ಗಿಫ್ಟ್', 'ಗ್ರೀಟಿಂಗ್ ಕಾರ್ಡ್' ಮಾರುವ ಹೊಸ ಹುನ್ನಾರಗಳೆಂದು ಸರ್ವರಿಗೂ ವೇದ್ಯವಾಗಿದೆ.

೬. ಲೇಖಕಿಗೆ ಹೋಟೆಲ್‌ನಲ್ಲಿ ನಾಲ್ಕು ಲೋಟ ನೀರು ತಂದಿಟ್ಟಾಗ ಆದ ಅನುಭವವೇನು?

ಉತ್ತರ: ಲೇಖಕಿಗೆ ಹೋಟೆಲ್‌ನಲ್ಲಿ ನಾಲ್ಕು ಲೋಟ ನೀರು ತಂದಿಟ್ಟಾಗ ಬರೀ ಬಾಯಲ್ಲ ಮನಸ್ಸು ತಂಪಾಯಿತು.

**ಚಟುವಟಿಕೆ–೪. ಮೇಲಿನ ಮಾದರಿಯಂತೆ ಉತ್ತರಗಳನ್ನು ನೋಡಿ ಬರೆಯಿರಿ.**

೧.

೨.

೩.

೪.

೫.

೬.

ಈ ಖಾಲಿಬಿಟ್ಟ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.

| |
|---|
| ೧. ಭಾರತದಿಂದ ಹೊರಗೆ ಕಾಲಿಟ್ಟರೆ ಉಳಿದೆಲ್ಲವೂ 'ನೀರು ಕೊಡದ ನಾಡುಗಳು'. |
| ೨. ಈ ದೇಶಗಳಲ್ಲಿ ಮನೆಯ ನಲ್ಲಿಯಲ್ಲಿ ಬರುವ ನೀರನ್ನು ಕುಡಿಯುವುದಿಲ್ಲ. |
| ೩. ಗ್ರೀಟಿಂಗ್ಸ್ ಕಾರ್ಡ್ ಮಾರುವ ಹೊಸ ಹುನ್ನಾರ ಗಳೆಂದು ಸರ್ವರಿಗೂ ವೇದ್ಯವಾಗಿದೆ. |
| ೪. ಸ್ಯಾಂಡ್ವಿಚ್ ಬರ್ಗರ್ ಜೊತೆಗೆ ದೊಡ್ಡ ಗಾತ್ರದ ಕೋಲಾ ನೀಡುತ್ತಾರೆ. |

ಚಟುವಟಿಕೆ–೫. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.

| |
|---|
| ೧. |
| ೨. |
| ೩. |
| ೪. |

## ಅನ್ಯದೇಶ ಪದಗಳು

ಬೇರೆ ಭಾಷೆಯಿಂದ ಬಂದಿರುವ ಪದಗಳೇ ಅನ್ಯದೇಶ್ಯ ಪದಗಳು. ಕನ್ನಡದಲ್ಲಿ ಬಳಕೆಯಾಗುತ್ತಿರುವ ಅರ್ಜಿ, ಕಚೇರಿ, ಕಾರ್ಖಾನೆ, ಮುಂತಾದವು ಹಿಂದುಸ್ತಾನೀ ಭಾಷೆಯ ಪದಗಳು.ಕೋರ್ಟು, ಬ್ಯಾಂಕು, ಹಾರ್ಮೋನಿಯಂ, ಹೋಟೆಲ್ ಮುಂತಾದವು ಆಂಗ್ಲಭಾಷೆಯಿಂದ ಬಂದ ಪದಗಳು.–ಅಲಮಾರು, ಸಾಬೂನು, ಮೇಜು ಮುಂತಾದವು ಪೋರ್ಚುಗೀಸ್ ಭಾಷೆಯಿಂದ ಬಂದ ಪದಗಳು. ಮಾಲೆ, ರಾಜ, ವಿಪತ್ತು, ದೇವತೆ ಮುಂತಾದ ಪದಗಳು ಸಂಸ್ಕೃತ ಭಾಷೆಯಿಂದ ಬಂದಿವೆ. ಇವನ್ನು ಅನ್ಯದೇಶ್ಯ ಪದ ಗಳೆಂದು ಕರೆಯುವ ವಾಡಿಕೆ ಇಲ್ಲ. ಇವುಗಳನ್ನು ತತ್ಸಮ ಎಂದು ಕರೆಯುವರು.

ಚಟುವಟಿಕೆ–೬. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.

| | |
|---|---|
| ಹಿಂದುಸ್ತಾನೀ ಭಾಷೆಯ ಪದಗಳು. | |
| ಆಂಗ್ಲಭಾಷೆಯ ಪದಗಳು | |
| ಪೋರ್ಚುಗೀಸ್ ಭಾಷೆಯ ಪದಗಳು | |
| ಸಂಸ್ಕೃತ ಭಾಷೆಯ ಪದಗಳು | |

## ತತ್ಸಮ–ತದ್ಭವ

ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಕನ್ನಡಕ್ಕೆ ಪದಗಳನ್ನು ಪಡೆದುಕೊಳ್ಳುವಾಗ ಅಲ್ಪಸ್ವಲ್ಪ ಬದಲಾವಣೆಗೆ ಒಳಪಟ್ಟ ಹಾಗೂ ಬಹಳಷ್ಟು ಬದಲಾವಣೆಗೆ ಒಳಪಟ್ಟ ಪದಗಳೂ ಇವೆ.

ತತ್ಸಮ:

ತತ್ ಎಂದರೆ ಅದಕ್ಕೆ, ಸಮ ಎಂದರೆ ಸಮಾನ ಎಂದರ್ಥ. ಹಾಗಾಗಿ ತತ್ಸಮ ಎಂದರೆ ಸಂಸ್ಕೃತಕ್ಕೆ ಸಮಾನವಾದುದು ಎಂದರ್ಥ. ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಯಾವುದೇ ಬದಲಾವಣೆ ಹೊಂದದೆ ಹಾಗೆಯೇ ಬಂದು ಸೇರಿದ ಪದಗಳೂ ಇವೆ. ಉದಾ: ರಾಮ, ಭೀಮ, ವಸಂತ, ಸೋಮ, ಚಂದ್ರ, ಕರ್ತೃ, ಸ್ತ್ರೀ ಇತ್ಯಾದಿ ಪದಗಳು.ಮಾಲೆ, ಶಾಲೆ, ಆಶೆ, ನಿದ್ರೆ ಇತ್ಯಾದಿ 'ಆ' ಕಾರಾಂತ ಪದಗಳು 'ಎ' ಕಾರಾಂತವಾಗಿ ಬದಲಾವಣೆಗೊಂಡ ಪದಗಳೂ ಇವೆ. ಇಂತಹ ಪದಗಳನ್ನು 'ತತ್ಸಮ'ಗಳೆಂದು ಕರೆಯಲಾಗುತ್ತದೆ.

## ತದ್ಭವ:

ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಅಥವಾ ಪೂರ್ಣ ಬದಲಾವಣೆ ಹೊಂದಿರುವ ಪದಗಳೇ ತದ್ಭವಗಳು 'ತತ್' ಎಂದರೆ 'ಅದರಿಂದ' ಅಂದರೆ 'ಸಂಸ್ಕೃತದಿಂದ', 'ಭವ' ಎಂದರೆ 'ಹುಟ್ಟಿದ' ಅಂದರೆ 'ಸಂಸ್ಕೃತದಿಂದ ಹುಟ್ಟಿದ', ಎಂದರ್ಥ.

೧. ಸಿರಿ, ಬಾವಿ, ದನಿ, ಆಸೆ ಮುಂತಾದ ಪದಗಳು ಅಲ್ಪಸ್ವಲ್ಪ ಬದಲಾವಣೆ ಹೊಂದಿದ್ದ ಪದಗಳು.

೨. ಬಸದಿ, ಬೇಸಗೆ, ಕೊಡಲಿ, ಬಸವ, ಬಿನ್ನಾಣ, ಮುಂತಾದ ಪದಗಳು ಪೂರ್ಣ ಬದಲಾವಣೆ ಹೊಂದಿದ ಪದಗಳು.

ಚಟುವಟಿಕೆ–೭. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.

| ತತ್ಸಮ | ತದ್ಭವ |
|---|---|
| ವರ್ಷ | ವರುಷ |
| ಪ್ರಾಣ | ಹರಣ |
| ಶಕ್ತಿ | ಸಕುತಿ |
| ಪುಣ್ಯ | ಹೂನ್ಯ |

| ತತ್ಸಮ | ತದ್ಭವ |
|---|---|
| | |
| | |
| | |
| | |

## ಪದ್ಯಭಾಗ–೩. **ಬೇವು ಬೆಲ್ಲದೊಳಿಡಲೇನು ಫಲ.**



–ಪುರಂದರದಾಸರು

ಹರಿದಾಸ ಸಾಹಿತ್ಯದ ಅಶ್ವಿನಿದೇವತೆಗಳಲ್ಲಿ ಒಬ್ಬರು. ಈಗಿನ ಮಹಾರಾಷ್ಟ್ರದ ಪುರಂದರಗಡದಲ್ಲಿ ಸಾ.ಶ. ಸುಮಾರು ೧೪೮೦ ರಲ್ಲಿ ಜನಿಸಿದರು. ತಂದೆ ವರದಪ್ಪನಾಯಕ, ತಾಯಿ ಸರಸ್ವತಿ. ಪೂರ್ವದ ಹೆಸರು ಶ್ರೀನಿವಾಸನಾಯಕ. ಆಭರಣ ವ್ಯಾಪಾರಿಯಾಗಿದ್ದ ಇವರು ಜೀವನದಲ್ಲಿ ನಡೆದ ಘಟನೆಯಿಂದಾಗಿ ವೈರಾಗ್ಯ ತಾಳಿದರು. ಹರಿಭಕ್ತರಾಗಿ ನೂರಾರು ಕೀರ್ತನೆಗಳನ್ನು ರಚಿಸಿದರು. 'ದಾಸರೆಂದರೆ ಪುರಂದರದಾಸರಯ್ಯ' ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದಲೇ ಹೊಗಳಿಕೆಗೆ ಪಾತ್ರರಾದರು. ಪುರಂದರದಾಸರು ಕರ್ನಾಟಕ ಸಂಗೀತದ ಪಿಳ್ಳಾರಿಗೀತೆಗಳನ್ನು ರಚಿಸಿ 'ಕರ್ನಾಟಕಸಂಗೀತದ ಪಿತಾಮಹ' ಎನಿಸಿಕೊಂಡರು. ಇವರ ಅಂಕಿತ 'ಪುರಂದರವಿಠಲ.'

ಚಟುವಟಿಕೆ–೧. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.

**ಬೇವು ಬೆಲ್ಲದೊಳಿಡಲೇನು ಫಲ ಪದ್ಯದ ಮುಖ್ಯಾಂಶಗಳು:**

೧. ಮೋಸದ ಬುದ್ದಿಯನ್ನು ಬಿಡದ ಕೆಟ್ಟ ಜನರು ಮಂತ್ರ ಪಠನೆಯನ್ನು ಮಾಡಿದರೆ ಏನು ಫಲ. ಸುಳ್ಳನ್ನು ಆಡುವ ಮನುಷ್ಯರು ಮನಸ್ಸಿನಲ್ಲಿ ವಿಠಲನನ್ನು ನೆನೆದರೆ ಏನು ಫಲ.

೨. ತಂದೆ ತಾಯಿಯರನ್ನು ಚೆನ್ನಾಗಿ ನೋಡಿಕೊಳ್ಳದೆ ಇರುವ ಮಗನು ಯಾತ್ರೆಯನ್ನು ಮಾಡಿದರೆ ಏನು ಫಲ. ಮೋಸವನ್ನು ನಿರಂತರವಾಗಿ ಮಾಡುತ್ತಾ ಭಗವದ್ಗೀತೆಯನ್ನು ಓದಿದರೆ ಏನು ಫಲ.

೩. ಕುತಂತ್ರದಿಂದ ಪರರಿಗೆ ತೊಂದರೆ ಕೊಡುವವರೆಲ್ಲಾ ದೇವರ ಜಪವನ್ನು ಮಾಡಿದರೆ ಏನು ಫಲ. ಕೋಪದ ಬುದ್ಧಿಯನ್ನು ಬಿಡದೆ ನಿರಂತರವಾಗಿ ಉಪವಾಸ ಮಾಡಿದರೆ ಏನು ಫಲ.

೪. ಕೆಟ್ಟ ಕೆಲಸವನ್ನು ಮಾಡುತ್ತಾ ಪವಿತ್ರ ನದಿಯಲ್ಲಿ ಸ್ನಾನಮಾಡಿದರೆ ಏನು ಫಲ. ಸಂಪತ್ತಿನ ಒಡತಿ ಲಕ್ಷ್ಮೀ ಒಡೆಯನಾದ ಪುರಂದರ ವಿಠಲನನ್ನು ನೆನೆಯದೆ ಮೌನವನ್ನು ಮಾಡಿದರೆ ಏನು ಫಲ.

**ಚಟುವಟಿಕೆ–೨. ಮೇಲಿರುವ ಪ್ರಮುಖ ಅಂಶಗಳನ್ನು ತಿಳಿದುಕೊಂಡು ಪದ್ಯದ ಸಾರಾಂಶವನ್ನು ಬರೆಯಿರಿ.**

**ಚಟುವಟಿಕೆ–೩. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. ಪುನಃ ಉತ್ತರಗಳನ್ನು ಬರೆಯಿರಿ.**

೧. ಪುರಂದರದಾಸರ ಅಂಕಿತ ಯಾವುದು?

ಉತ್ತರ: 'ಪುರಂದರ ವಿಠಲ' ಎಂಬುದು ಪುರಂದರದಾಸರ ಅಂಕಿತ.

೨. 'ಜಪದ ಫಲ' ನಮಗೆ ಸಿಗಬೇಕಾದರೆ ಯಾವುದನ್ನು ಬಿಡಬೇಕು ?

ಉತ್ತರ: 'ಜಪದ ಫಲ' ಸಿಗಬೇಕಾದರೆ ಮನಸ್ಸಿನಲ್ಲಿನ ಕಪಟತನವನ್ನು ಬಿಡಬೇಕು.

೩. ಮಂತ್ರ ಪಠನೆಯ ಫಲ ಸಿಗಬೇಕೆಂದರೆ ಮನುಜ ಏನನ್ನು ಬಿಡಬೇಕು?

ಉತ್ತರ: ಮಂತ್ರ ಪಠನೆಯ ಫಲ ಸಿಗಬೇಕೆಂದರೆ ಮನುಜ ಕುಟಿಲತೆಯನ್ನು ಬಿಡಬೇಕೆಂದು ಹೇಳಿದ್ದಾರೆ.

೪. ಗೀತೆಯನ್ನು ಓದಿದಷ್ಟು ಫಲ ಯಾವಾಗ ದೊರೆಯುತ್ತದೆ ?

ಉತ್ತರ: ಗೀತೆಯನ್ನು ಓದಿದಷ್ಟು ಫಲ ಘಾತುಕತನ ಬಿಟ್ಟಾಗ ದೊರೆಯುತ್ತದೆ.

ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ.

| "ಮಂತ್ರವ ಪಠನೆಯ ಮಾಡಿದರೇನು ಫಲ" | |
|---|---|
| ಆಯ್ಕೆ | 'ಬೇವು ಬೆಲ್ಲದೊಳಿಡಲೇನು ಫಲ' ಪದ್ಯದ ಈ ವಾಕ್ಯವನ್ನು ಪುರಂದರದಾಸರ ಕೀರ್ತನೆಯಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ಬೇವನ್ನು ಬೆಲ್ಲದಲ್ಲಿ ಇಟ್ಟರೇನು ಫಲ? ಹಾವಿಗೆ ಹಾಲನ್ನು ಎರದರೆ ಏನು ಫಲ? ಎಂದು ಪುರಂದರದಾಸರು ಜೀವನದಲ್ಲಿ ಯಾವೆಲ್ಲ ಕೆಲಸಗಳು ಫಲವನ್ನು ನೀಡುವುದಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. |
| ಸ್ವಾರಸ್ಯ | ಮೋಸದ ಬುದ್ದಿಯನ್ನು ಬಿಡದೆ ಮಂತ್ರ ಪಠನೆಯನ್ನು ಮಾಡಿದರೆ ಫಲವಿಲ್ಲ ಎನ್ನುವ ನೀತಿ ಈ ಮಾತಿನಲ್ಲಿ ವ್ಯಕ್ತವಾಗಿದೆ. |

**ಚಟುವಟಿಕೆ–೪. ಮೇಲಿನ ಮಾದರಿಯಂತೆನೋಡಿ ಬರೆಯಿರಿ.**

| "ಮಂತ್ರವ ಪಠನೆಯ ಮಾಡಿದರೇನು ಫಲ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| "ಮಾತಾಪಿತರನು ಬಳಲಿಸುವಾತನು" |
|---|

| | |
|---|---|
| ಆಯ್ಕೆ | ಬೇವು ಬೆಲ್ಲದೊಳಿಡಲೇನು ಫಲ ಪದ್ಯದ ಈ ವಾಕ್ಯವನ್ನು ಪುರಂದರದಾಸರ ಕೀರ್ತನೆಯಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ಸುಳ್ಳನ್ನು ಆಡುವ ಮನುಷ್ಯರು ಮನಸ್ಸಿನಲ್ಲಿ ವಿಠಲನನ್ನು ನೆನೆದರೆ ಏನು ಫಲ, ನಿರ್ಮಲ ಭಕ್ತಿ ಇಲ್ಲದಿದ್ದರೆ ಮಾಡಿದ ಕೆಲಸ ಫಲವನ್ನು ಕೊಡುವುದಿಲ್ಲ ಎಂದು ಹೇಳುವ ಸಂದರ್ಭದಲ್ಲಿ ದಾಸರು ಈ ಮಾತನ್ನು ಹೇಳಿದ್ದಾರೆ.. |
| ಸ್ವಾರಸ್ಯ | ತೀರ್ಥಯಾತೆಯನ್ನು ಮಾಡಿ ತಂದೆ ತಾಯಿಯಗಳಿಗೆ ತೊಂದರೆ ಕೊಡುವವನಿಗೆ ದೇವರು ಒಳ್ಳೆಯದನ್ನು ಮಾಡುವುದಿಲ್ಲ ಎನ್ನುವ ನೀತಿ ಈ ವಾಕ್ಯದಲ್ಲಿ ವ್ಯಕ್ತವಾಗಿದೆ. |

| "ಮಾತಾಪಿತರನು ಬಳಲಿಸುವಾತನು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| "ಸ್ನಾನವ ಮಾಡಿದರೇನು ಫಲ" | |
|---|---|
| ಆಯ್ಕೆ | ಪ್ರಸ್ತುತ ವಾಕ್ಯವನ್ನು ಪುರಂದರದಾಸರ ಅವರ ಕೀರ್ತನೆಗಳಿಂದ ಆಯ್ದ ' 'ಬೇವು ಬೆಲ್ಲದೊಳಿಡಲೇನು ಫಲ''ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ | ಕೋಪದ ಬುದ್ಧಿಯನ್ನು ಬಿಡದೆ ನಿರಂತರವಾಗಿ ಉಪವಾಸ ಮಾಡಿದರೆ ಏನು ಫಲ? ಅದೇ ರೀತಿಯಲ್ಲಿ ಕಟ್ಟ ಕೆಲಸವನ್ನು ಮಾಡುವವನು ಏನನ್ನು ಮಾಡಿದರೆ ಪ್ರಯೋಜನವಿಲ್ಲ ಎಂದು ಹೇಳುವ ಸಂದರ್ಭದಲ್ಲಿ ದಾಸರು ಈ ಮಾತನ್ನು ಹೇಳಿದ್ದಾರೆ. |
| ಸ್ವಾರಸ್ಯ | ಎಷ್ಟೇ ತೀರ್ಥ ಸ್ನಾನ ಮಾಡಿದರೂ ಕೆಟ್ಟ ಕೆಲಸದ ಪರಿಣಾಮ ಮಾತಿನಲ್ಲಿ ವ್ಯಕ್ತವಾಗಿದೆ. |

| ೩. "ಸ್ನಾನವ ಮಾಡಿದರೇನು ಫಲ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**ಈ ಕೆಳಗಿನ ಗಾದೆ ಮಾತುಗಳು**

| ೧. "ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ?'' | |
|---|---|
| ಗಾದೆಯ ಮಹತ್ವ | ಗಾದೆಗಳು ವೇದಗಳಿಗೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಗ್ರಾಮೀಣ ಜನರ ಜೀವನಾಡಿಗಳಾಗಿವೆ. ಅವು ಹಿರಿಯರ ಅನುಭವದ ಸಾರವಾಗಿವೆ.''ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ?'' ಎಂಬ ಈ ಗಾದೆಯು ಕನ್ನಡದ ಪ್ರಸಿದ್ದ ಗಾದೆಗಳಲ್ಲಿ ಒಂದಾಗಿದೆ. |
| ಅರ್ಥ ವಿವರಣೆ | ತಾಳ್ಮೆಯಿಲ್ಲದವನ ಜೀವನ ಒಂದು ಕ್ಷಣದಲ್ಲಿ ಹಾಳಾಗಬಹುದು. ಅದೇ ಕ್ಷಣದಲ್ಲಿ ತಾಳ್ಮೆ ವಹಿಸಿದರೆ ಅನಾಹುತಗಳನ್ನು ತಪ್ಪಿಸಬಹುದು. ಕೋಪದಲ್ಲಿ ಕೊಯ್ದ ಮೂಗು ನಂತರದಲ್ಲಿ ಮತ್ತೆ ಸರಿಹೋಗುವುದಿಲ್ಲ. ಆದ್ದರಿಂದ ಯಾವ ಕಾರ್ಯ ಮಾಡಬೇಕಾದರೂ ತಾಳ್ಮೆ ಅವಶ್ಯಕ. 'ಈಜಬೇಕು ಇದ್ದು ಜಯಿಸಬೇಕು' ಎಂದು ದಾಸರೇ ಹೇಳಿದ್ದಾರೆ. ಆದ್ದರಿಂದ ಕಷ್ಟ-ಸುಖಗಳನ್ನು ಸಮಾನವಾಗಿ ಸ್ವೀಕರಿಸಲು ಕಲಿಯಬೇಕು. ಸಹನೆ ಕಳೆದುಕೊಂಡು ನಿರಾಶರಾಗಿ ಬಾಳುವುದು ಅಥವಾ ಪ್ರಾಣಕ್ಕೆ ಸಂಚಕಾರ ತಂದುಕೊಳ್ಳುವುದು ಉಚಿತವಲ್ಲ. |

**ಚಟುವಟಿಕೆ-೫. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

| ೧. "ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ?'' | |
|---|---|
| ಗಾದೆಯ ಮಹತ್ವ | |
| ಅರ್ಥ ವಿವರಣೆ | |

| ೨. ಆಚಾರವೇ ಸ್ವರ್ಗ; ಅನಾಚಾರವೇ ನರಕ. | |
|---|---|
| ಗಾದೆಯ ಮಹತ್ವ | ಗಾದೆಗಳು ವೇದಗಳಿಗೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಗ್ರಾಮೀಣ ಜನರ ಜೀವನಾಡಿಗಳಾಗಿವೆ. ಅವು ಹಿರಿಯರ ಅನುಭವ ಸಾರವಾಗಿವೆ. 'ಆಚಾರವೇ ಸ್ವರ್ಗ ಅನಾಚಾರವೇ ನರಕ'.ಎಂಬ ಈ ಗಾದೆಯು ಕನ್ನಡದ ಪ್ರಸಿದ್ದ ಗಾದೆಗಳಲ್ಲಿ ಒಂದಾಗಿದೆ. |
| ಅರ್ಥ ವಿವರಣೆ | ಜೀವನದಲ್ಲಿ ಚಿಕ್ಕಂದಿನಿಂದಲೇ ಒಳ್ಳೆಯ ಆಚಾರ-ವಿಚಾರಗಳನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ನಮಗೆ ಉತ್ತಮವಾದ ಗೌರವ ಮಾನ್ಯಗಳು ದೊರಕುತ್ತವೆ. ಇದರಿಂದ ನಮಗೆ ಸುಖ ಮತ್ತು ನೆಮ್ಮದಿಯುತವಾದ ಜೀವನ ನಡೆಸಲು ಸಾಧ್ಯವಾಗುತ್ತದೆ. ಅದಕ್ಕೆ ವಿರುದ್ಧವಾಗಿ ನಾವು ಉತ್ತಮ ಆಚಾರ-ವಿಚಾರಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳದೇ ಇದ್ದರೆ ಸಮಾಜ ನಮ್ಮನ್ನು ದೂಷಿಸಲು ಪ್ರಾರಂಭಿಸುತ್ತದೆ. ಆಗ ನಮ್ಮ ಜೀವನ ನರಕ ಸದೃಶ್ಯವಾದ ಕಷ್ಟಕ್ಕೆ ಸಿಲುಕುತ್ತದೆ. ಆದ್ದರಿಂದ ಉತ್ತಮ ಆಚಾರ-ವಿಚಾರಗಳನ್ನು ಅಳವಡಿಸಿಕೊಳ್ಳಬೇಕೆಂದು ಈ ಗಾದೆಯು ಜೀವನ ಮೌಲ್ಯವನ್ನು ಸೂಚಿಸುತ್ತದೆ. |

| ೨. ಆಚಾರವೇ ಸ್ವರ್ಗ ಅನಾಚಾರವೇ ನರಕ. |
|---|

| | |
|---|---|
| ಗಾದೆಯ ಮಹತ್ವ | |
| ಅರ್ಥ ವಿವರಣೆ | |

## ಗದ್ಯಭಾಗ–೪. **ಯಶೋಧರೆ.**



–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕನ್ನಡಸಾಹಿತ್ಯ ಲೋಕದಲ್ಲಿ 'ಸಣ್ಣಕಥೆಗಳ ಜನಕ'ರೆಂದೇ ಖ್ಯಾತಿಪಡೆದ 'ಶ್ರೀನಿವಾಸ' ಕಾವ್ಯನಾಮದಿಂದ ಹೆಸರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ ಎಂಬ ಗ್ರಾಮದಲ್ಲಿ ಸಾ.ಶ. ೬–೬–೧೮೯೧ ರಲ್ಲಿ ಜನಿಸಿದರು. 'ಮೈಸೂರು ಸಿವಿಲ್ ಸರ್ವಿಸ್' ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದು ಅಸಿಸ್ಟೆಂಟ್ ಕಮಿಷನರ್ ಆಗಿ ರಾಜ್ಯದ ವಿವಿಧೆಡೆ ಸೇವೆಸಲ್ಲಿಸಿರುತ್ತಾರೆ. ಇವರ ಸಣ್ಣಕಥೆಗಳು ಒಟ್ಟು ಹದಿಮೂರು ಸಂಪುಟಗಳಲ್ಲಿ ಪ್ರಕಟವಾಗಿವೆ. 'ಗೌತಮಿ ಹೇಳಿದ ಕಥೆ', 'ಸಾರಿಪುತ್ರನ ಕೊನೆಯ ದಿನಗಳು', 'ಕುಚೇಲನ ಭಾಗ್ಯ, 'ಹೇಮಕೂಟದಿಂದ ಬಂದ ಮೇಲೆ', 'ಚಿಕವೀರರಾಜೇಂದ್ರ' ಮೊದಲಾದವು ಇವರ ಪ್ರಮುಖ ಕೃತಿಗಳು. ಇವರ 'ಚಿಕವೀರರಾಜೇಂದ್ರ' ಕಾದಂಬರಿಗೆ ೧೯೮೩ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಇವರು ೬–೬–೧೯೮೬ರಲ್ಲಿ ನಿಧನರಾದರು.

**ಚಟುವಟಿಕೆ–೨ . ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**



೧.ಸಾಮಾಜಿಕ ನಾಟಕ ದೃಶ್ಯ



೨.ಪೌರಾಣಿಕ ನಾಟಕ ದೃಶ್ಯ

**ಚಟುವಟಿಕೆ-೧. ಮೇಲಿನ ಚಿತ್ರಗಳನ್ನು ನೋಡಿ ನಿಮ್ಮ ಅಭಿಪ್ರಾಯ ಬರೆಯಿರಿ.**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಯಶೋಧರೆ ಮತ್ತೊಮ್ಮೆ ಯಾರನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ?

ಉತ್ತರ: ಯಶೋಧರೆ ಮತ್ತೊಮ್ಮೆ ತನ್ನ ಪತಿಯನ್ನು ನೀಡಬೇಕೆಂದು ರಾಜನಲ್ಲಿ ಬೇಡುವಳು.

೨. ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು?

ಉತ್ತರ: ತಂದೆಯನ್ನು ಕರೆತರಲು ಹೋಗುವೆನೆಂದು ರಾಹುಲ ಹೇಳಿದನು.

೩. ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರಾರು?

ಉತ್ತರ: ರಾಜನಿಗೆ ಕನಸಿನ ವಿಚಾರವನ್ನು ಅಂಬಿಕೆ ತಿಳಿಸಿದಳು.

೪. ಸಂಪ್ರದಾಯಕ್ಕೆ ವಿರುದ್ಧವಾದದ್ದು ಯಾವುದು?

ಸಂನ್ಯಾಸಿಯಾದವನು ಸತಿಯನ್ನು ನೋಡುವುದು ಸಂಪ್ರದಾಯಕ್ಕೆ ವಿರುದ್ಧವಾದುದು.

೫. ಈಗ ನೀನಿರುವ ಸ್ಥಿತಿ ಯಾವುದೆಂದು ರಾಜ ಹೇಳುತ್ತಾನೆ.

ಈಗ ನೀನಿರುವ ಸ್ಥಿತಿ ಸಂನ್ಯಾಸತ್ವದ ಸ್ಥಿತಿ ಎಂದು ಯಶೋಧರೆಗೆ ರಾಜ ಹೇಳುವನು.

**ಚಟುವಟಿಕೆ–೩.**

**(ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.)**

೧.

೨.

೩.

೪.

೫.

| ಹೊಂದಿಸಿ ಬರೆಯಿರಿ. | | |
|---|---|---|
| ‘ಅ’ | ‘ಬ’ | ಸರಿ ಉತ್ತರ |
| ಯಶೋಧರೆ | ಸಖಿ | ಯುವರಾಣಿ |
| ಶುದ್ಧೋದನ | ಬುದ್ಧನ ಮಗ | ಗೌತಮ ಬುದ್ಧ |
| ಅಂಬಿಕೆ | ರಾಜ | ಸಖಿ |
| ರಾಹುಲ | ಗೌತಮ ಬುದ್ಧ | ಬುದ್ಧನ ಮಗ |
| ಸಿದ್ಧಾರ್ಥ | ಯುವರಾಣಿ | ರಾಜ |

**ಚಟುವಟಿಕೆ–೪. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.**

| ‘ಅ’ | ‘ಬ’ | ಸರಿ ಉತ್ತರ |
|---|---|---|
| | | |
| | | |
| | | |
| | | |
| | | |

ಈ ಕೆಳಗಿನ ಪದಗಳಿಗೆ ತದ್ಭವ ಪದಗಳನ್ನು ಬರೆಯಿರಿ.

| **ತತ್ಸಮ** | **ತದ್ಭವ** |
|---|---|
| ವಿನೋದ | ಬಿನದ |
| ದುಃಖ | ದುಕ್ಕ |
| ರಾಜ | ರಾಯ |
| ಕಾರ್ಯ | ಕಜ್ಜ |

ಚಟುವಟಿಕೆ–೫. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.

| ತತ್ಸಮ | **ತದ್ಭವ** |
|---|---|
| | |
| | |
| | |
| | |

ಈ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.

| | | |
|---|---|---|
| ನಿನ್ನಾಣ್ಮ | ನಿನ್ನ + ಆಣ್ಮ | ಲೋಪಸಂಧಿ |
| ಚಕ್ರಾಧಿಪತಿ | ಚಕ್ರ + ಅಧಿಪತಿ | ಸವರ್ಣದೀರ್ಘಸಂಧಿ |
| ಹರಕೆಯನು | ಹರಕೆ + ಅನು | ಲೋಪಸಂಧಿ |
| ಪತಿಯೊಡನೆ | ಪತಿ + ಒಡನೆ | ಲೋಪಸಂಧಿ |
| ಇಂದಳುತ | ಇಂದು + ಅಳುತ | ಲೋಪಸಂಧಿ |

ಚಟುವಟಿಕೆ–೬.ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.

| | | |
|---|---|---|
| ನಿನ್ನಾಣ್ಮ | | |
| ಚಕ್ರಾಧಿಪತಿ | | |
| ಹರಕೆಯನು | | |
| ಪತಿಯೊಡನೆ | | |
| ಇಂದಳುತ | | |

# ಲಿಂಗ, ವಚನ ಮತ್ತು ವಾಕ್ಯಗಳ ಪರಿಚಯಾತ್ಮಕ ವಿವರ.

- ಲಿಂಗಗಳು:

ಶ್ಯಾಮ ಗಿರೀಶನಿಗೆ ಬುದ್ದಿ ಹೇಳಿದನು. ಗೌರಿ ತನ್ನ ತಂಗಿಗೆ ಪುಸ್ತಕವನ್ನು ಕೊಟ್ಟಳು. ಆಡು ಸೊಪ್ಪನ್ನು ತಿನ್ನುತ್ತದೆ. ಮೊದಲ ವಾಕ್ಯದಲ್ಲಿರುವ ಶ್ಯಾಮ, ಗಿರೀಶ ಎಂಬ ಪದಗಳು ಗಂಡಸರಿಗೂ ಮತ್ತು ಗೌರಿ, ತಂಗಿ ಪದಗಳು ಹೆಂಗಸರಿಗೂ ಹಾಗೂ ಆಡು, ಸೊಪ್ಪು ಪದಗಳು ಗಂಡಸೂ ಅಲ್ಲದ ಹೆಂಗಸೂ ಅಲ್ಲದ ಬೇರೆ ಯಾವುದಕ್ಕೋ ಸಂಬಂಧಿಸಿದ್ದೆಂದು ತಿಳಿಯುತ್ತದೆ. 'ಗಂಡಸು' ಎಂಬ ಅರ್ಥ ನೀಡುವ ಪದಗಳನ್ನು ಪುಲ್ಲಿಂಗ ಎಂತಲೂ 'ಹೆಂಗಸು' ಎಂಬ ಅರ್ಥ ನೀಡುವ ಪದಗಳನ್ನು ಸ್ತ್ರೀಲಿಂಗ ಎಂತಲೂ 'ಗಂಡಸು' ಎಂಬ ಅರ್ಥವನ್ನೂ 'ಹೆಂಗಸು' ಎಂಬ ಅರ್ಥವನ್ನೂ ನೀಡದ ಪದಗಳನ್ನು ನಪುಂಸಕಲಿಂಗ ಎಂತಲೂ ಕರೆಯುವರು.

* ಲಿಂಗದ ವಿಧಗಳು: ಸ್ತ್ರೀಲಿಂಗ, ಪುಲ್ಲಿಂಗ ಮತ್ತು ನಪುಂಸಕ ಲಿಂಗಗಳೆಂದು ಮೂರು ವಿಧದಲ್ಲಿ ಲಿಂಗ ಪ್ರಕಾರಗಳಿವೆ.
* ವಚನಗಳು:

ವಚನ ಎಂದರೆ ಎಣಿಕೆ ಎಂದರ್ಥ. ವಸ್ತು ಅಥವಾ ವ್ಯಕ್ತಿಗಳನ್ನು ಎಣಿಸುವಾಗ ಒಂದು ಅಥವಾ ಒಂದಕ್ಕಿಂತ ಹೆಚ್ಚು ಎಂದು ಎಣಿಸಿ ಒಂದಕ್ಕಿಂತ ಹೆಚ್ಚಾದರೆ ಎಷ್ಟು ಎಂದು ನಿರ್ಧರಿಸುತ್ತೇವೆ. ಹೀಗೆ ಒಂದು ವಸ್ತು ಅಥವಾ ಒಬ್ಬ ವ್ಯಕ್ತಿಯನ್ನು ಸೂಚಿಸುವ ಪದಗಳೇ ಏಕವಚನ. ಒಂದಕ್ಕಿಂತ ಹೆಚ್ಚು ಇರುವ ವಸ್ತು ಅಥವಾ ವ್ಯಕ್ತಿಗಳನ್ನು ಸೂಚಿಸುವ ಪದಗಳೇ ಬಹುವಚನ. ಏಕವಚನದ ನಾಮಪ್ರಕೃತಿಗಳಿಗೆ ಅರು, ವು, ಗಳು, ಅಂದಿರು ಇತ್ಯಾದಿ ಬಹುವಚನ ಸೂಚಕಗಳು ಸೇರಿ ಬಹುವಚನ ಪದಗಳಾಗುತ್ತವೆ. ಉದಾ : ರಾಜ + ಅರು > ರಾಜರು, ನೀನು + ವು > ನೀವು, ಮರ + ಗಳು > ಮರಗಳು, ರಾಣಿ + ಅರು > ರಾಣಿಯರು, ಅಣ್ಣ + ಅಂದಿರು > ಅಣ್ಣಂದಿರು.

- ವಾಕ್ಯ:

ಪದಗಳ ಅರ್ಥಪೂರ್ಣ ಸಮೂಹವನ್ನು ವಾಕ್ಯ ಎಂದು ಕರೆಯುವರು.

- ವಾಕ್ಯ ಪ್ರಭೇದಗಳು: ವಾಕ್ಯಗಳನ್ನು ಸಾಮಾನ್ಯ, ಸಂಯೋಜಿತ ಮತ್ತು ಮಿಶ್ರವಾಕ್ಯ ಎಂಬುದಾಗಿ ಮೂರು ವಿಭಾಗ ಮಾಡಲಾಗಿದೆ.

೧. ಸಾಮಾನ್ಯವಾಕ್ಯ: ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ವಾಕ್ಯವಾಗಿರುವ ವಾಕ್ಯಗಳೇ ಸಾಮಾನ್ಯವಾಕ್ಯ ಎನ್ನುವರು. ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು. ೨. ಹತ್ತನೆಯ ಶತಮಾನದವರೆಗೆ ಗಂಗರು ತಲೆಯೆತ್ತಿ ಬಾಳಿದರು. ಈ ಎರಡೂ ವಾಕ್ಯಗಳು ಒಂದೊಂದು ಪೂರ್ಣ ಕ್ರಿಯಾಪದದೊಡಗೂಡಿ ಸ್ವತಂತ್ರ ವಾಕ್ಯಗಳಾಗಿವೆ.

**೨. ಸಂಯೋಜಿತವಾಕ್ಯ:**

ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಎರಡು ಅಥವಾ ಹೆಚ್ಚು ಉಪವಾಕ್ಯಗಳು ಸೇರಿ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ. ಪಾಂಡವರ ಯಜ್ಞ ತುರಗ ಮಣಿಪುರವನ್ನು ಪ್ರವೇಶಿಸಿತು; ಆಗ ಬಭ್ರುವಾಹನನು ಅದನ್ನು ಕಟ್ಟಿ ಹಾಕಿದನು ; ಆದ್ದರಿಂದ ಬಭ್ರುವಾಹನನಿಗೂ ಅರ್ಜುನನಿಗೂ ಯುದ್ಧ ನಡೆಯಿತು. ಇಲ್ಲಿ ಮೂರು ಸ್ವತಂತ್ರ ವಾಕ್ಯಗಳು 'ಆಗ', 'ಆದ್ದರಿಂದ' ಪದಗಳ ಸಹಾಯದಿಂದ ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣಾರ್ಥದ ವಾಕ್ಯವಾಗಿದೆ.

**೩.ಮಿಶ್ರವಾಕ್ಯ:**

ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯವೇ ಮಿಶ್ರವಾಕ್ಯ ಗಾಯತ್ರಿ ಗಾಯನ ಸ್ಪರ್ಧೆಯಲ್ಲಿ ಗೆದ್ದಳಾದರೂ ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗದಿದ್ದಾಗ ಆಕೆ ತುಂಬಾ ನೊಂದುಕೊಂಡಳು.ಇಲ್ಲಿ 'ಆಕೆ ತುಂಬಾ ನೊಂದುಕೊಂಡಳು' ಎಂಬ ಪ್ರಧಾನ ವಾಕ್ಯಕ್ಕೆ 'ಗಾಯತ್ರಿ ಗಾಯನ ಸ್ಪರ್ಧೆಯಲ್ಲಿ ಗೆದ್ದಳು' 'ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗಲಿಲ್ಲ' ಎಂಬ ಉಪವಾಕ್ಯಗಳು ಅಧೀನವಾಗಿ 'ಮಿಶ್ರವಾಕ್ಯ'ವಾಗಿದೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

ಚಟುವಟಿಕೆ–೭. ಮೇಲಿನ ಮಾದರಿಯಂತೆ ನೋಡಿ ಬರೆಯಿರಿ.

೧. ಲಿಂಗದ ವಿಧಗಳಾವುವು?

೨. ಬಹುವಚನವನ್ನು ಉದಾರಣೆಯೊಂದಿಗೆ ತಿಳಿಸಿರಿ.

೩. ವಾಕ್ಯ ಎಂದರೇನು?

೪. ವಾಕ್ಯ ಪ್ರಭೇದಗಳ ಪರಿಚಯ ಮಾಡಿರಿ.

ಚಟುವಟಿಕೆ–೮. ಕೊಟ್ಟಿರುವ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಾಗಿ ವರ್ಗೀಕರಿಸಿ ಬರೆಯಿರಿ.

ರಾಹುಲ, ಯಶೋಧರೆ, ಸಖಿ, ಅಮ್ಮಾಜಿ, ರಾಜ, ವಿಧಿ, ಅಂಬಿಕೆ, ಸತಿ, ಲೋಕ, ಅರಮನೆ, ತಂದೆ, ಸನ್ಯಾಸ, ಹುಲಿ, ಕನಸು

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕ ಲಿಂಗ |
|---|---|---|
| | | |

ಚಟುವಟಿಕೆ–೯. ಕೊಟ್ಟಿರುವ ಪದಗಳ ಬಹುವಚನ ರೂಪ ಬರೆಯಿರಿ.

ನಾನು, ಅಮ್ಮ, ಕಿರಿಯ, ರಾಜ, ನನ್ನ, ಲೋಕ, ಬಾಲಕ, ಮಗು, ತಾಯಿ, ದೇವ, ಸ್ವರ, ನೀನು

| | | | |
|---|---|---|---|
| | | | |
| | | | |

**ಚಟುವಟಿಕೆ–೧೦. ಕೊಟ್ಟಿರುವ ವಾಕ್ಯಗಳಲ್ಲಿರುವ ಕರ್ಮ, ಕ್ರಿಯಾ ಹಾಗೂ ಕರ್ತೃಪದಗಳನ್ನು ಆರಿಸಿ ಬರೆಯಿರಿ.**

೧. ಅಮ್ಮ ಅಣ್ಣನನ್ನು ಕರೆಯುವೆನು.

೨. ಸನ್ಯಾಸವನು ಕೊಂಡು ಪತಿಯನ್ನು ಸೇರುವೆನು.

೩. ಸಿದ್ಧಾರ್ಥನು ಕರೆಯನ್ನು ಕೇಳಿಸಿಕೊಳ್ಳಲಿಲ್ಲ.

| ಕರ್ಮ | ಕ್ರಿಯಾ | ಕರ್ತೃ |
|---|---|---|
| | | |
| | | |

ಚಟುವಟಿಕೆ–೧೧.

೪. ಕೊಟ್ಟಿರುವ ಸಾಮಾನ್ಯ ವಾಕ್ಯಗಳನ್ನು ಸಂಯೋಜಿತ ವಾಕ್ಯವಾಗಿ ಪರಿವರ್ತಿಸಿ ಬರೆಯಿರಿ.

* ವಾಸುವಿನ ತಲೆಗೆ ಹಾಕಿದ ಎಣ್ಣೆ ಹಣೆಯ ಮೂಲಕ ಇಳಿದು ಕಣ್ಣುಗಳನ್ನು ಪ್ರವೇಶಿಸಿತು.
* ಅವನ ಕಣ್ಣುಗಳು ಉರಿಯತೊಡಗಿದವು.
* ಅವನು ಕಣ್ಣುಗಳನ್ನು ಬಟ್ಟೆಯಿಂದ ಉಜ್ಜತೊಡಗಿದನು.

| |
|---|
| |
| |
| |
| |
| |

**ಸಂದರ್ಭ ಪ್ರಶ್ನೆಗಳು:**

| ಸಾಂದರ್ಭಿಕ ಪ್ರಶ್ನೆಗಳು | ಯಾರು?ಯಾರಿಗೆ? | ಸಂದರ್ಭ |
|---|---|---|
| ೧. "ಸೋದರಿಯ ಸುತೆಯೆಂದು ಎಳೆತನದಲೆ ನನ್ನ ಕರೆತಂದು ಸಾಕಿದಿರಿ" | ಯಶೋಧರೆಯು ರಾಜನಿಗೆ | ಪತಿಯನ್ನು ನೆನೆದು ದು:ಖಿಸುತ್ತಿರುವಾಗ |
| ೨. "ಅಮ್ಮಾಜಿ, ನಿನಗೆ ಭಯಬೇಡಮ್ಮಾ ನಾಮರಳಿ ಬಹೆನಮ್ಮ" | ರಾಹುಲನು ಯಶೋಧರೆಗೆ | ತಂದೆಯನ್ನು ಕರೆತರಲು ಹೋಗುವಾಗ |
| ೩. "ನಿನ್ನ ವಿಧಿ ಕೆಟ್ಟುದೆಂದೆಣಿಸದಿರು ಅಮ್ಮಾಜಿ" | ರಾಜನು ಯಶೋಧರೆಗೆ | ರಾಹುಲನು ತನ್ನನ್ನು ಮರೆ ಯುವನೋ ಎಂದು ದು:ಖಿಸುತ್ತಿರುವಾಗ |
| ೪. "ನಿದ್ದೆಯಲಿ ಮುಳುಗಲಿನ್ನಾವ ಕನಸಿನ ಮೊಸಳೆ ಹಿಡಿಯುವುದೋ" | ಯಶೋಧರೆಯು ರಾಜನಿಗೆ | ಕೆಟ್ಟ ಕನಸಿನ ವಿಷಯ ನೆನೆದು ದು:ಖಿಸುತ್ತಿರುವಾಗ |

ಆಯ್ಕೆ ಈ ವಾಕ್ಯವನ್ನು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರಚಿಸಿರುವ 'ಯಶೋಧರೆ' ಎಂಬ ನಾಟಕದಿಂದ ಆಯ್ದುಕೊಳ್ಳಲಾಗಿದೆ.

ಆಕರ ಕೃತಿ 'ಯಶೋಧರೆ'.

**ಚಟುವಟಿಕೆ–೧೨. ಸಂದರ್ಭ ಬರೆಯುವ ಮಾದರಿ:**

| | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

ಚಟುವಟಿಕೆ–೭.

ಲಿಂಗಗಳು.

| ಸ್ತ್ರೀಲಿಂಗ | ಪುಲ್ಲಿಂಗ | ನಪುಂಸಕ ಲಿಂಗ |
|---|---|---|
| ಯಶೋಧರೆ | ರಾಜ | ಹೂವು |
| ಅಂಬಿಕೆ | ರಾಹುಲ | ಪಟ |
| ಮಾದರಿಯಂತೆ ಕೆಳಗಿನ ಖಾಲಿ ಜಾಗದಲ್ಲಿ ಬರೆಯಿರಿ. | | |
| | | |
| | | |

ಚಟುವಟಿಕೆ–೮.

ವಚನಗಳು–ಮಾದರಿಯಂತೆ ಕೆಳಗಿನ ಖಾಲಿ ಜಾಗದಲ್ಲಿ ಬರೆಯಿರಿ.

| ಏಕವಚನ | ಬಹುವಚನ | ಏಕವಚನ | ಬಹುವಚನ |
|---|---|---|---|
| ಮರ | ಮರಗಳು | | |
| ಅಕ್ಕ | ಅಕ್ಕಂದಿರು | | |

## ಪದ್ಯ ಭಾಗ-೪. ಸೋಮೇಶ್ವರ ಶತಕ.

-ಪುಲಿಗೆರೆ ಸೋಮನಾಥ

ಸಾಮಾನ್ಯ ಶಕ ಸುಮಾರು ೧೨೪೯ ರಲ್ಲಿ ಧಾರವಾಡ ಜಿಲ್ಲೆ, ಶಿರಹಟ್ಟಿ ತಾಲೂಕಿನ ಹುಲಿಗೆರೆಯಲ್ಲಿ ಜನಿಸಿದರು. ಪುಲಿಗೆರೆ ಸೋಮನಾಥ ಎಂದೇ ಪ್ರಸಿದ್ಧರು. ಕನ್ನಡ, ಸಂಸ್ಕೃತ ಭಾಷಾ ಪಂಡಿತರಾದ ಇವರು 'ಹರಹರ ಶ್ರೀ ಚನ್ನ ಸೋಮೇಶ್ವರ' ಎಂಬ ಅಂಕಿತನಾಮವನ್ನು ಹೊಂದಿದ್ದು, 'ಕನ್ನಡ ರತ್ನ ಕರಂಡಕ' ಕಾವ್ಯವನ್ನು ಚಂಪೂವಿನಲ್ಲೂ ಸೋಮೇಶ್ವರ ಶತಕವನ್ನು ವೃತ್ತ ಛಂದಸ್ಸಿನಲ್ಲಿ ರಚಿಸಿದ್ದಾರೆ. ಪ್ರಸ್ತುತ ಪದ್ಯ ಭಾಗವನ್ನು ಕನ್ನಡ ಸಾಹಿತ್ಯ ಪರಿಷತ್ತು ಸಂಪಾದಿಸಿರುವ 'ಸೋಮೇಶ್ವರ ಶತಕ' ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಚಟುವಟಿಕೆ-೧. ಕೃತಿಕಾರರ ಪರಿಚಯವನ್ನು ಬಿಟ್ಟ ಸ್ಥಳಗಳನ್ನು ತುಂಬುವ ಮೂಲಕ ಪೂರ್ಣ ಗೊಳಿಸುವುದು.

ಪುಲಿಗೆರೆಸೋಮನಾಥ ಸಾಮಾನ್ಯ ಶಕ ಸುಮಾರು -------- ರಲ್ಲಿ ------------ ಜಿಲ್ಲೆ, ------------ ತಾಲೂಕಿನ --------------- ಯಲ್ಲಿ ಜನಿಸಿದರು. ಪುಲಿಗೆರೆ ಸೋಮನಾಥ ಎಂದೇ ಪ್ರಸಿದ್ಧರು. ಕನ್ನಡ, ಸಂಸ್ಕೃತ ಭಾಷಾ ಪಂಡಿತರಾದ ಇವರು -------------------------------- ಎಂಬ ಅಂಕಿತನಾಮವನ್ನು ಹೊಂದಿದ್ದರು. ಕನ್ನಡ ------------- ಕಾವ್ಯವನ್ನು ಚಂಪೂವಿನಲ್ಲಿಯೂ ------------------------- ವೃತ್ತ ಛಂದಸ್ಸಿನಲ್ಲಿಯೂ ರಚಿಸಿದ್ದಾರೆ. ಪ್ರಸ್ತುತ ಪದ್ಯ ಭಾಗವನ್ನು ಕನ್ನಡ ಸಾಹಿತ್ಯ ಪರಿಷತ್ತು ಸಂಪಾದಿಸಿರುವ ----------------------- ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

ಚಟುವಟಿಕೆ.-೨. ಒಂದು ಬಾರಿ ನೋಡದೆ ಪೂರ್ಣವಾಗಿ ಬರೆಯುವುದು.

**ಪದ್ಯ ಭಾಗದ ಪ್ರಮುಖ ಅಂಶಗಳು:**

೧. ಹಿತವನ್ನು ತೋರುವವನು ಆತ್ಮ ಬಂಧು.

೨. ಸಾಕಿ ಸಲಹುವವನು ತಂದೆ. ಎಲ್ಲ ರೀತಿಯ ಸಾಧನೆಗೆ ಧರ್ಮದಿಂದ ನಡೆಯುವ ಸತಿಯೇ ಕಾರಣಳಾಗಿದ್ದಾಳೆ.

೩. ಒಂದೇ ಅಕ್ಷರವನ್ನು ಕಲಿಸಿದವರೂ ಗುರು. ಹಿಡಿದ ನಿಯಮವನ್ನು ಬಿಡದೆ ಪಾಲಿಸುವವನು ಸುವ್ರತಿ.

೪. ಮಗ/ಸುತನಿಂದಲೇ ಸದ್ಗತಿ ದೊರೆಯುತ್ತದೆ.

೫. ಪ್ರಜೆಗಳನ್ನು ರಕ್ಷಿಸುವವನು ರಾಜ. ಲಂಚಕ್ಕೆ ಕೈ ಚಾಚದವನು ಮಂತ್ರಿ.

೬. ತಂದೆ ತಾಯಿಯರನ್ನು ಸಲಹುವವನು ನಿಜವಾದ ಧಾರ್ಮಿಕ.

೭. ದೇವರ ಮೇಲೆ ನಿಜವಾದ ಭಕ್ತಿ ಉಳ್ಳವನೇ ಭಕ್ತ. ಹೆದರದೆ ಧೈರ್ಯದಿಂದ ಇರುವವನೇ ಸೈನಿಕ.

೮. ಆಚಾರಗಳನ್ನು ಪಾಲಿಸುವ ನಿಜವಾದ ಬ್ರಾಹ್ಮಣ.

೯. ಮಂತ್ರಿಯಾದವನು ಗಂಭೀರನಾಗಿರಬೇಕು, ಧೀರನು, ಮಹಾಸಂಪನ್ನನೂ ಆಗಿರಬೇಕು. ಸತ್ಯವಂತನಾಗಿರಬೇಕು

೧೦. ಲಂಚಕ್ಕೆ ಕೈ ಚಾಚದವನಾಗಿರಬೇಕು, ಹಲವಾರು ಭಾಷೆಗಳನ್ನು ಬಲ್ಲವನಾಗಿರಬೇಕು, ಚತುರೋಪಾಯಗಳನ್ನು ಬಲ್ಲವನಾಗಿರಬೇಕು, ರಾಜನ ಆದೇಶಗಳನ್ನು ಪಾಲಿಸುವಂತವನಾಗಿರಬೇಕು.

೧೧. ಪ್ರಕೃತಿಯಲ್ಲಿ ಕಾಲಕಾಲಕ್ಕೆ ಬದಲಾವಣೆಯಾಗುವುದು ಸಹಜ.

೧೨. ಅಮವಾಸೆಗೆ ಕಾಣದಿರುವ ಚಂದ್ರನು ದಿನೇ ದಿನೇ ಹೆಚ್ಚುತ್ತಾ ಹುಣ್ಣಿಮೆಯಂದು ಪ್ರಕಾಶಮಾನವಾಗುತ್ತಾನೆ.

**ಚಟುವಟಿಕೆ.-೩. ಸುಳಿವುಗಳನ್ನು ಆಧರಿಸಿ ಪದ್ಯ ಭಾಗದ ಸಾರಾಂಶವನ್ನು ಬರೆಯಿರಿ.**

ಆತ್ಮ ಬಂಧು, ಅಕ್ಷರ ಕಲಿಸಿದವನು, ನಿಯಮ ಪಾಲಿಸು, ಪಿತೃಗಳಿಗೆ ಸದ್ಗತಿ, ನಿಜವಾದ ಭಕ್ತ, ಧೈರ್ಯದಿಂದಿರು, ಸೈನಿಕ, ಮಂತ್ರಿ, ಲಂಚಕ್ಕೆ ಕೈಚಾಚದ, ಚತುರೋಪಾಯ, ಚಂದ್ರ, ಆಲದ ಬೀಜ, ಎಳೆಯಕರು, ಬಡವ, ಶ್ರೀಮಂತ.

**ಒಂದು ವಾಕ್ಯದ ಪ್ರಶ್ನೆಗಳು.**

೧. ನಿಜವಾದ ಬಂಧು ಯಾರು?
   ಉತ್ತರ: ಹಿತವನ್ನು ಬಯಸುವವನು ನಿಜವಾದ ಬಂಧು.
೨. ಧಾರ್ಮಿಕನೆಂದು ಯಾರನ್ನು ಕರೆಯಲಾಗಿದೆ?
   ಉತ್ತರ: ತಂದೆ-ತಾಯಿಯನ್ನು ಸಲಹಲು ಬಲ್ಲವನು ಧಾರ್ಮಿಕ ಎಂದು ಕರೆಯಲಾಗಿದೆ.
೩. ರಾಜನಾದವನ ಕರ್ತವ್ಯವೇನು?
   ಉತ್ತರ: ಪ್ರಜೆಗಳನ್ನು ರಕ್ಷಣೆ ಮಾಡುವುದು ರಾಜನಾದವನ ಕರ್ತವ್ಯ.
೪. ಆಲದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ?
   ಉತ್ತರ: ಆಲದ ಬೀಜ ಭೂಮಿಗೆ ಬಿದ್ದು ಹೆಮ್ಮರವಾಗುತ್ತದೆ.
೫. ಪುಲಿಗೆರೆ ಸೋಮನಾಥನ ಅಂಕಿತನಾಮವೇನು?
   ಉತ್ತರ: ಹರಹರಾ ಶ್ರೀಚನ್ನಸೋಮೇಶ್ವರ ಪುಲಿಗೆರೆ ಸೋಮನಾಥನ ಅಂಕಿತನಾಮ.

**ಚಟುವಟಿಕೆ-೪. ಮಾದರಿಯಂತೆ ಕೆಳಗಿನ ಖಾಲಿ ಜಾಗದಲ್ಲಿ ಉತ್ತರಗಳನ್ನು ಬರೆಯಿರಿ.**

೧.

೨.

೩.

೪.

೫.

### ಪದ್ಯ ಭಾಗದಲ್ಲಿ ಬಂದಿರುವ ಸಾಂದರ್ಭಿಕ ಹೇಳಿಕೆಗಳು

| ಸಾಂದರ್ಭಿಕ ಪ್ರಶ್ನೆಗಳು | ಯಾರು? ಯಾರಿಗೆ? | ಸಂದರ್ಭ |
|---|---|---|
| ಸದ್ಧರ್ಮದಾ ಸತಿಯೇ ಸರ್ವಕೆ ಸಾಧನಂ | ವಚನಕಾರರು ಓದುಗರಿಗೆ | ವ್ಯಕ್ತಿಗಳ ಗುಣಗಳನ್ನು ಹೇಳುವಾಗ |
| ಅತಿ ಗಂಭೀರನುದಾರ ಧೀರನು | ವಚನಕಾರರು ಓದುಗರಿಗೆ | ಮಂತ್ರಿಯ ಗುಣಲಕ್ಷಣಗಳನ್ನು ಹೇಳುವಾಗ |
| ಉಡುರಾಜಂ ಕಳೆಗುಂದಿ ಪೆರ್ಚದಿಹನೆ | ವಚನಕಾರರು ಓದುಗರಿಗೆ | ಪ್ರಕೃತಿಯ ಬದಲಾವಣೆಯನ್ನು ತಿಳಿಸುವಾಗ |

## ಅಲಂಕಾರ:

ಕಾವ್ಯದ ಸೌಂದರವನ್ನು ಹೆಚ್ಚಿಸುವ ಚಮತ್ಕಾರಿಕ ಮಾತುಗಳೇ ಅಲಂಕಾರ. ಅಲಂಕಾರದಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂಬ ಎರಡು ವಿಧಗಳಿವೆ. ಶಬ್ದಾಲಂಕಾರ ಶಬ್ದಗಳ ಜೋಡಣೆಯ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಿದರೆ ಅದನ್ನು ಶಬ್ದಾಲಂಕಾರ ಎನ್ನುತ್ತಾರೆ. ಇದರಲ್ಲಿ ಅನುಪ್ರಾಸ, ಯಮಕ ಮತ್ತು ಚಿತ್ರಕವಿತ್ವ ಎಂದು ಪ್ರಧಾನವಾಗಿ ಮೂರು ವಿಧಗಳಿವೆ. ಅನುಪ್ರಾಸವನ್ನು ವೃತ್ಯನುಪ್ರಾಸ ಮತ್ತು ಛೇಕಾನುಪ್ರಾಸ ಎಂದು ವಿಭಾಗಿಸಲಾಗಿದೆ.

<u>ಅರ್ಥಾಲಂಕಾರ:</u> ಕಾವ್ಯದಲ್ಲಿ ಬಳಸಲಾದ ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಾದರೆ ಅದನ್ನು ಅರ್ಥಾಲಂಕಾರ ಎನ್ನುತ್ತಾರೆ. ಇದರಲ್ಲಿ ನೂರಕ್ಕೂ ಮಿಕ್ಕಿದ ಅಲಂಕಾರಗಳಿವೆ. ಇವುಗಳಲ್ಲಿ ಬರುವ ಉಪಮೇಯ ಉಪಮಾನಗಳ ಸಹಾಯದಿಂದ ಅದು ಯಾವ ಅಲಂಕಾರ ಎಂದು ವಿಂಗಡಿಸಿ ನಿರ್ಧರಿಸಲಾಗುವುದು.

<u>ಉಪಮೇಯ:</u> ಉಪಮೇಯವನ್ನು ವರ್ಣ್ಯ ಎಂತಲೂ ಕರೆಯುವರು. ಆಲಂಕಾರಿಕ ವಾಕ್ಯದಲ್ಲಿ ಯಾವ ವಸ್ತುವನ್ನು ಕುರಿತು ವರ್ಣಿಸಲಾಗುತ್ತದೆಯೋ, ಅದೇ ವರ್ಣ್ಯ ಅಥವಾ ಉಪಮೇಯ.

<u>ಉಪಮಾನ:</u> ಉಪಮಾನವನ್ನು ಅವರ್ಣ್ಯ ಎಂತಲೂ ಕರೆಯುವರು. ಯಾವ ವಸ್ತುವನ್ನು ಆಧರಿಸಿ ಅಥವಾ ಮಾನವಾಗಿಟ್ಟು ಕೊಂಡು ವರ್ಣಿಸಲಾಗುತ್ತದೆಯೋ ಅದೇ ಅವರ್ಣ್ಯ ಅಥವಾ ಉಪಮಾನ.

<u>ಉಪಮಾಲಂಕಾರ:</u> ಉಪಮಾ ಎಂದರೆ ಹೋಲಿಕೆ ಎಂದರ್ಥ. ಯಾವ ಅಲಂಕಾರದಲ್ಲಿ ಉಪಮೇಯ ಉಪಮಾನಗಳೊಳಗೆ ಉಪಮಾ (ಹೋಲಿಕೆ) ಇರುತ್ತದೆಯೋ ಆ ಅಲಂಕಾರವೇ ಉಪಮಾಲಂಕಾರ.

ಉದಾ: ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು. ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವು ದರಿಂದ ಮನೋರಮೆಯ ಹಣೆ ಎಂಬುದು ಉಪಮೇಯವಾಯ್ತು. ಬಾಲಚಂದ್ರನನ್ನು ಆಧಾರವಾಗಿಟ್ಟುಕೊಂಡು ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ ಬಾಲಚಂದ್ರ ಎಂಬುದು ಉಪಮಾನವಾಯ್ತು.

ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳುವಂತಹ ಅಂತೆ, ವೋಲ್, ವೊಲ್ ಮುಂತಾದ ಪದಗಳೇ ವಾಚಕ ಪದಗಳು. ಇಲ್ಲಿ ಅಂತೆ ಎಂಬುದು ವಾಚಕ ಪದ. ಉಪಮೇಯಕ್ಕೂ ಉಪಮಾನಕ್ಕೂ ಸಮಾನವಾಗಿ ಹೊಂದಿಕೆಯಾಗುವ ಅರ್ಥವೇ ಸಮಾನಧರ್ಮ. ಇಲ್ಲಿ ಆಕರ್ಷಣೀಯವಾಗಿತ್ತು ಎಂಬುದು ಸಮಾನಧರ್ಮ. ಉಪಮೇಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳಿರುವುದರಿಂದ ಇದು ಉಪಮಾಲಂಕಾರ, ಉಪಮಾಲಂಕಾರದಲ್ಲಿ ಪೂರ್ಣೋಪಮಾಲಂಕಾರ, ಲುಪ್ತೋಪಲಂಕಾರ ಎಂಬ ಎರಡು ವಿಧಗಳಿವೆ.

<u>ಪೂರ್ಣೋಪಮಾಲಂಕಾರ :</u> ಯಾವ ಉಪಮಾಲಂಕಾರದಲ್ಲಿ ಉಪಮೇಯ, ಉಪಮಾನ, ವಾಚಕ ಪದ. ಸಮಾನಧರ್ಮ ಎಂಬ ನಾಲ್ಕು ಅಂಶಗಳು ಇರುತ್ತವೆಯೋ ಅದುವೇ ಪೂರ್ಣೋಪಮಾಲಂಕಾರ.

ಉದಾ.: ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತಕುಲದ ನೂರೈವರು ಬಾಲಕರು ಬಿದ್ದರು.

ಅಲಂಕಾರ : ಉಪಮಾಲಂಕಾರ (ಪೂರ್ಣೋಪಮಾಲಂಕಾರ)

ಲಕ್ಷಣ : ಎರಡು ವಸ್ತುಗಳ ನಡುವೆ ಪರಸ್ಪರ ಹೋಲಿಕೆಯನ್ನು ತಿಳಿಸುವ ಅಲಂಕಾರವೇ ಉಪಮಾಲಂಕಾರ.

ಉಪಮೇಯ : ಭರತಕುಲದ ನೂರ್ರೈವರು ಬಾಲಕರು

ಉಪಮಾನ : ಬಿರುಗಾಳಿಗೆ ತುತ್ತಾದ ಮರಗಿಡಗಳು

ವಾಚಕಪದ : ಅಂತೆ

ಸಮಾನಧರ್ಮ : ಬೀಳುವುದು

ಸಮನ್ವಯ : ಉಪಮೇಯವಾದ ಭರತಕುಲದ ನೂರ್ರೈವರು ಬಾಲಕರು ಬಿದ್ದಿರುವುದನ್ನು, ಉಪಮಾನವಾದ ಬಿರುಗಾಳಿಗೆ ತುತ್ತಾದ ಮರಗಿಡಗಳಿಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರ. ಈ ಅಲಂಕಾರದಲ್ಲಿ ಉಪಮೇಯ, ಉಪಮಾನ, ವಾಚಕಪದ, ಸಮಾನಧರ್ಮ ಎಂಬ ನಾಲ್ಕು ಅಂಶಗಳಿರುವುದರಿಂದ ಇದು ಪೂರ್ಣೋಪಮಾಲಂಕಾರವೂ ಹೌದು.

<u>ಲುಪ್ತೋಪಮಾಲಂಕಾರ:</u> ಇದು ಉಪಮಾಲಂಕಾರದ ಇನ್ನೊಂದು ಪ್ರಭೇದ. ಪೂರ್ಣೋಪಮಾಲಂಕಾರವಾಗಬೇಕಾದರೆ ಇರಬೇಕಾದ ನಾಲ್ಕು ಅಂಶಗಳಲ್ಲಿ ಯಾವುದಾದರೂ ಅಂಶ ಇಲ್ಲವಾದರೆ ಅದು ಲುಪ್ತೋಪಮಾಲಂಕಾರ. ಯಾವ ಅಂಶ ಲುಪ್ತವಾಗಿದೆಯೋ ಅದೇ ಹೆಸರಿನಿಂದ ಆ ಅಲಂಕಾರವನ್ನು ಕರೆಯಲಾಗುತ್ತದೆ. ಅಂದರೆ ಉಪಮೇಯ ಇಲ್ಲವಾದರೆ ಅದು ಉಪಮೇಯ ಲುಪ್ತೋಪಮಾಲಂಕಾರ. ಹಾಗೆಯೇ ಉಪಮಾನ ಲುಪ್ತೋಪಮಾಲಂಕಾರ, ವಾಚಕಲುಪ್ತೋಪಮಾಲಂಕಾರ, ಧರ್ಮಲುಪ್ತೋಪಮಾಲಂಕಾರ, ವಾಚಕಧರ್ಮಲುಪ್ತೋಮಾಲಂಕಾರ ಇತ್ಯಾದಿ ಲುಪ್ತೋಮಾಲಂಕಾರಗಳಿವೆ.

ಚಟುವಟಿಕೆ–೫. **ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ:**

೧. ಅಲಂಕಾರ ಎಂದರೇನು?

________________________________________

________________________________________

________________________________________

________________________________________

೨. ಉಪಮಾಲಂಕಾರ ಎಂದರೇನು? ಉದಾಹರಣೆಯೊಂದಿಗೆ ತಿಳಿಸಿರಿ.

________________________________________

________________________________________

________________________________________

________________________________________

________________________________________

೩. ಪೂರ್ಣೋಪಮಾಲಂಕಾರ ಎಂದರೇನು? ವಿವರಣೆ ನೀಡಿ.

________________________________________

________________________________________

________________________________________

________________________________________

________________________________________

________________________________________

| ಅಲಂಕಾರ–ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಚಮತ್ಕಾರಿಕ ಮಾತುಗಳೇ ಅಲಂಕಾರ. | | "ಸೀತೆಯ ಮುಖ ಕಮಲದಂತೆ ಅರಳಿತು." |
|---|---|---|
| ಉಪಮೇಯ | ಹೋಲಿಸುವ/ ವರ್ಣಿಸುವ ವಸ್ತು | ಸೀತೆಯ ಮುಖ |
| ಉಪಮಾನ | ಹೋಲಿಕೆಗೆ ವರ್ಣನೆಗೆ ಆಧಾರವಾಗಿರುವ ವಸ್ತು | ಕಮಲ |
| ವಾಚಕ ಪದ | ಅಂತೆ, ಹಾಗೆ, ಹಾಂಗ, ವೋಲ್ | ಅಂತೆ |
| ಸಮಾನ ಧರ್ಮ | ಎರಡು ವಸ್ತುಗಳ ನಡುವಿನಸಮಾನತೆ | ಅರಳುವುದು |
| ಅಲಂಕಾರ | ಉಪಮಾಲಂಕಾರ | |
| ಸಮನ್ವಯ | ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಹೋಲಿಸಲಾಗಿದೆ ಆದ್ದರಿಂದ ಇದು ಉಪಮಾಲಂಕಾರ. | |
| ಲಕ್ಷಣ | ಎರಡು ವಸ್ತುಗಳ ನಡುವೆ ಇರುವ ಹೋಲಿಕೆಯನ್ನು ತಿಳಿಸುವುದೇ ಉಪಮಾ ಅಲಂಕಾರ. | |

ಈ ಮೇಲಿನ ಉದಾಹರಣೆಯಂತೆ ಕೆಳಗಿನ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿರಿ.

" ಗೀಜುಗನ ಗೂಡುಗಳು ತೂಗುವ ತೊಟ್ಟಿಲಿನಂತೆ ತೂಗುತ್ತಿದ್ದವು "

* ಉಪಮೇಯ ------------------------------
* ಉಪಮಾನ -------------------------------
* ವಾಚಕಪದ --------------------------------
* ಸಮಾನ ಧರ್ಮ ---------------------------
* ಅಲಂಕಾರ ---------------------------------

ಕಂಠಪಾಠ.

**ಪದ್ಯವನ್ನು ಹಲವು ಬಾರಿ ನೋಡಿ ಬರೆಯಲು ತಿಳಿಸಿ, ರೂಢಿಗತಗೊಳಿಸುವುದು.**

ಪ್ರಜೆಯಂಪಾಲಿಸಬಲ್ಲೊಡಾತನರಸಂ ಕೈಯಾಸಯಂ ಮಾಡದಂ
ನಿಜಮಂತ್ರಿಶ್ವರ ತಂದೆ ತಾಯ ಸಲಹಲ್  ಬಲ್ಲಾತನೇ ಧಾರ್ಮಿಕಂ
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀ ಚನ್ನ ಸೋಮೇಶ್ವರಾ

ಚಟುವಟಿಕೆ–೬. ಬಿಟ್ಟ ಸಾಲನ್ನು ಬರೆದು ಪೂರ್ಣಗೊಳಿಸಿರಿ.

ಪ್ರಜೆಯಂ------------------------------------

ನಿಜಮಂತ್ರೀಶ್ವರ---------------------------------

ಭಜಕಂ ದೈವದ-------------------------------

ದ್ವಿಜನಾಚಾರತೆ-----------------------------------

## ಪಠ್ಯಪೂರಕ ಅಧ್ಯಯನ–೩. ಮಗಳಿಗೆ ಬರೆದೆ ಪತ್ರ.



– ಜವಹಾರಲಾಲ್ ನೆಹರು.

ಭಾರತದ ಪ್ರಥಮ ಪ್ರಧಾನಿಗಳಾದ ಜವಾಹರಲಾಲ್ ನೆಹರುರವರು ತಮ್ಮ "ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟ್ರಿ" ಎಂಬ ಕೃತಿ ಯಲ್ಲಿ ಭಾರತದ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಬಂಧಿಯಾಗಿ ಬೇರೆಬೇರೆ ಸೆರೆಮನೆಗಳಲ್ಲಿ ವಾಸಮಾಡುವ ಸಂದರ್ಭದಲ್ಲಿ ತಮ್ಮ ಮಗಳಿಗೆ ಪತ್ರರೂಪದಲ್ಲಿ ಪ್ರಪಂಚದ ಇತಿಹಾಸ ಹಾಗೂ ಮಹಾನ್ ನಾಯಕರ ಪರಿಚಯವನ್ನು ಮಾಡಿ ಕೊಡುವ ಪ್ರಯತ್ನ ವಿದೆ. ಈ ಎಲ್ಲಾ ಪತ್ರಗಳನ್ನು ಸಂಗ್ರಹಿಸಿದ ಇವರ ತಂಗಿ ವಿಜಯಲಕ್ಷ್ಮಿಪಂಡಿತ್ ರವರು ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಈ ಕೃತಿಯನ್ನು ತಿರುಮಲೆ ತಾತಾಚಾರ್ಯ ಶರ್ಮ ಅವರು ಹಾಗೂ ಸಿದ್ಧವನಹಳ್ಳಿ ಕೃಷ್ಣಶರ್ಮರವರು "ಜಗತ್ ಕಥಾವಲ್ಲರಿ" ಎಂಬ ಕೃತಿಯಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.

**ಚಟುವಟಿಕೆ–೧. ಮೇಲಿನ ವಿವರಣೆಯನ್ನು ಗಮನಿಸಿ ಕೃತಿಯ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.**

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

೧. ನೆಹರು ಅವರು ಈ ಪತ್ರವನ್ನು ಯಾರಿಗೆ ಬರೆದಿದ್ದಾರೆ?

ಈ ಪತ್ರವನ್ನು ನೆಹರು ಅವರು ತನ್ನ ಮಗಳಾದ ಇಂದಿರಾ ಪ್ರಿಯದರ್ಶಿನಿ ಅವರಿಗೆ ಬರೆದಿದ್ದಾರೆ.

೨. ಹೂಯೆನ್‌ತ್ಸಾಂಗ್ ಭರತಖಂಡಕ್ಕೆ ಏಕೆ ಬಂದನು?

ಹೂಯೆನ್‌ತ್ಸಾಂಗ್ ಭರತಖಂಡಕ್ಕೆ ಜ್ಞಾನಾರ್ಜನೆಗಾಗಿ ಬಂದನು.

೩. ನಲಂದಾ ವಿಶ್ವವಿದ್ಯಾನಿಲಯವು ಎಲ್ಲಿತ್ತು?

ನಲಂದಾ ವಿಶ್ವವಿದ್ಯಾನಿಲಯವು ಪಾಟಲೀಪುತ್ರದ ಬಳಿ ಇತ್ತು. ಈಗ ಅದನ್ನು ಪಾಟ್ನಾ ಎಂದು ಕರೆಯಾಗಿದೆ.

೪. ದಕ್ಷಿಣ ದೇಶದಿಂದ ಬಂದ ಯಾತ್ರಿಕನು ಅವನ ವೇಷದ ಬಗ್ಗೆ ಏನು ಹೇಳುತ್ತಿದ್ದನು?

ದಕ್ಷಿಣ ದೇಶದಿಂದ ಬಂದ ಯಾತ್ರಿಕನು "ನನ್ನ ಜ್ಞಾನವಷ್ಟಿದೆ. ಈ ತಾಮ್ರದ ರೇಕುಗಳನ್ನು ಬಿಗಿಸದೆ ಹೋದರೆ ನನ್ನ ಹೊಟ್ಟೆ ಬಿರಿದೀತು. ನನ್ನ ಸುತ್ತ ಸುಳಿವ ಅಜ್ಞಾನಿಗಳ ಕಂಡೆನಗೆ ''ಅಯ್ಯೋ' ಅನಿಸುತ್ತದೆ. ಅವರೆಲ್ಲ ತಡವಿ ಆಡುತ್ತಿದ್ದಾರೆ. ಅವರಿಗಾಗಿ ನಾ ನನ್ನ ನೆತ್ತಿಯ ಮೇಲೆ ದೀಪ ಹೊತ್ತಿದ್ದೇನೆ" ಎಂದು ಅವನು ಹೇಳುತ್ತಿದ್ದನು.

೫. ಬಾಪೂಜಿ ಅವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ?

"ಭಾರತದಲ್ಲಿ ಮತ್ತೊಬ್ಬ ಮಹಾನಾಯಕ ಬಂದ ಕಷ್ಟ ನಿಷ್ಠುರಗಳಿಗೆ ಸಿಕ್ಕಿದವರೆಂದರೆ ಆತನ ಪ್ರೇಮ ಅಪಾರ ಸಹಾಯ ಮಾಡಲು ಉಗ್ರ ಆವೇಶದ ಆತುರ ಅವನಿಗೆ. ಆತ ನಮ್ಮ ಜನರಿಗೆಲ್ಲ ಮಹತ್ ಸಾಧನೆ ಮಾಡಲು, ಗಂಭೀರ ಬಲಿದಾನ ಮಾಡಲು ಸ್ಫೂರ್ತಿ ಕೊಡುತ್ತಿದ್ದಾನೆ. ಬಲಿದಾನ ಮಾಡಿ ನಾವು ಸ್ವಾತಂತ್ರ್ಯ ಪಡೆಯುವ ಹಸಿವಿನಿಂದ ಕೊರಗುತ್ತಿರುವವರು, ಬಡವರು, ಅನ್ಯಾಯಕ್ಕೆ ತುತ್ತಾದವರೇ ಮೊದಲಾದವರ ದುಃಖದ ಭಾರವಿಳಿಸಬೇಕು. ಇದು ಆತನ ಆಸೆ" ಎಂದು ನೆಹರು ಅವರು ಬಾಪೂಜಿ ವ್ಯಕ್ತಿತ್ವದ ಬಗ್ಗೆ ಹೇಳಿದ್ದಾರೆ.

೬. ತೆರೆಮರೆಯಲ್ಲಿ ಕೆಲಸ ಮಾಡಿದರೆ ಯಾವ ಅರ್ಥ ಬರುತ್ತದೆ?

ತೆರೆಮರೆಯಲ್ಲಿ ಕೆಲಸ ಮಾಡಿದರೆ ಭಯವಿದೆ ಎಂದು ಅರ್ಥ ಬರುತ್ತದೆ.

**ಚಟುವಟಿಕೆ–೨.**

| | |
|---|---|
| ೧. ಪತ್ರವನ್ನು ನೆಹರು ಅವರು ಯಾರಿಗೆ ಬರೆದಿದ್ದಾರೆ? | |
| ೨. ಹೂಯಾನ್‌ತ್ಸಾಂಗ್ ಭರತಖಂಡಕ್ಕೆ ಏಕೆ ಬಂದನು? | |
| ೩. ನಲಂದಾ ವಿಶ್ವವಿದ್ಯಾನಿಲಯವು ಎಲ್ಲಿತ್ತು? | |
| ೪. ದಕ್ಷಿಣ ದೇಶದಿಂದ ಬಂದ ಯಾತ್ರಿಕನು ಅವನ ವೇಷದ ಬಗ್ಗೆ ಏನು ಹೇಳುತ್ತಿದ್ದನು? | |
| ೫. ಬಾಪೂಜಿ ಅವರ ವ್ಯಕ್ತಿತ್ವದ ಬಗ್ಗೆ ನೆಹರೂವರು ಏನು ಹೇಳಿದ್ದಾರೆ? | |
| ೬. ತೆರೆಮರೆಯಲ್ಲಿ ಕೆಲಸ ಮಾಡಿದರೆ ಯಾವ ಅರ್ಥ ಬರುತ್ತದೆ? | |

**ಸರ್ಕಾರಿ ಪ್ರೌಢ ಶಾಲೆ**

| ಸಮಯ–೪೦ ನಿ. | **ಮೌಲ್ಯಮಾಪನ–೨** | ೨೦ ಅಂಕಗಳು |
|---|---|---|

**ಪ್ರತಿಯೊಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿ ಉತ್ತರವನ್ನು ಆರಿಸಿ ಬರೆಯಿರಿ.** ೧x೩ =೦೩

೧. ಈ ಕೆಳಗಿನವುಗಳಲ್ಲಿ ಬಹುವಚನ ರೂಪದ ಪದ;

ಎ) ದನ ಬಿ) ಮನೆಗಳು ಸಿ) ಅಣ್ಣ ಡಿ) ಪುಸ್ತಕ

೨ ಪಂಚಮಿ ವಿಭಕ್ತಿಯ ಕಾರಕಾರ್ಥವಿದು;

ಎ) ಅಪಾದಾನ ಬಿ) ಕರ್ಮಾರ್ಥ ಸಿ) ಕರ್ಣಾರ್ಥ ಡಿ) ಅಧಿಕರಣ

೩. ಹತ್ತನೆಯ ಶತಮಾನದವರೆಗೆ ಗಂಗರು ತಲೆಯೆತ್ತಿ ಬಾಳಿದರು ಎಂಬುದು ಈ ವಾಕ್ಯ ಪ್ರಕಾರಕ್ಕೆ ಸೇರಿದೆ.

ಎ) ಸಂಯೋಜಿತವಾಕ್ಯ ಬಿ) ಸಾಮಾನ್ಯವಾಕ್ಯ ಸಿ) ಮಿಶ್ರವಾಕ್ಯ ಡಿ) ಯಾವುದೂ ಅಲ್ಲ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** ೧x೪=೦೪

೧. ಈ ಪತ್ರವನ್ನು ನೆಹರು ಅವರು ಯಾರಿಗೆ ಬರೆದಿದ್ದಾರೆ?

೨. ನಿಜವಾದ ಬಂಧು ಯಾರು?

೩. ಲಿಂಗದ ವಿಧಗಳಾವುವು?

೪. ಭಾರತದಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ?

**ಕೊಟ್ಟಿರುವ ಹೇಳಿಕೆಗಳಲ್ಲಿ ಒಂದನ್ನು ಸಂದರ್ಭದೊಡನೆ ವಿವರಿಸಿರಿ.** ೩x ೧=೦೩

೧. "ಮಂತ್ರವ ಪಠನೆಯ ಮಾಡಿದರೇನು ಫಲ." ಅಥವಾ "ನಿನ್ನ ವಿಧಿ ಕೆಟ್ಟುದೆಂದೆಣಿಸದಿರು ಅಮ್ಮಾಜಿ".

**ಕೆಳಗಿನ ಪದ್ಯವನ್ನು ಪೂರ್ಣ ಬರೆಯಿರಿ.** ೧x೩=೦೩

ಪ್ರಜೆಯಂ-----------------------------------

------------------------------------------

------------------------------------------

------------------------------------------

------------------------------------------ ಶ್ರೀ ಚೆನ್ನ ಸೋಮೇಶ್ವರ

**ಈ ಕೆಳಗಿನ ಅಲಂಕಾರವನ್ನು ಹೆಸರಿಸಿ ಸಮನ್ವಯ ಮಾಡಿ.** ೧x೩=೦೩

೧. " ಸೀತೆಯ ಮುಖ ಕಮಲದಂತೆ ಅರಳಿತು."

**ಈ ಕೆಳಗಿನ ಪ್ರಶ್ನೆಗಳಿಗೆ ಉದಾಹರಣೆ ಬರೆಯಿರಿ.** ೧x೪=೦೪

೧. ಸಂಯೋಜಿತವಾಕ್ಯ:

೨. ಪೋರ್ಚುಗೀಸ್ ಭಾಷೆ ಪದಗಳು:

೩. ಸ್ತ್ರೀಲಿಂಗ;:

ಪುಲ್ಲಿಂಗ:

೪. ಏಕವಚನ:

ಬಹುವಚನ:

| ಭಾಗ–೨– | | | |
|---|---|---|---|
| ಕ್ರ.ಸಂ | ಆಯ್ದುಕೊಂಡ ಘಟಕಗಳು | ನಿಗದಿತ ಅಭ್ಯಾಸದ ಅವಧಿ | ಪುಟ ಸಂಖ್ಯೆ |
| ೧ | ಹೂವಾದ ಹುಡುಗಿ | ೧೫೦ ನಿ. | ೯೮–೧೦೩ |
| ೨ | ಬಹುಮಾನ | ೨೩೦ ನಿ. | ೧೦೪–೧೧೧ |
| ೩ | ಕಟ್ಟುವೆವು ನಾವು (ಪದ್ಯ) | ೫೦ ನಿ. | ೧೧೨ |
| ೪ | ತಲಕಾಡಿನ ವೈಭವ | ೨೩೦ ನಿ | ೧೧೩–೧೨೦ |
| ೫ | ಗೆಳೆತನ | ೧೨೦ ನಿ. | ೧೨೧–೧೨೪ |
| ೬ | ಆಟೋರಿಕ್ಷಾದ ರಸಪ್ರಸಂಗಗಳು (ಗದ್ಯ) | ೫೦ ನಿ. | ೧೨೫–೧೨೬ |
| | ಮೌಲ್ಯಾಂಕನ ಪರೀಕ್ಷೆ–೩ | | ೧೨೭–೧೨೮ |
| ೭ | ಅಮ್ಮ | ೨೩೦ ನಿ. | ೧೨೯–೧೩೪ |
| ೮ | ವಚನಾಮೃತ | ೧೭೦ ನಿ. | ೧೩೫–೧೩೯ |
| ೯ | ಸೀಮೆ | ೫೦ ನಿ. | ೧೪೦ |
| ೧೦ | ಸಪ್ತಾಕ್ಷರಿಮಂತ್ರ | ೧೩೦ ನಿ. | ೧೪೧–೧೪೪ |
| ೧೧ | ರಾಮಧಾನ್ಯ ಚರಿತೆ | ೯೦ ನಿ. | ೧೪೫–೧೪೮ |
| | ಮೌಲ್ಯಾಂಕನ ಪರೀಕ್ಷೆ–೪ | | ೧೪೯–೧೫ |
| | | | |

## ಗದ್ಯಭಾಗ-೫. ಹೂವಾದ ಹುಡುಗಿ



– ಎ.ಕೆ. ರಾಮಾನುಜನ್

ಎ.ಕೆ.ರಾಮಾನುಜನ್.ಇವರ ಪೂರ್ಣ ಹೆಸರು ಅತ್ತಿಪಟ್ ಕೃಷ್ಣಸ್ವಾಮಿ ರಾಮಾನುಜನ್. ಇವರು ಮಾರ್ಚ್ ೧೬. ೧೯೨೯ ರಲ್ಲಿ ಮೈಸೂರಿನಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಪದವಿ ಗಳಿಸಿದ ಇವರು ದಕ್ಷಿಣಭಾರತ ಮತ್ತು ಅಮೆರಿಕಾದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ, ೧೯೯೩ರಲ್ಲಿ ನಿಧನರಾದರು. ಕನ್ನಡದಲ್ಲಿ 'ಹೊಕ್ಕುಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು', 'ಕುಂಟೋಬಿಲ್ಲೆ', 'ಮತ್ತೊಬ್ಬನ ಆತ್ಮ ಚರಿತ್ರೆ' ಪ್ರಸಿದ್ಧ ಕೃತಿಗಳು. ಕನ್ನಡ ವಚನ ಸಾಹಿತ್ಯವನ್ನು 'ಸ್ಪೀಕಿಂಗ್ ಆಫ್ ಶಿವ' ಎಂದು ಅನುವಾದಿಸಿದ್ದಾರೆ.ಇವರ ಸಾಹಿತ್ಯದ ಸಾಧನೆಗೆ ೧೯೭೬ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೧೯೮೩ರಲ್ಲಿ ಪ್ರಸಿದ್ಧ 'ಮ್ಯಾಕ್ ಅರ್ಥರ್ ಫೆಲೋಷಿಪ್' ಗೌರವ ಸಂದಿದೆ. ಪ್ರಸ್ತುತ 'ಹೂವಾದ ಹುಡುಗಿ' ಜನಪದ ಕಥೆಯನ್ನು ಶ್ರೀ ಎ. ಕೆ. ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಚಟುವಟಿಕೆ: ೧.

೧. 'ಹೂವಾದ ಹುಡುಗಿ' ಜನಪದ ಕತೆಯನ್ನು ಶ್ರೀ ಎ.ಕೆ.ರಾಮಾನುಜನ್ ಅವರು ಸಂಪಾದಿಸಿರುವ----------- ಕೃತಿಯಿದು.

೨. ಅತ್ತಿಪಟ್ಟ ಕೃಷ್ಣಸ್ವಾಮಿ ರಾಮಾನುಜನ್ ಅವರು ----------- ರಲ್ಲಿ ----------- ನಲ್ಲಿ ಜನಿಸಿದರು.

೩. ಎ.ಕೆ. ರಾಮಾನುಜನ್ ಅವರ ಕೃತಿಗಳು ೧.----------- ೨. ----------- ೩. -----------

೪. 'ಸ್ಪೀಕಿಂಗ್ ಆಫ್ ಶಿವ' ಇದು ಇವರ ----------- ಕೃತಿ.

೫. ಎ.ಕೆ. ರಾಮಾನುಜನ್ ----------- ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಚಟುವಟಿಕೆ-೨-ಚಿತ್ರ ನೋಡಿ, ಜೋಡಿಸಿ ಕಥೆ ಬರೆಯಿರಿ.



ತಾಯಿಯ ಕಷ್ಟಕ್ಕೆ ಸಹಾಯವಾಗಲು ಹೂವಿನ ಗಿಡವಾಗುತ್ತಾಳೆ.



**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಮುದುಕಿಯ ಕಿರಿಯ ಮಗಳು ಏಕೆ ಹೂವಿನ ಗಿಡವಾದಳು?

ಉತ್ತರ: ಮುದುಕಿಯಾಗಿದ್ದರೂ ಕೂಲಿ ಮಾಡಿ ತಮ್ಮನ್ನು ಸಾಕುತ್ತಿದ್ದ ತಾಯಿಗೆ ಹೂ ಮಾರಿ ಅವಳಿಗೆ ಸಹಾಯ ಮಾಡಬೇಕೆಂದು ಕಿರಿಯ ಮಗಳು ಹೂವಿನ ಗಿಡವಾದಳು.

೨. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣ ಕೊಟ್ಟಳು?

ಉತ್ತರ: ದೊರೆಯ ಹೆಂಡತಿ ಹೂವಿಗೆ ಒಂದು ಮೊಗೆ ಹಣ ಕೊಟ್ಟಳು.

೩. ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಯಾರ ಬಳಿ ಹೇಳಿದ?

ಉತ್ತರ: ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಮಂತ್ರಿಯ ಮಗನ ಬಳಿ ಹೇಳಿದನು.

೪. ದೊರೆಯ ಚಿಕ್ಕಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು?

ಉತ್ತರ: ದೊರೆಯ ಚಿಕ್ಕಮಗಳು ಗೆಳತಿಯರೊಂದಿಗೆ ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡಲು ಹೋದಳು.

೫. ಪಟ್ಟಣಕ್ಕೆ ಹಿಂದಿರುವಾಗ ಅಕ್ಕ ತಮ್ಮನಿಗೆ ಏನು ಉಡುಗೊರೆ ನೀಡಿದಳು?

ಉತ್ತರ: ಪಟ್ಟಣಕ್ಕೆ ಹಿಂದಿರುವಾಗ ಅಕ್ಕ ತಮ್ಮನಿಗೆ ಬೇಕಾದಷ್ಟು ಐಸಿರಿಯ ಉಡುಗೊರೆ ನೀಡಿದಳು.

**ಚಟುವಟಿಕೆ–೩. ಪ್ರಶ್ನೆಗಳ ಸಂಖ್ಯೆಯ ಮುಂದೆ ಉತ್ತರವನ್ನು ನೋಡಿ ಬರೆ.**

೧.

೨.

೩.

೪.

೫.

ಚಟುವಟಿಕೆ–೪. **ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ. (ಮಾದರಿಯಂತೆ ಬರೆಯಿರಿ.)**

| ೧. "ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು" | |
|---|---|
| ಆಯ್ಕೆ | ಎ.ಕೆ.ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಹೂವಾದ ಹುಡುಗಿ' ಎಂಬ ಜನಪದ ಕಥೆಯಿಂದ ತೆಗೆದುಕೊಳ್ಳಲಾಗಿದೆ. |
| ಸಂದರ್ಭ | ಕಿರಿಯ ತಂಗಿ ಹೂವಿನ ಗಿಡವಾಗಿ ಆ ಗಿಡದ ಹೂವನ್ನು ಹಿರಿಯ ಹುಡುಗಿ ಬಿಡಿಸಿಕೊಂಡು ಅರಮನೆಯಲ್ಲಿ ದೊರೆಯ ಹೆಂಡತಿಗೆ ಮಾರಿದಾಗ ರಾಣಿಯು ಒಂದು ಮೊಗೆ ಹಣ ಕೊಟ್ಟಳು. ಅಕ್ಕ ಮೊಗೆ ಹಣವನ್ನು ತಂದು ತಂಗಿಗೆ ತೋರಿದಳು. ಆ ಸಂದರ್ಭದಲ್ಲಿ ತಂಗಿಯು " ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು " ಎನ್ನುತ್ತಾಳೆ. |
| ಸ್ವಾರಸ್ಯ | ಇಲ್ಲಿ ವಯಸ್ಸಾದ ತಮ್ಮ ತಾಯಿಗೆ ಸಹಾಯಮಾಡಬೇಕೆಂಬ ಹೆಣ್ಣುಮಕ್ಕಳ ಮನೋಭಾವ ಮತ್ತು ಸಂಪಾದನೆ ಮಾಡಿದ ಹಣವನ್ನು ತಾಯಿಗೆ ತೋರಿಸಿದರೆ ಎಲ್ಲಿಂದ ಬಂತು ಎಂದು ಬಯ್ಯುವಳೋ ಎಂಬ ಅಂಜಿಕೆ ಇಲ್ಲಿ ಸ್ವಾರಸ್ಯಪೂರ್ಣ ವಾಗಿ ವ್ಯಕ್ತವಾಗಿದೆ. |

| ೧. " ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು " | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| ೨. "ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?" | |
|---|---|
| ಆಯ್ಕೆ | ಎ.ಕೆ.ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಹೂವಾದ ಹುಡುಗಿ' ಎಂಬ ಜನಪದ ಕಥೆಯಿಂದ ತೆಗೆದುಕೊಳ್ಳಲಾಗಿದೆ. |
| ಸಂದರ್ಭ | ರಾಜನ ಮಗನು ಹೂವಿನ ಗಿಡವಾಗುತ್ತಿದ್ದ ಕಿರಿಯ ಹುಡುಗಿಯನ್ನು ಮದುವೆಯಾದ ಮೊದಲ ದಿನ ಒಟ್ಟಿಗೆ ಇದ್ದಾಗ ಅವರೇ ಮಾತನಾಡಲಿ ಅಂತ ಅವಳು. ಅವಳೇ ಮಾತಾಡಲಿ ಅಂತ ಅವನು. ಹೀಗೆ ಇಬ್ಬರೂ ಮೌನವಾಗಿ ಸುಮ್ಮನಿದ್ದರು. ಆ ಸಂದರ್ಭದಲ್ಲಿ ಆ ಹುಡುಗಿ "ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?" ಎಂದು ರಾಜಕುಮಾರನನ್ನು ಕೇಳುತ್ತಾಳೆ. |
| ಸ್ವಾರಸ್ಯ | ಹೊಸದಾಗಿ ಮದುವೆಯಾದ ಗಂಡ–ಹೆಂಡತಿಯ ನಡುವಿನ ಸಂಕೋಚ ಹಾಗೂ ಅವಳನ್ನು ಹೂವಿನ ಗಿಡವಾಗಿಸಲು ರಾಜಕುಮಾರ ಮೌನವಾಗಿದ್ದ ರೀತಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. |

| ೨. "ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| ೩. "ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ" | |
|---|---|
| ಆಯ್ಕೆ | ಎ.ಕೆ.ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಹೂವಾದ ಹುಡುಗಿ' ಎಂಬ ಜನಪದ ಕಥೆಯಿಂದ ತೆಗೆದುಕೊಳ್ಳಲಾಗಿದೆ. |
| ಸಂದರ್ಭ | ರಾಜನ ಕಿರಿ ಮಗಳ ದ್ರೋಹದಿಂದ ಅರ್ಧಂಬರ್ಧ ಮನುಷ್ಯಳನ್ನಾಗಿದ್ದ ಹೂವಾಗುವ ಹುಡುಗಿಯು ಮಳೆಯಲ್ಲಿ ತೇಲಿಕೊಂಡು ಹೋಗಿ ಮೋರಿಯಲ್ಲಿ ಬಿದ್ದಿದ್ದಾಗ ಗಾಡಿಯಲ್ಲಿ ಹೋಗುತ್ತಿದ್ದವನೊಬ್ಬ ನೋಡಿ ಬಟ್ಟೆ ಇಲ್ಲದೆ ಬಿದ್ದಿದ್ದ ಅವಳಿಗೆ ತನ್ನ ತಲೆಯಲ್ಲಿದ್ದ ವಸ್ತ್ರ ಹಾಕಿ; ಗಾಡಿಯಲ್ಲಿ ಕೂರಿಸಿಕೊಂಡು ಹೋಗಿ ಮುಂದೆ ಒಂದು ಊರಿನ ಮಂಟಪದಲ್ಲಿಟ್ಟು ಹೋಗುವ ಸಂದರ್ಭದಲ್ಲಿ "ಯಾರಾದರು ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ" ಅಂತ ಹೇಳಿ ಹೋಗುತ್ತಾನೆ. |
| ಸ್ವಾರಸ್ಯ | ಈ ವಾಕ್ಯದಲ್ಲಿ ಗಾಡಿಯವನು ಆ ಹುಡುಗಿಗೆ ತೋರಿದ ಮಾನವೀಯತೆ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. |

| ೩. "ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

| ೪. "ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ" | |
|---|---|
| ಆಯ್ಕೆ | ಎ.ಕೆ.ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಹೂವಾದ ಹುಡುಗಿ' ಎಂಬ ಜನಪದ ಕಥೆಯಿಂದ ತೆಗೆದುಕೊಳ್ಳಲಾಗಿದೆ. |
| ಸಂದರ್ಭ | ಗಾಡಿಯಲ್ಲಿ ಹೋಗುತ್ತಿದ್ದವನೊಬ್ಬ ಗಾಡಿಯಲ್ಲಿ ಕೂರಿಸಿಕೊಂಡು ಹೋಗಿ ಒಂದು ಊರಿನ ಮಂಟಪದಲ್ಲಿಟ್ಟು ಹೋದನಂತರ ಆ ಮಾರ್ಗದಲ್ಲಿ ನೀರು ತೆಗೆದುಕೊಂಡು ಹೋಗುತ್ತಿದ್ದ ಅರಮನೆಯ ದಾದಿಯರು ಅವಳನ್ನು ಕಂಡು ಅವಳು ರಾಣಿಯ ತಮ್ಮನ ಹೆಂಡತಿ ಇರಬಹುದೆಂದು ಊಹಿಸಿ "ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ" ಎಂದು ಈ ಸಂದರ್ಭದಲ್ಲಿ ತಮ್ಮ ರಾಣಿಗೆ ಹೇಳುತ್ತಾರೆ. |
| ಸ್ವಾರಸ್ಯ | ಇಲ್ಲಿ ಅರಮನೆಯ ದಾದಿಯರಿಂದಾಗಿ ಹೂವಾಗುವ ಹುಡುಗಿ ಅರಮನೆ ಸೇರಿದ್ದು ಮತ್ತು ದಾದಿಯರು ತೋರಿದ ಮಾನವೀಯತೆ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ. |

| ೪. "ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**ಕೆಳಗಿನ ವಾಕ್ಯಗಳಲ್ಲಿ ಖಾಲಿಬಿಟ್ಟ ಜಾಗವನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ನೋಡಕ್ಕಯ್ಯ ನಾನಿಲ್ಲಿ ದೇವರ ಧ್ಯಾನಮಾಡಿ ಕುತುಕೋತಿನಿ.

೨. ಅವರು ಮಾತಾಡಲೇ ಇಲ್ಲವಲ್ಲ, ಮತ್ತೇಕೆ ಮದುವೆ ಯಾದರು.

೩. ನರ ಮನುಷ್ಯರು ಹೂವಿನಗಿಡ ಆಗೋದುಂಟೆ ?

೪. ದಿನವಹಿ ಮೈಮೇಲಿನ ಗಾಯಗಳಿಗೆ ಔಷಧ ಹಾಕಿ ವಾಸಿಮಾಡಿದರು.

ಚಟುವಟಿಕೆ–೫. ಮೇಲಿನ **ಮಾದರಿಯಂತೆ ಬರೆಯಿರಿ.**

೧.

೨.

೩.

೪.

ಚಟುವಟಿಕೆ–೬. **ಕೊಟ್ಟಿರುವ ಪದಗಳಲ್ಲಿ ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥನಾಮಗಳನ್ನು ವಿಂಗಡಿಸಿ ಬರೆಯಿರಿ.**

ಕಾಲ, ಕಾಳಿ, ದೇವಸ್ಥಾನ, ವ್ಯಾಪಾರಿ, ರಾಜ, ಅಡಗೂರು,

ರೂಢನಾಮ:

ಅಂಕಿತನಾಮ:

ಅನ್ವರ್ಥನಾಮ:

ಚಟುವಟಿಕೆ– ೭.

**ಕೆಳಗಿನ ಪದಗಳಲ್ಲಿರುವ ಪ್ರಥಮ ಪುರುಷ, ಮಧ್ಯಮ ಪುರುಷ ಮತ್ತು ಉತ್ತಮ ಪುರುಷ ಪದಗಳನ್ನು ಆರಿಸಿ ಬರೆಯಿರಿ.**

ಇವನು, ನೀನು, ಅವರು, ನಾನು, ಅವಳು, ಇವಳು.

ಪ್ರಥಮ ಪುರುಷ :

ಮಧ್ಯಮ ಪುರುಷ :

ಉತ್ತಮ ಪುರುಷ :

ಚಟುವಟಿಕೆ–೮.

**೧. ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ.**

ಧ್ಯಾನಮಾಡು :

ಬಡವರು :

ಸಂಪಾದನೆ :

ಉಡುಗೊರೆ :

ಚಟುವಟಿಕೆ–೯.

**೨. ಕೊಟ್ಟಿರುವ ವಾಕ್ಯಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.**

೧. ನೀನು ಹೂ ತಕ್ಕೊಂಡು ಹೋಗಿ ಮಾಡ್ಕೊಂಡು ಬಂದ್ಬಿಡು.

೨. ದಾದೇರು ಗೋಗರೆದದ್ದಕ್ಕೆ ಒಪ್ಕತಾಳೆ.

೩. ತಾಯಿ ಅಣ್ಣನ ಕೇಳ್ಕೊಂಡು ಕರ್ಕೊಂಡೋಗು ಅನ್ತಾಳೆ.

## ಪದ್ಯಭಾಗ-೫. ಬಹುಮಾನ.



– ಕುವೆಂಪು

ಕುವೆಂಪು ಅವರ ಕಾಲ ೧೯೦೪ ಇವರು ಶಿವಮೊಗ್ಗ ಜಿಲ್ಲೆಯ ಕುಪ್ಪಳಿಯವರು. ಕುವೆಂಪು ಅವರು ಬರೆದ "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಲಬಿಸಿದೆ. ಅವರ ಪ್ರಮುಖ ಕೃತಿಗಳೆಂದರೆ ಪಾಂಚಜನ್ಯ, ನವಿಲು, ಕಲಾಸುಂದರಿ, ಕೃತ್ತಿಕೆ, ಅಗ್ನಿಹಂಸ, ಪಕ್ಷಿಕಾಶಿ, ಷೋಡಶಿ, ಅನಿಕೇತನ ಮುಂತಾದವು. 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು' ಇವರ ಎರಡು ಬೃಹತ್ ಕಾದಂಬರಿಗಳು. ಕರ್ನಾಟಕ ರತ್ನ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ, ಪದ್ಮವಿಭೂಷಣ ಪ್ರಶಸ್ತಿಗಳು ಇವರಿಗೆ ಸಂದಿವೆ. ಇವರು ಕನ್ನಡದ ಎರಡನೆಯ ರಾಷ್ಟ್ರಕವಿಗಳು. ಪ್ರಸ್ತುತ ಕವಿತೆಯನ್ನು ಕುವೆಂಪು ಅವರ "ನವಿಲು" ಕವನ ಸಂಕಲನದಿಂದ ತೆಗೆದುಕೊಳ್ಳಲಾಗಿದೆ.

ಚಟುವಟಿಕೆ-೧. **ಮೇಲಿನ ವಿವರಣೆಯನ್ನು ಗ್ರಹಿಸಿಕೊಂಡು ಕುವೆಂಪು ಅವರ ಬಗ್ಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ.**

### ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

೧. ಜಗತ್ತು ಜುಮ್ಮೆಂದುದು ಯಾವ ಧ್ವನಿಗೆ?

ಜಗತ್ತು ಜುಮ್ಮೆಂದುದು ಕೋಗಿಲೆಯ ಮಧುರ ಧ್ವನಿಗೆ.

೨. ಕೋಗಿಲೆಯ ಕೂಗನ್ನು ಯಾವುದು ಮಾರ್ದನಿಸಿತು?

ಕೋಗಿಲೆಯ ಕೂಗನ್ನು ಮೌನವಾಗಿ ನಿಂತಿರುವ ಕಾಡು ಪರ್ವತಗಳು ಮಾರ್ದನಿಸಿತು.

೩. ಗಾನವನ್ನು ಕೇಳಿದ ನೀಲಾಕಾಶ ಏನು ಮಾಡಿತು?

ಗಾನವನ್ನು ಕೇಳಿದ ನೀಲಾಕಾಶ ಮಾತನಾಡದೆ ಕೋಗಿಲೆಯ ಧ್ವನಿಯ ಮಾಧುರವನ್ನು ಬಣ್ಣಿಸುತ್ತಿತ್ತು.

೪. ಕಣಿವೆಯಲ್ಲಿದ್ದ ಸರೋವರ ಕೋಗಿಲೆಯ ಗಾನಕ್ಕೆ ಹೇಗೆ ಪ್ರತಿಕ್ರಿಯೆ ಕೊಟ್ಟಿತು?

ಕಣಿವೆಯಲ್ಲಿದ್ದ ಸರೋವರವು ತೆರೆಗಳ ರೂಪದಲ್ಲಿ ಚಪ್ಪಾಳೆ ಹಾಕಿತು.

೫. ಕೋಗಿಲೆಯ ಕೂಗನ್ನು ಆಲಿಸಿದ ಮನುಷ್ಯ ಏನೆಂದು ಹೇಳಿದನು?

ಕೋಗಿಲೆಯ ಕೂಗನ್ನು ಆಲಿಸಿದ ಮನುಷ್ಯ ಇಂಗ್ಲೀಷ್‌ಗೆ ಅದನ್ನು ಅನುವಾದ ಮಾಡಿದರೆ ನೊಬೆಲ್ ಬಹುಮಾನ ದೊರೆಯುವುದು.

೬. ಮನುಷ್ಯನ ಮಾತಿಗೆ ಕೋಗಿಲೆ ಕೊಟ್ಟ ಉತ್ತರವೇನು?

ಯಾವುದೇ ಪ್ರತಿಫಲವನ್ನು ಬಯಸದ ಕೋಗಿಲೆ "ಕುಹೂ! ಕುಹೂ!" ಎಂದು ಹಾಡುತ್ತಿತ್ತು.

ಚಟುವಟಿಕೆ–೨. ಮೇಲಿರುವ ಉತ್ತರಗಳನ್ನು ಪುನಃ ಬರೆದು ರೂಢಿಸಿಕೊಳ್ಳಿರಿ.

೧.

೨.

೩.

೪

೫.

೬.

**ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**೧. "ಮರುದನಿಗೈದಿತು ಮುದ ತಾಳಿ"**

ಆಯ್ಕೆ: 'ಬಹುಮಾನ' ಪದ್ಯದ ಈ ವಾಕ್ಯವನ್ನು ಕುವೆಂಪು ಅವರ "ನವಿಲು" ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: "ಕುಹೂ! ಕುಹೂ!" ಎಂದು ಮರದ ಮೇಲೆ ಕುಳಿತಿರುವ ಕೋಗಲೆಯ ಮಧುರ ಧ್ವನಿಯನ್ನು ಕೇಳಿ ಜಗತ್ತೆಲ್ಲ ಜುಮ್ಮೆಂದಿತು. ಆಗ ಪರ್ವತ ಕಾಡುಗಳ ಪ್ರತಿಕ್ರಿಯ ಏನಾಗಿತ್ತು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಈ ವಾಕ್ಯವು ಪರ್ವತ ಕಾಡುಗಳ ಸಂತೋಷವನ್ನು ವ್ಯಕ್ತಪಡಿಸಿದೆ.

ಚಟುವಟಿಕೆ–೩.

| ೧. "ಮರುದನಿಗೈದಿತು ಮುದ ತಾಳಿ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೨. " ಬಲು ಚೆಲುವಿದೆ ನಿನ್ನೀ ಗಾನ".**

ಆಯ್ಕೆ: 'ಬಹುಮಾನ' ಪದ್ಯದ ಈ ವಾಕ್ಯವನ್ನು ಕುವೆಂಪು ಅವರ "ನವಿಲು" ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. ಸಂದರ್ಭ: ಕೋಗಿಲೆಯ ಹಾಡನ್ನು ಕೇಳಿ ಪ್ರಕೃತಿಯು ತನ್ನದೆ ಆದ ರೀತಿಯಲ್ಲಿ ಪ್ರತಿಕ್ರಿಯೆ ನೀಡಿತು. ಆಗ ಕೋಗಿಲೆಯ ಗಾನ ಕೇಳಿದ ಮನುಷ್ಯನ ಪ್ರತಿಕ್ರಿಯ ಏನಾಗಿತ್ತು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಈ ವಾಕ್ಯದಲ್ಲಿ ಕೋಗಿಲೆಯ ಹಾಡಿಗೆ ಮನುಷ್ಯನ ಮೆಚ್ಚುಗೆಯ ಮಾತು ವ್ಯಕ್ತಗೊಂಡಿದೆ.

| ೨. " ಬಲು ಚೆಲುವಿದೆ ನಿನ್ನೀ ಗಾನ". | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೩. " ಅರಣ್ಯರೋದನ! ಸುಮ್ಮನೆ ಹಾಡುವೆ!"**

ಆಯ್ಕೆ: 'ಬಹುಮಾನ' ಪದ್ಯದ ಈ ವಾಕ್ಯವನ್ನು ಕುವೆಂಪು ಅವರ "ನವಿಲು" ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಕೋಗಿಲೆಯ ಹಾಡನ್ನು ಆಲಿಸಿದ ಒಬ್ಬನು ಮನಸೊಂದು ಕೋಗಿಲೆಯ ಬಳಿ "ನಿನ್ನ ಹಾಡು ಬಹಳ ಚೆನ್ನಾಗಿದೆ. ಇಂಗ್ಲೀಷ್‌ಗೆ ಅದನ್ನು ಅನುವಾದ ಮಾಡಿದರೆ ನೊಬೆಲ್ ಬಹುಮಾನ ದೊರೆಯುವುದು. ಸುಮ್ಮನೆ ಯಾರ ಕಿವಿಗೂ ಬೀಳದಂತೆ ಯಾಕೆ ಹಾಡುತ್ತಿರುವೆ." ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಪ್ರತಿಫಲವಿಲ್ಲದ ಯಾವ ಕೆಲಸವನ್ನು ಮಾಡಬಾರದು ಎನ್ನುವ ಭಾವನೆ ಮನುಷ್ಯನ ಮಾತಿನಲ್ಲಿ ವ್ಯಕ್ತಗೊಂಡಿದೆ.

| ೩. "ಅರಣ್ಯರೋದನ! ಸುಮ್ಮನೆ ಹಾಡುವೆ!" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೪. "ತಲ್ಲಣಿಸಿತು ಜಗ ಜುಮ್ಮೆಂದು".**

ಆಯ್ಕೆ: 'ಬಹುಮಾನ' ಪದ್ಯದ ಈ ವಾಕ್ಯವನ್ನು ಕುವೆಂಪು ಅವರ "ನವಿಲು" ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ ಸಂದರ್ಭ: "ನಿನ್ನ ಹಾಡನ್ನು ಕೇಳುವವರು ಯಾರಿದ್ದಾರೆ ಇಲ್ಲಿ?" ಎಂದು ಮನುಷ್ಯನು ಹೇಳಿದರೂ ಯಾವುದೇ ಪ್ರತಿಫಲವನ್ನು ಬಯಸದ ಕೋಗಿಲೆ "ಕುಹೂ! ಕುಹೂ!" ಎಂದು ಹಾಡುತ್ತಿತ್ತು. ಆಗ ಜಗತ್ತಿನ ಪ್ರತಿಕ್ರಿಯೆ ಏನಾಗಿತ್ತು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಕೋಗಿಲೆಯ ಮಧುರ ಧ್ವನಿಗೆ ಜಗತ್ತೆಲ್ಲವೂ ಸಂತೋಷಪಡುವ ಪರಿಯು ಇಲ್ಲಿರುವ ಸ್ವಾರಸ್ಯವಾಗಿದೆ.

| ೪. "ತಲ್ಲಣಿಸಿತು ಜಗ ಜುಮ್ಮೆಂದು". | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**ಚಟುವಟಿಕೆ–೪–ಹೊಂದಿಸಿ ಬರೆಯಿರಿ.**

| ಹುಡುಕಿ ಸರಿಉತ್ತರ ಬರೆ. | | |
|---|---|---|
| ಅ | ಬ | ಸರಿ ಉತ್ತರ |
| ೧. ಪರ್ವತ | ಬಣ್ಣಿಸುತಿತ್ತು | |
| ೨. ಸರೋವರ | ಕೂಗುತಲಿತ್ತು | |
| ೩. ವ್ಯಕ್ತಿ | ಕೈಪರೆಯಿಕ್ಕಿತು | |
| ೪. ಮಹಾಂಬರ | ಮಾರ್ದನಿಸುತಿತ್ತು | |
| ೫. ಕೋಗಿಲೆ | ಆಲಿಸುತಿದ್ದ | |

## ಪತ್ರಲೇಖನ

ಹತ್ತಿರದಲ್ಲಿ ಇರುವವರೊಡನೆ ಸಂಭಾಷಣೆಯ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಆದರೆ ದೂರದಲ್ಲಿ ಅಥವಾ ಪರಸ್ಥಳದಲ್ಲಿರುವವರ ಜೊತೆಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಪತ್ರಲೇಖನ ಪ್ರಾರಂಭವಾಯಿತು. ಇತ್ತೀಚೆಗೆ ದೂರವಾಣಿ, ಎಸ್. ಎಂ.ಎಸ್, ಇ–ಅಂಚೆ ಮುಂತಾದ ಆಧುನಿಕ ಸೌಲಭ್ಯಗಳಿದ್ದರೂ ಪತ್ರ ವ್ಯವಹಾರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಪತ್ರಗಳಲ್ಲಿ 'ಖಾಸಗಿ ಪತ್ರ' ಹಾಗೂ 'ವ್ಯಾವಹಾರಿಕ ಪತ್ರ' ಎಂಬುದಾಗಿ ಎರಡು ವಿಧಗಳಿವೆ. ಅವುಗಳ ರಚನಾ ಕ್ರಮವನ್ನು ಇಲ್ಲಿ ಪರಿಚಯಿಸಲಾಗಿದೆ.

- ಖಾಸಗಿ ಪತ್ರ / ವೈಯಕ್ತಿಕ ಪತ್ರ

ವೈಯಕ್ತಿಕ ಪತ್ರಗಳನ್ನು ಬಂಧುಗಳಿಗೆ, ಸ್ನೇಹಿತರಿಗೆ ಬರೆಯುತ್ತೇವೆ. ಈ ಪತ್ರಗಳಲ್ಲಿ ಆರೋಗ್ಯ. ವಿದ್ಯಾಭ್ಯಾಸ, ದುಡಿಮೆ, ಹಣಕಾಸಿನ ಸ್ಥಿತಿಗತಿ, ಕಷ್ಟಸುಖ, ಹಬ್ಬ ಹರಿದಿನಗಳು, ಮದುವೆ ಮತ್ತಿತರೆ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ವಿನಿಮಯಗಳಾಗುತ್ತವೆ. ವ್ಯಾವಹಾರಿಕ ಅಥವಾ ಮನವಿ ಪತ್ರ ಸಾರ್ವಜನಿಕ ಸಂಸ್ಥೆಗಳಾದ ಶಾಲೆ, ನಗರಸಭೆ, ಪಂಚಾಯಿತಿಗಳು, ಗ್ರಂಥಾಲಯ, ಉದ್ಯಮಿಗಳು, ಸರ್ಕಾರಿ ಕಛೇರಿ ಇತ್ಯಾದಿ ಸಂಸ್ಥೆಯಲ್ಲಿ ಕೆಲಸಮಾಡುವ ಅಧಿಕಾರಿಗಳ ಜೊತೆ ನಡೆಸುವ ಪತ್ರ ವ್ಯಾವಹಾರಗಳನ್ನು 'ವ್ಯಾವಹಾರಿಕ ಪತ್ರಗಳು' ಅಥವಾ 'ಮನವಿ ಪತ್ರಗಳು' ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ಎಲ್ಲಾ ಪತ್ರಗಳು ವಿಳಾಸ, ದಿನಾಂಕ, ದೂರವಾಣಿ ಸಂಖ್ಯೆ, ಸಂಬೋಧನೆ, ವಿಷಯ ವಿವರಣೆ, ಮುಕ್ತಾಯದ ಭಾಗ, ಪತ್ರ ಬರೆದವರ ಸಹಿ, ಹೊರವಿಳಾಸ ಇತ್ಯಾದಿ ಮಾಹಿತಿಯನ್ನು ಒಳಗೊಂಡಿರುತ್ತವೆ. ಮಾದರಿಗಾಗಿ ಖಾಸಗಿ ಪತ್ರ / ವೈಯಕ್ತಿಕ ಪತ್ರವನ್ನು ಕೆಳಗಿನಂತೆ ಬರೆಯಲಾಗಿದೆ.

ಕೀರ್ತಿಕುಮಾರ,<br>
ಒಂಬತ್ತನೆಯ ತರಗತಿ,<br>
ಸರ್ಕಾರಿ ಪ್ರೌಢಶಾಲೆ, ಶ್ರೀರಂಗಪಟ್ಟಣ – ೫೭೧ ೪೩೮.<br>
ದಿನಾಂಕ : ೦೮–೦೫–೨೦೨೪

ತೀರ್ಥರೂಪರವರಿಗೆ,

ನಿಮ್ಮ ಮಗನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಮತ್ತು ಅಮ್ಮನ ಆರೋಗ್ಯ ಹೇಗಿದೆ? ಯಾವುದಕ್ಕೂ ಪತ್ರ ಬರೆಯಿರಿ, ಇಲ್ಲಿ ನಾನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಿಮ್ಮ ಅಪೇಕ್ಷೆಯಂತೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ. ಪತ್ರದ ಮುಖ್ಯ ವಿಚಾರವೇನೆಂದರೆ, ಜೂನ್ ೧೦ ನೇ ತಾರೀಖಿನ ಒಳಗಾಗಿ ವಾರ್ಷಿಕ ಪರೀಕ್ಷೆಯ ಶುಲ್ಕ ೧೫೦/– (ನೂರ ಐವತ್ತು ಮಾತ್ರ) ರೂಪಾಯಿಗಳನ್ನು ಕಟ್ಟಬೇಕಾಗಿದೆ. ತಾವು ಆದಷ್ಟು ಬೇಗ ಅಂಚೆ ಮೂಲಕ ಹಣ ಕಳುಹಿಸಿ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಮನೆಯವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸಿ. ಉಳಿದ ವಿಷಯವನ್ನು ಊರಿಗೆ ಬಂದಾಗ ಮಾತನಾಡುತ್ತೇನೆ.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ ಮಗ<br>
ಕೀರ್ತಿಕುಮಾರ

ಇವರಿಗೆ,<br>
ಶ್ರೀ ಸಿದ್ದಪ್ಪ<br>
ಮನೆ ಸಂಖ್ಯೆ ೫೪, ೧ನೆಯ ಮುಖ್ಯರಸ್ತೆ,<br>
ಕುವೆಂಪುನಗರ, ಹಾಸನ – ೫೭೩ ೨೦೧

ಚಟುವಟಿಕೆ-೫. ಖಾಸಗಿ ಪತ್ರ / ವೈಯಕ್ತಿಕ ಪತ್ರ ಮಾದರಿಯಂತೆ ನೋಡಿ ಬರೆಯಿರಿ.

------------

------ ತರಗತಿ,

ಸರ್ಕಾರಿ ಪ್ರೌಢಶಾಲೆ,

---------- ೫೭೧ ೪೩೮.

ದಿನಾಂಕ : ೦೮-೦೫-೨೦೨೪

---------------,

------------------------------------------------------------

------------------------------------------------------------------------------

------------------------------------------------------------------------

-----------------------------------------------------------------------

-----------------------------------------------------------------------

-----------------------------------------------------

------------,

--------------

---------

-------

-----------------

----------------

------------------

# ವ್ಯಾವಹಾರಿಕ ಅಥವಾ ಮನವಿ ಪತ್ರ.

ಇವರಿಂದ, ದಿನಾಂಕ:೦೫-೦೫-೨೦೨೪

ಶ್ರೀ ಸಂಗಮೇಶ,
ಕೋಟೆ ಬೀದಿ,
ವಿಜಯಪುರ-೫೮೬೧೦೧

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಗಳು,
ವಿಜಯಪುರ
ವಿಜಯಪುರ ಜಿಲ್ಲೆ. ೫೮೬೧೦೧

ಮಾನ್ಯರೇ,

ವಿಷಯ : ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸುವ ಕುರಿತು,

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಸ್ಥಳವಾದ ವಿಜಯಪುರದ ನಮ್ಮ ಕೋಟೆ ಬೀದಿಯಲ್ಲಿ ಸುಮಾರು ೬೦ ಮನೆಗಳಿದ್ದು, ಕೊಳಾಯಿಯ ವ್ಯವಸ್ಥೆ ಇಲ್ಲದೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಜನಪರ ಕಾಳಜಿ ಇರುವ ತಾವು ದಯಮಾಡಿ ಕೋಟೆ ಬೀದಿಗೆ ಬೋರ್ ವೆಲ್ ಹಾಕಿಸಿ, ನಳದ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಸಂಗಮೇಶ)

ಚಟುವಟಿಕೆ–೬. ವ್ಯಾವಹಾರಿಕ ಅಥವಾ ಮನವಿ ಪತ್ರ

ಮೇಲಿನ ಬರೆದ ವ್ಯಾವಹಾರಿಕ ಪತ್ರದ ಮಾದರಿಯಂತೆ ನೋಡಿ ಬರೆಯಿರಿ.

ಇವರಿಂದ, ದಿನಾಂಕ:೦೫–೦೫–೨೦೨೪
ಶ್ರೀ ಸಂಗಮೇಶ,
ಕೋಟೆ ಬೀದಿ,
ವಿಜಯಪುರ–೫೮೬೧೦೧

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಗಳು,
ವಿಜಯಪುರ
ವಿಜಯಪುರ ಜಿಲ್ಲೆ. ೫೮೬೧೦೧

ಮಾನ್ಯರೇ,

ವಿಷಯ : ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಸ್ಥಳವಾದ ವಿಜಯಪುರದ ನಮ್ಮ ಕೋಟೆ ಬೀದಿಯಲ್ಲಿ ಸುಮಾರು ೬೦ ಮನೆಗಳಿದ್ದು, ಕೊಳಾಯಿಯ ವ್ಯವಸ್ಥೆ ಇಲ್ಲದೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಜನಪರ ಕಾಳಜಿ ಇರುವ ತಾವು ದಯಮಾಡಿ ಕೋಟೆ ಬೀದಿಗೆ ಬೋರ್ ವೆಲ್ ಹಾಕಿಸಿ, ನಳದ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಸಂಗಮೇಶ)

## ಪಠ್ಯ ಪೂರಕ ಅಧ್ಯಯನ–೪. **ಕಟ್ಟುವೆವು ನಾವು**



–ಎಂ.ಗೋಪಾಲ ಕೃಷ್ಣ ಅಡಿಗ

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಯಾವುದು ಬತ್ತಿಹೋಗುವ ಮುನ್ನ ಹೊಸ ನಾಡೊಂದನ್ನು ಕಟ್ಟಬೇಕು?

ಉತ್ತರ: ಕನ್ನಡ ನಾಡನ್ನು ಕಟ್ಟುವ ಉತ್ಸಾಹ ಸಾಹಸಗಳ ಅಲೆಗಳಿಂದ ಅಲ್ಲೋಲ ಕಲ್ಲೋಲವಾದ ಸಾಗರವು ಬತ್ತಿಹೋಗುವ ಮುನ್ನ ಹೊಸನಾಡೊಂದನ್ನು ಕಟ್ಟಬೇಕು.

೨. ನಮ್ಮೆದೆಯ ಕಾಮಧೇನು ಯಾವುದು?

ಉತ್ತರ: ನಮ್ಮೆದೆಯ ಕನಸುಗಳೇ ಕಾಮಧೇನು ಆಗಿದೆ.

೩. ನಮ್ಮ ಸುತ್ತಲೂ ಇರುವ ಕಂದಕಗಳಾವುವು?

ಉತ್ತರ: ನಮ್ಮ ಸುತ್ತಲೂ ಜಾತಿಮತಭೇದಗಳ ಕಂದಕಗಳಾಗಿವೆ.

೪. ಕೋಟೆಗೋಡೆಗೆ ಮೆಟ್ಟಿಲುಗಳು ಯಾವು?

ಉತ್ತರ: ಕೋಟೆಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲುಗಳಾಗಿವೆ.

೫. ಕವಿ ಯಾರಿಗೆ ವೀಳೆಯವನು ಕೊಡುವೆನೆಂದಿದ್ದಾರೆ?

ಉತ್ತರ: ತಡೆವವರು, ಹೊಡೆವವರು, ಕೆಟ್ಟದ್ದನ್ನು ಮಾತನಾಡುವವರು ಹಾಗೂ ಕೆಡುಕನ್ನು ಬಯಸುವವ ಜನರಿಗೆ ವೀಳೆಯವನು ಕೊಡುವೆನೆಂದು ಕವಿ ಹೇಳಿದ್ದಾರೆ.

೬. ಹೊಸ ನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?

ಉತ್ತರ: ಹೊಸ ನಾಡೊಂದನ್ನು ಕಟ್ಟಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ, "ಎಲ್ಲರೂ ತೊಡುಕುಗಳ ಒಡಕುಗಳ ಬಿಡಿಸಿಕೊಂಡು ಹೊರಡುವೆವು. ಎಲ್ಲರೂ ಒಗ್ಗಟ್ಟಾಗಿ ಹೊಸ ನಾಡನ್ನು ಕಟ್ಟುವೆವು. ವೀರ ಯುವಜನದ ಉತ್ಸಾಹದ ಹಾರಾಟಕ್ಕೆ ಆಕಾಶವೇ ಗಡಿ (ಅಂದರೆ ಉತ್ಸಾಹಕ್ಕೆ ಕೊನೆ ಎನ್ನುವುದೇ ಇಲ್ಲ) ಅದಕೆ ತಡೆಯಾಗಲು ಎಂದಿಗೂ ಬಿಡುವುದಿಲ್ಲ. ಯಾರಾದರೂ ತಡೆಯುವವರು, ಹೊಡೆಯುವವರು, ಕೆಟ್ಟದ್ದನ್ನು ಬಗೆಯುವವರು, ತಡೆವವರು ಬನ್ನಿರೋ, ಹೊಡೆವವರು ಬನ್ನಿರೋ, ಕೆಡೆನುಡಿವ ಕೆಡೆಬಗೆವ ಕೆಡಕು ಜನರೇ ಬನ್ನಿ!" ಎಂದು ಹೇಳಿದ್ದಾರೆ.

### ಚಟುವಟಿಕೆ–೧. **ಮಾದರಿಯಂತೆ ಉತ್ತರ ನೋಡಿ ಬರೆಯಿರಿ.**

೧.

೨.

೩.

೪.

೫.

೬.

## ಗದ್ಯ ಭಾಗ–೬. **ತಲಕಾಡಿನ ವೈಭವ.**



–ಹಿರೇಮಲ್ಲೂರು ಈಶ್ವರನ್

ಅವರ ಕಾಲ ೧೯೨೨. ಇವರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಹಿರೇಮಲ್ಲೂರಿನವರು.

ಇವರು ಅನೇಕ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕವಿ ಕಂಡ ನಾಡು. ವಿಷನಿಮಿಷಗಳು, ಭಾರತದ ಹಳ್ಳಿಗಳು ಮುಂತಾದ ಕೃತಿಗಳನ್ನು ರಚಿಸಿದ್ದಾರೆ. 'ಹರಿಹರನ ಸಂಖ್ಯಾನಿರ್ಣಯ ಎನ್ನು ಮಹಾಪ್ರಬಂಧಕ್ಕೆ ಇವರಿಗೆ ಡಾಕ್ಟರೇಟ್ ಪ್ರಶಸ್ತಿ ಲಭಿಸಿದೆ.

**ಚಟುವಟಿಕೆ–೧. ಪಕ್ಕದ ಊರಿನ ಜಾತ್ರೆಗೆ ಹೋಗಿದ್ದರೆ ನಿಮಗಾದ ಅನುಭವ ಕುರಿತು ಬರೆಯಿರಿ.**

ಚಟುವಟಿಕೆ–೨. ಸಾಹಿತಿ ಮಾಹಿತಿ

ಕನ್ನಡ ಅಧ್ಯಾಪಕಿ ಒಬ್ಬರು "ಸಾಹಿತಿ ಮಾಹಿತಿ" ಎನ್ನುವ ಶೀರ್ಷಿಕೆ ಅಡಿಯಲ್ಲಿ ಸಾಹಿತಿಗಳ ಮಾಹಿತಿಯನ್ನು ತಿಳಿದುಕೊಳ್ಳಲು ಹಿರೇಮಲ್ಲೂರು ಈಶ್ವರನ್ ಅವರನ್ನು ಭೇಟಿ ಮಾಡಿದರು. ಅಧ್ಯಾಪಕಿ ಮತ್ತು ಹಿರೇಮಲ್ಲೂರು ಈಶ್ವರನ್ ರವರ ನಡುವಿನ ಸಂಭಾಷಣೆ ಈ ಕೆಳಗಿನಂತಿದೆ. (ಕಾಲ್ಪನಿಕವಾಗಿ ಈ ರೀತಿ ಮಕ್ಕಳಿಂದ ಮಾಡಿಸಬಹುದು. ಹಿ.ಈ = ಹಿರೇಮಲ್ಲೂರು ಈಶ್ವರನ್)

ಅಧ್ಯಾಪಕಿ: ನಮಸ್ಕಾರಗಳು, ಸರ್.

ಹಿ. ಈ: ನಮಸ್ಕಾರಗಳು, ತಾವು ಯಾವ ಊರಿನವರು?

ಅಧ್ಯಾಪಕ: ನಾನು ಕಲ್ಬುರ್ಗಿಯವಳು. ಆ ಜಿಲ್ಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡ್ತಾ ಇದೀನಿ ಸರ್.

ಹಿ. ಈ: ಹೌದಾ, ಒಳ್ಳೆಯದಮ್ಮ ತುಂಬಾ ಸಂತೋಷವಾಯಿತು.

ಅಧ್ಯಾಪಕ : ನನಗೂ ಕೂಡ ತಮ್ಮನ್ನು ಭೇಟಿಯಾಗಿ ತುಂಬಾ ಸಂತೋಷವಾಯಿತು ಸರ್.

ಹಿ. ಈ: ಸರಿ, ಬಂದಿರುವ ವಿಷಯ ತಿಳಿಸಿ.

ಅಧ್ಯಾಪಕಿ: ಸರ್, ಸಾಹಿತಿ ಮಾಹಿತಿ ಎನ್ನುವ ಶಿರ್ಷಿಕೆ ಅಡಿಯಲ್ಲಿ ತಮ್ಮ ಕೃತಿ ಮಾಹಿತಿ ಪಡೆಯಲು ಬಂದಿದ್ದೇನೆ.

ಹಿ. ಈ : ಹೇಳಮ್ಮ, ಯಾವ ವಿಷಯ ಕುರಿತು ಮಾಹಿತಿ ಬೇಕಿತ್ತು?

ಅಧ್ಯಾಪಕಿ : ಸರ್, ತಾವು ಬರೆದ ಎಲ್ಲಾ ಕೃತಿಗಳಲ್ಲಿ ನಮಗೆ ಇಷ್ಟವಾದ ಪ್ರವಾಸ ಕಥನ ಕುರಿತು ತಿಳಿಯುವ ಕುತೂಹಲವಿತ್ತು.

ಹಿ. ಈ : ಓಹೋ! 'ಕವಿ ಕಂಡ ನಾಡು' ಎಂಬ ಪ್ರವಾಸ ಕಥನದ ಬಗ್ಗೆ ಮಾಹಿತಿ ತಿಳಿಯಬಯಸಿದ್ದೀರಿ ಎಂದಾಯಿತು.

ಅಧ್ಯಾಪಕಿ : ಹೌದು ಸರ್ ತಮ್ಮ ಪ್ರವಾಸ ಕಥನದ ವಿಷಯ ಅನುಭವಗಳನ್ನು ಅದ್ಭುತವಾಗಿ ತಿಳಿಸಿದ್ದೀರಿ. ಅದನ್ನು ಸ್ವತಃ ತಮ್ಮ ಬಾಯಿಂದ ಕೇಳುವ ತವಕದಲ್ಲಿದ್ದೇನೆ. ದಯವಿಟ್ಟು ತಿಳಿಸುವಿರಾ?

ಹಿ. ಈ : ಆಗಲಿ, ನನಗೂ  ತುಂಬಾ ಸ್ಮರಣೀಯ ಪ್ರವಾಸವದು. ಖಂಡಿತಾ ತಿಳಿಸುವೆ.

ಅಧ್ಯಾಪಕಿ : ಸರ್ ತಾವು ಪ್ರವಾಸಕ್ಕೆ ತಲಕಾಡನ್ನೇ ಏಕೆ ಆಯ್ಕೆ ಮಾಡಿಕೊಂಡಿದ್ದೀರಿ?

ಹಿ. ಈ : ತಲಕಾಡು ನಮ್ಮ ಸ್ಥಳೀಯವಾಗಿರುವಂತಹ ಪ್ರವಾಸದ ತಾಣ. ಅಲ್ಲಿರುವ ಪಂಚಲಿಂಗೇಶ್ವರ ದೇವಾಲಯದ ಭೇಟಿ ಮಾಡುವುದು ಬಹು ದಿನದ ಆಸೆಯಾಗಿತ್ತು. ಆದ್ದರಿಂದ ಅದುವೇ ನನ್ನ ಪ್ರವಾಸದ ಉದ್ದೇಶವೂ ಆಗಿತ್ತು.

ಅಧ್ಯಾಪಕಿ : ಹಾಗಾದ್ರೆ ತಮ್ಮ ಪ್ರವಾಸದ ಅನುಭವವನ್ನು ಮೊದಲಿನಿಂದ ತಿಳಿಸ್ತೀರಾ ಸರ್.

ಹಿ. ಈ : ನಾನು ೧೯೫೦ನೇ ಇಸ್ವಿ ಅಕ್ಟೋಬರ್ ತಿಂಗಳ ೨೦ನೇ ತಾರೀಕಿನಂದು. ನನ್ನ ಪ್ರವಾಸದ ವಿಷಯವನ್ನು ಬರೀತಾ ಹೋದೆ.

ಅಧ್ಯಾಪಕಿ: ಸರ್ ನೀವು ಪ್ರವಾಸಕ್ಕೆ ಹೋದಾಗ ನಿಮಗೆ ಯಾರಾದರೂ ಉಪಚರಿಸಿದ್ದೀರಾ ಅಥವಾ ನೀವು ಯಾವ ಅತಿಥಿ ಗೃಹಕ್ಕೆ ಹೋಗಿದ್ದಿರಿ?

ಹಿ. ಈ : ಹೌದು, ಶಿವನಸಮುದ್ರ ಒಳ ಸೇರುವ ಮುನ್ನ ನಮಗೆ ಸುಬ್ರಮಣ್ಯ ಅನ್ನುವಂತಹ ಒಬ್ಬರು ನಿಲ್ ಮನೆಯನ್ನು ಖಾಲಿ ಮಾಡಿಸಿ ಕೊಟ್ಟರು ಹಾಗೂ ನಾವು ಅಲ್ಲೇ ತಂಗಿದೆವು.

ಅಧ್ಯಾಪಕಿ : ತಲಕಾಡಿನ ಬಗ್ಗೆ ತಮ್ಮ ಅಭಿಪ್ರಾಯವೇನು ಸರ್?

ಹಿ. ಈ : ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆಯಿದೆ. ಕನ್ನಡ ಸಾಹಿತ್ಯದ ಕಥನವಿದೆ. ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದಂತಹ ವೀರರ ಉಜ್ವಲ ಚರಿತ್ರೆಯಿದೆ.

ಅಧ್ಯಾಪಕಿ : ಹಾಗಾದ್ರೆ ಅಲ್ಲಿ ಆಳ್ವಿಕೆ ಮಾಡಿದವರು ಯಾರು?

ಹಿ. ಈ : ಮಾರಸಿಂಹ, ರಾಜಮಲ್ಲ, ರಕ್ಕಸಗಂಗ ಮತ್ತು ಚರಿತ್ರೆಯಲ್ಲಿ  'ಅಣ್ಣ' ಎಂದೇ ಹೆಸರಾದ ಚಾವುಂಡರಾಯ ಪ್ರಮುಖರು.

ಅಧ್ಯಾಪಕಿ : ಅರವತ್ತೂರು ಪುಣ್ಯ ಪುರುಷರ ಚರಿತೆಯನ್ನು ನೀಡಿದ 'ಚಾವುಂಡರಾಯ ಪುರಾಣ' ಬರೆದ ಕವಿ ಚಾವುಂಡರಾಯರು, ಹೌದಲ್ಲವೇ ಸರ್.

ಹಿ. ಈ : ಹೌದಮ್ಮ, ಹಾಗೇ ತಲಕಾಡು ಕಲಾ ಶ್ರೀ ವಿಹರಿಸುವ ನಂದನವನ. ಏಕೆಂದರೆ ಅಲ್ಲಿ ರನ್ನ ಕವಿ ಮತ್ತು ಅತ್ತಿಮಬ್ಬೆ ಇದ್ದಾರೆ. ಹಾಗೆಯೇ ಗುರುಗಳಾದ ಅಜಿತಸೇನರು ಇದ್ದಾರೆ.

(ನಮ್ಮ ಮೋಟಾರ್ ಮೊದಲು ತಲಕಾಡು ಪ್ರವೇಶಿಸಿದಾಗ ಕೀರ್ತಿನಾರಾಯಣನ ದೇಗುಲವನ್ನು ನೋಡಿದೆವು. ವಿಷ್ಣುವರ್ಧನ ತನ್ನ ವಿಜಯದ ನೆನಪಿಗಾಗಿ ಅದನ್ನು ಕಟ್ಟಿಸಿದನು.)

ಅಧ್ಯಾಪಕಿ: ಪಂಚಲಿಂಗೇಶ್ವರದಲ್ಲಿ ನೋಡಿರುವ  ದೇಗುಲಗಳ ಹೆಸರುಗಳನ್ನು ತಿಳಿಸಿ ಸರ್.

ಹಿ. ಈ :  ೧.ವೈದ್ಯೇಶ್ವರ   ೨.ಪಾತಾಳೇಶ್ವರ  ೩. ಮರುಳೇಶ್ವರ  ೪. ಗೋಕರ್ಣೇಶ್ವರ   ೫. ಅರ್ಕೇಶ್ವರ ಈ  ಪಂಚಲಿಂಗಗಳ ದರ್ಶನದಿಂದ ನಮಗೆ  ಧನ್ಯತೆ ದೊರೆತ ಭಾವನೆಯಿದೆ.

ಅಧ್ಯಾಪಕಿ : ಈ ೫ ಪಂಚಲಿಂಗೇಶ್ವರ ದೇವಾಲಯ ದರ್ಶನದ ವೇಳೆ ಅತ್ಯಂತ ಸ್ಮರಣೀಯವಾದ ಘಟನೆ ಯಾವುದು?

ಹಿ. ಈ : ಅದೇನೆಂದರೆ ಆರ್ಕೇಶ್ವರ ದೇವಾಲಯದ ದರ್ಶನವಾಗದ ಕಾರಣ ಹಾಗೇ ವಾಪಸಾಗಬೇಕಿತ್ತು. ನನ್ನ ಮನದ ಇಂಗಿತ ವನ್ನು ಅರಿತ ಸಾರಥಿ "ಬನ್ನಿ, ನಾವಿಬ್ಬರೂ ಮುಂದಕ್ಕೆ ಹೋಗಿ ನೋಡಿಕೊಂಡು ಬರೋಣ, ಸಿಕ್ಕರೆ ತಿರುಗಿ ಬಂದು ಇವರನ್ನು ಕರೆದು ಕೊಂಡು ಹೋಗೋಣ" ಎಂದನು. ಎಡಬಲಕ್ಕೆ ಶಾಲಿವನ. ರಾತ್ರಿ ಒಂದು ಗಂಟೆ. ಇಬ್ಬರೂ ಹೋದೆವು. ನರಿಗಳು ಬಯಲಾಟದ ತಾಳಗತಿಗೆ ತಕ್ಕಂತೆ ಕೂಗುವ ಹಿಮ್ಮೇಳದವರಂತೆ ಕೂಗುತ್ತಲಿದ್ದವು. ಅನತಿ ದೂರ ಹೋಗುವಷ್ಟರಲ್ಲಿ ಗಿಡಮರಗಳ ಪೊದೆಯಲಿ ಏನೋ ಬೆಳ್ಳಬೆಳ್ಳಗೆ, ಮಸುಕುಮಸುಕಾಗಿ ಕಂಡಿತು. ದಾವಿಸಿದೇವು. ಎದೆ ಜೋರಾಗಿ ಹೊಡೆದುಕೊಳ್ಳತೊಡಗಿತು. ಹೇಗೋ

ಸಮೀಪಿಸಿದೇವು. ಯುರೇಕಾ! ಯುರೇಕಾ ! ಕೂಗಿದೆ. ಕೊನೆಗೆ ದೇಗುಲ ಕಂಡಿತು. ಎಲ್ಲರೂ ದೇವರ ದರ್ಶನ ಪಡೆದರು. ಪ್ರವಾಸಗಳು ಸದಾ ತಾಜಾ ಅನುಭವ ನೀಡುವ ನೆನಪಿನ ಬುತ್ತಿಗಳು.

ಅಧ್ಯಾಪಕಿ: ತಮ್ಮ ಕೃತಿ ಪರಿಚಯ ನೀಡಿದ್ದಕ್ಕಾಗಿ ಧನ್ಯವಾದಗಳು ಸರ್.

ಹಿ. ಈ : ತಮಗೂ ಧನ್ಯವಾದಗಳು.

ಈ ಮೇಲಿನ ಸಂಭಾಷಣೆಯನ್ನು ಮಕ್ಕಳಿಂದ ನಾಟಕ ರೂಪದಲ್ಲಿ ಮಾಡಿಸಿರಿ. ಅಥವಾ ಸಂದರ್ಶನ ಮಾದರಿಯಲ್ಲಿ ತರಗತಿಯಲ್ಲಿ ಮಾಡಿಸಿರಿ. ಇಲ್ಲವೇ ಸಂಭಾಷಣೆ ರೂಪದಲ್ಲಿ ಅಭಿವ್ಯಕ್ತಿಗೊಳಿಸಲು ತಿಳಿಸಿರಿ.

**ಚಟುವಟಿಕೆ–೩.** ನಿಮ್ಮ ಮನೆಯವರೊಂದಿಗೆ/ ಶಾಲೆಯ ವತಿಯಿಂದ ಪ್ರವಾಸಕ್ಕೆ ಹೋಗಿರುತ್ತೀರಿ. ಅಂತಹ ಪ್ರವಾಸದ ಅನುಭವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಚಟುವಟಿಕೆ–೪. ನಿಮ್ಮೂರಲ್ಲಿರುವ ದೇವಾಲಯಗಳ ಹೆಸರಗಳನ್ನು ಬರೆಯಿರಿ.**

ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದ್ದು ಎಲ್ಲಿ?

ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದ್ದು ಶಿವನ ಸಮುದ್ರದ ನಿಲ್ಮನೆಯಲ್ಲಿ,

೨. ಗಂಗರ ಮೊದಲ ರಾಜಧಾನಿ ಯಾವುದು?

ಗಂಗರ ಮೊದಲ ರಾಜಧಾನಿ ಕೋಲಾರ.

೩. 'ರಾಯ' 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದಾರೆ?

'ರಾಯ' 'ಅಣ್ಣ' ಎಂದು ಜನರು ಚಾವುಂಡರಾಯನನ್ನು ಕರೆಯುತ್ತಿದ್ದರು.

೪. ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣ್ಕೆ ಏನು?

ಸ್ವತಃ ಕವಿಯಾದ ಚಾವುಂಡರಾಯನು 'ಚಾವುಂಡರಾಯ ಪುರಾಣ' ಎನ್ನುವ ಅರವತ್ತಮೂರು ಪುಣ್ಯಪುರುಷರ ಚರಿತ್ರೆಯನ್ನು ಕನ್ನಡಕ್ಕೆ ಕಾಣ್ಕೆಯಾಗಿ ನೀಡಿದ್ದಾನೆ.

೫. ವಿಷ್ಣುವರ್ಧನ ವೀರನಾರಾಯಣ ದೇಗುಲವನ್ನು ಕಟ್ಟಿಸಲು ಕಾರಣವೇನು?

ವಿಕ್ರಮ ಚೋಳನ ಸೇನಾನಿ ಆದಿಯಮನನ್ನು ಮನೆಗೆ ಕಳುಹಿಸಿ, ಹೊಯ್ಸಳರ ಕನ್ನಡ ಬಾವುಟ ಹಾರಿಸಿದ ಗೆಲುವಿನ ಸ್ಮಾರಕವಾಗಿ ವಿಷ್ಣುವರ್ಧನ ವೀರನಾರಾಯಣ ದೇಗುಲವನ್ನು ಕಟ್ಟಿದನು.

೬. ರಾಷ್ಟ್ರದ ಚಾರಿತ್ರ್ಯದ ಹೆಗ್ಗುರುತು ಯಾವುದು?

ರಾಷ್ಟ್ರದ ಚಾರಿತ್ರ್ಯದ ಹೆಗ್ಗುರುತು ನಮ್ಮ ದೇಗುಲಗಳು!

**ಚಟುವಟಿಕೆ–೬. ಪ್ರಶ್ನೆಗಳ ಕ್ರಮ ಸಂಖ್ಯೆಯ ಮುಂದೆ ಉತ್ತರವನ್ನು ಬರೆಯಿರಿ.**

೧.

೨.

೩.

೪.

೫.

೬.

ಕೊಟ್ಟಿರುವ ಹೇಳಿಕೆಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿ.

**೧. "ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ"**

ಆಯ್ಕೆ: ತಲಕಾಡಿನ ವೈಭವ ಪಾಠದ ಈ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರು ಬರೆದಿರುವ 'ಕವಿಕಂಡ ನಾಡು'ಎನ್ನುವ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಲೇಖಕರು ೧೯೫೦ನೆಯ ಇಸ್ವಿ ಅಕ್ಟೋಬರ್ ತಿಂಗಳು ಮಂಗಳವಾರ ೨೦ನೆಯ ತಾರೀಖು ರಾತ್ರಿ ೧೨–೧೫ರ ಸಮಯದಲ್ಲಿ ಶಿವನಸಮುದ್ರದ ನಿಲ್ಮನೆಯಲ್ಲಿ ಕುಳಿತುಕೊಂಡು ಆ ದಿನದ ಪಯಣದ ವಿವರವನ್ನು ಬರೆಯುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ತಾವು ದಿನಚರಿ ಬರೆಯುವಾಗ ಎಲ್ಲೆಡೆ ರಾತ್ರಿಯ ನೀರವ ಮೌನ ಆವರಿಸಿತ್ತು ಎಂದು ಹೇಳುವುದು ಲೇಖಕರ ಮಾತಿನ ಸ್ವಾರಸ್ಯವಾಗಿದೆ.

| ೧. "ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೨. "ಅದು ಕಲಾಶ್ರೀ ವಿಹರಿಸುವ ನಂದನವನ"**

ಆಯ್ಕೆ: ತಲಕಾಡಿನ ವೈಭವ ಪಾಠದ ಈ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರು ಬರೆದಿರುವ 'ಕವಿಕಂಡ ನಾಡು' ಎನ್ನುವ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುದುವೊಳಲಿನಿಂದ ರನ್ನನು ತಂದೆತಾಯಿಯರಿಗೆ ಹೇಳದೆ ಬಳೆ ಮಾರುವ ಉದ್ಯಮವನ್ನು ಕೃಷ್ಣಾ ನದಿಯ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ಬಂದನು. ಹಾಗೆ ಬರಲು ಕಾರಣವಾದ ಸಂಗತಿಗಳಾವವು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಅಂದಿನ ಕಾಲಕ್ಕೆ ತಲಕಾಡು ಅನೇಕ ಕಲಾವಿದರಿಗೆ ಕವಿಗಳಿಗೆ ಆಶ್ರಯ ತಾಣವಾಗಿತ್ತು.

| ೨. "ಅದು ಕಲಾಶ್ರೀ ವಿಹರಿಸುವ ನಂದನವನ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೩ . "ಮೋಟಾರು ಓಡಲೊಲ್ಲದು ಸಾರಥಿ ನಿಲ್ಲಲೊಲ್ಲನು"**

ಆಯ್ಕೆ: ತಲಕಾಡಿನ ವೈಭವ ಪಾಠದ ಈ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಕವಿಕಂಡ ನಾಡು' ಎನ್ನುವ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಲೇಖಕರು ಅವರ ಗೆಳೆಯರು ವಿಜಯಪುರದ ಅರ್ಕೇಶ್ವರನ ದೇವಾಲಯಲದ ದರ್ಶನ ಮಾಡದಿದ್ದರೆ ತಲಕಾಡಿನ ಪಂಚಲಿಂಗ ದರ್ಶನ ಪೂರ್ಣಗೊಳ್ಳುವುದಿಲ್ಲ ಎಂದು ನಂಬಿಕೊಂಡು ಆ ದಾರಿಯಲ್ಲಿ ಮದ್ಯರಾತ್ರಿ ಒಂದು ಗಂಟೆಗೆ ಹೊರಟಿದ್ದರು. ದಾರಿಯ ಕೊರಕಲಿನಲ್ಲಿ ಮೋಟಾರು ಹೋಗಲಾರದೆ ಹೋಗುತ್ತಿದ್ದ ಸಂದರ್ಭವನ್ನು ನೆನಪಿಸಿಕೊಂಡು ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಇಕ್ಕಟ್ಟಾದ ಕೊರಕಲಿನ ದಾರಿಯಲ್ಲಿ ಮೋಟಾರು ಟಾರು ಕಷ್ಟಪಟ್ಟು ಹೋಗುತ್ತಿದ್ದುದನ್ನು ಸ್ವಾರಸ್ಯಪೂರ್ಣವಾಗಿ ವಿವರಿಸಿದ್ದಾರೆ.

| ೩ . "ಮೋಟಾರು ಓಡಲೊಲ್ಲದು ಸಾರಥಿ ನಿಲ್ಲಲೊಲ್ಲದು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೪. " ಬರ್ರೋ ಗುಡಿ ಸಿಕ್ಕಿತು, ಬರ್ರೋ ದೇವಾಲಯ ದೊರಕಿತು "**

ಆಯ್ಕೆ: ತಲಕಾಡಿನ ವೈಭವ ಪಾಠದ ಈ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರು ಬರೆದಿರುವ 'ಕವಿಕಂಡ ನಾಡು'ಎನ್ನುವ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಹುಣ್ಣಿಮೆಯ ರಾತ್ರಿಯಲ್ಲಿ ಲೇಖಕರು ಮತ್ತು ಮೋಟಾರಿನ ಸಾರಥಿ ನಡೆದುಕೊಂಡು ವಿಜಯಪುರದ ಅರ್ಕೇಶ್ವರನ ದೇವಾಲಯವನ್ನು ಹುಡುಕಿಕೊಂಡು ಹೊರಟರು. ಅನತಿ ದೂರದಲ್ಲಿ ಗಿಡಮರಗಳ ಪೊದೆಯಲ್ಲಿ ಏನೋ ಬೆಳ್ಳಗೆ ಮುಸುಕು ಮುಸುಕಾಗಿ ಕಂಡಾಗ ಆನಂದದ ಆವೇಶದಲ್ಲಿ ಲೇಖಕರು ತಮ್ಮ ಗೆಳೆಯರನ್ನು ಹೇಗೆ ಕರೆದರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ತಾವು ಹುಡುಕಿಕೊಂಡು ಹೋಗಿರುವುದು ದೊರೆತಾಗ ಆಗುವ ಸಂತೋಷವನ್ನು ಇಲ್ಲಿ ಸ್ವಾರಸ್ಯಪೂರ್ಣವಾಗಿ ಹೇಳಲಾಗಿದೆ.

| ೪. " ಬರ್ರೋ ಗುಡಿ ಸಿಕ್ಕಿತು, ಬರ್ರೋ ದೇವಾಲಯ ದೊರಕಿತು " | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

## ಸಂಧಿ.

ಎರಡು ಅಕ್ಷರಗಳ ನಡುವೆ ಕಾಲ ವಿಳಂಬವಿಲ್ಲದೇ ಉಚ್ಚರಿಸುವುದನ್ನು ಸಂದಿ ಎಂದು ಕರೆಯುತ್ತಾರೆ. ಸಂದಿಯಲ್ಲಿ ಮುಖ್ಯವಾಗಿ ಕನ್ನಡ ಮತ್ತು ಸಂಸ್ಕೃತ ಸಂಧಿಗಳೆಂದು ವಿಭಜಿಸಿ ವಿವರಿಸುತ್ತೇವೆ. ಅದರಲ್ಲೂ ಸ್ವರ ಮತ್ತು ವ್ಯಂಜನ ಸಂದಿಗಳೆಂತಲೂ ಪ್ರಭೆಧ ಗಳುಂಟು. ಕನ್ನಡದಲ್ಲಿ ಮುಖ್ಯವಾಗಿ ಮೂರು ಪ್ರಕಾರದ ಸಂಧಿಗಳಿವೆ. ಅವುಗಳನ್ನು ಉದಾಹರಣೆಗಳೊಂದಿಗೆ ತಿಳಿಯೋಣ.

**೧. ಲೋಪಸಂಧಿ:** ಸಂಧಿಕ್ರಿಯೆ ಆಗುವಾಗ ಸ್ವರದ ಮುಂದೆ ಸ್ವರ ಬಂದು ಪೂರ್ವಪದದ ಸ್ವರ ಲೋಪವಾದರೆ ಅದು ಲೋಪಸಂಧಿ.

ಉದಾ: ಊರು + ಊರು > ಊರೂರು

ಊರು + ಇಂದ > ಊರಿಂದ

ಬಲ್ಲೆನು + ಎಂದು > ಬಲ್ಲೆನೆಂದು

**೨. ಆಗಮಸಂಧಿ:** ಸ್ವರದ ಮುಂದೆ ಸ್ವರ ಬಂದು ಸಂಧಿಯಾಗುವಾಗ 'ಯ' ಕಾರ ಅಥವಾ 'ವ' ಕಾರವು ಈ ಸ್ವರಗಳ ಮಧ್ಯೆ ಹೊಸದಾಗಿ ಸೇರಿದರೆ ಅದು ಆಗಮಸಂಧಿ.

ಉದಾ: ಕೈ + ಅನ್ನು > ಕೈಯನ್ನು

ಗುರು + ಅನ್ನು > ಗುರುವನ್ನು

ಚಳಿ + ಇಂದ > ಚಳಿಯಿಂದ

ಪುಸ್ತಕ + ಅನ್ನು > ಪುಸ್ತಕವನ್ನು

**೩. ಆದೇಶಸಂಧಿ:** ಸಂಧಿ ಕ್ರಿಯೆ ಆಗುವಾಗ ಪರಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದೇ ಆದೇಶಸಂಧಿ. ಕ ತ ಪ ಗಳಿಗೆ > ಗ ದ ಬ ಗಳೂ ಕೆಲವೊಮ್ಮೆ ಪ ಬ ಮ ಗಳ ಬದಲಿಗೆ ವ ಕಾರವೂ ಆದೇಶವಾಗಿ ಬರುತ್ತವೆ.

ಉದಾ: ಹುಲ್ಲು + ಕಾವಲು > ಹುಲ್ಲುಗಾವಲು

ಬೆನ್ + ಪತ್ತು > ಬೆಂಬತ್ತು

ಮೈ + ತೊಳೆ > ಮೈದೊಳೆ

ಕೆನೆ + ಪಾಲ್ > ಕೆನೆವಾಲ್

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಸಂಧಿ ಎಂದರೇನು? ಅದರ ವಿಧಗಳನ್ನು ಹೇಳಿ.

## ಪದ್ಯ ಭಾಗ–೬. **ಗೆಳೆತನ**



– ಚೆನ್ನವೀರ ಕಣವಿ

ಚೆನ್ನವೀರ ಕಣವಿ ಅವರು ೧೯೨೮ ರಲ್ಲಿ ಗದಗ ಜಿಲ್ಲೆಯ ಹೊಂಬಳದಲ್ಲಿ ಜನಿಸಿದರು. ಇವರು ಆಕಾಶಬುಟ್ಟಿ, ಭಾವಜೀವಿ, ಮಧುಚಂದ್ರ ದೀಪಧಾರಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ಕಾವ್ಯಾಕ್ಷಿ, ಚಿರಂತನ ದಾಹ ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ಇವರ ಸಾಹಿತ್ಯಕ ಕೊಡುಗೆ ಮಹತ್ವದಾಗಿದ್ದು. ಇವರಿಗೆ ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, ೧೯೮೧ ರಲ್ಲಿ ಜೀವಧ್ವನಿ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರಕಿವೆ. ೧೯೯೬ ರಲ್ಲಿ ಹಾಸನದಲ್ಲಿ ನಡೆದ ೬೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ 'ಗೆಳೆತನ' ಕವನವನ್ನು ಚೆನ್ನವೀರ ಕಣವಿ ಅವರ 'ಆಕಾಶಬುಟ್ಟಿ' ಕವನ ಸಂಕಲನ ದಿಂದ ಆರಿಸಿಕೊಳ್ಳಲಾಗಿದೆ.

ಚಟುವಟಿಕೆ–೧. ಈ ಮೆಲಿನ ವಿವರಣೆಯಂತೆ ಮತ್ತೊಮ್ಮೆ ಬರೆದು ರೂಢಿಸಿಕೊಳ್ಳಿರಿ.

ಚಟುವಟಿಕೆ–೨. **ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕವಿ ಎಲ್ಲಿ ತಂಗಿದ್ದಾರೆ?

ಉತ್ತರ: ಕವಿ ಗೆಳೆತನವೆಂಬ ವಿಶಾಲ ಆಲದ ಮರದಡಿಯಲ್ಲಿ ಹರಡಿರುವ ತಣ್ಣೆಳಲ ತಂಪಿನಲ್ಲಿ ತಂಗಿದ್ದಾರೆ.

೨. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ?

ಉತ್ತರ: ಕವಿ, ಜೀವನದ ಅನಂತ ದುರ್ಭರ ಬವಣೆ ನೋವುಗಳನ್ನು ನುಂಗಿದ್ದಾರೆ.

೩. ಗೆಳೆತನದ ಮನಸ್ಸಿನ ಭಾವನೆ ಹೇಗಿದೆ?

ಉತ್ತರ: ಗೆಳೆತನದ ಮನಸ್ಸಿನ ಭಾವನೆಯು ಸ್ಫಟಿಕದಂತೆ, ಬೆಳದಿಂಗಳಿನಂತೆ ಪರಿಶುದ್ಧವಾಗಿದೆ.

೪. ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ ಯಾವುದು?

ಉತ್ತರ: 'ಉಪ್ಪಿಗಿಂತ ರುಚಿ ಇಲ್ಲ; ತಾಯಿಗಿಂತ ಬಂಧುವಿಲ್ಲ' ಎನ್ನವುದು ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆಯಾಗಿದೆ.

**ಚಟುವಟಿಕೆ–೩. ಮೇಲಿನ ಉತ್ತರಗಳನ್ನು ಪುನಃ ಬರೆಯಿರಿ.**

೧.

೨.

೩.

೪.

**ಕೆಳಗಿರವ ಹೇಳಿಕೆಗಳ ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಅದನುಳಿದರೇನಿಹುದು– ಜೀವನ್ಮೃತ!"

ಉತ್ತರ: ಆಯ್ಕೆ: ಈ ವಾಕ್ಯವನ್ನು ಚೆನ್ನವೀರ ಕಣವಿ ಅವರು ಬರೆದಿರುವ 'ಆಕಾಶಬುಟ್ಟಿ' ಕವನ ಸಂಕಲನದಿಂದ ಆಯ್ದ 'ಗೆಳೆತನ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಗೆಳೆತನವೇ ಇಹಲೋಕಕಿರುವ ಅಮೃತವಾಗಿದೆ; ಅದಿಲ್ಲದಿದ್ದರೆ ಬದುಕಿದ್ದು ಸತ್ತಂತೆ ಎಂದು ಹೇಳುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಗೆಳೆತನ ಜೀವನಕ್ಕೆ ಅತ್ಯವಶ್ಯಕ ಎಂಬ ಈ ಮಾತು ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

| ೧. "ಅದನುಳಿದರೇನಿಹುದು– ಜೀವನ್ಮೃತ!" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೨. "ಭಾವ ಶುದ್ಧ ಸ್ಪಟಿಕ ಬೆಳದಿಂಗಳು!"**

ಉತ್ತರ: ಆಯ್ಕೆ: ಈ ವಾಕ್ಯವನ್ನು ಚೆನ್ನವೀರ ಕಣವಿ ಅವರು ಬರೆದಿರುವ 'ಆಕಾಶಬುಟ್ಟಿ' ಕವನ ಸಂಕಲನದಿಂದ ಆಯ್ದ 'ಗೆಳೆತನ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ

ಸಂದರ್ಭ: ಕವಿ ಗೆಳೆತನದ ಬಗ್ಗೆ ಹೇಳುತ್ತಾ ಗೆಳೆತನದಲ್ಲಿ ಮನವು ಬಾನಿನಂತೆ ವಿಶಾಲವಾಗಿದ್ದು, ಎದೆ ತಿಳಿಯಾದ ಕೊಳದಂತೆ ಪ್ರಶಾಂತವಾಗಿರುತ್ತದೆ. ಹಾಗೂ ಭಾವನೆಯು ಸ್ಫಟಿಕದಂತೆ, ಬೆಳದಿಂಗಳಿನಂತೆ ಪರಿಶುದ್ಧವಾಗಿರುತ್ತದೆ. ಎಂದು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಗೆಳೆತನದ ಪರಿಶುದ್ಧತೆಯನ್ನು ಸ್ಫಟಿಕ ಹಾಗೂ ಬೆಳದಿಂಗಳಿಗೆ ಹೋಲಿಸಿರುವುದು ಸ್ವಾರಸ್ಯಪೂರ್ಣ ಅಭಿವ್ಯಕ್ತಿಯಾಗಿದೆ.

| ೨. "ಭಾವ ಶುದ್ಧ ಸ್ಪಟಿಕ ಬೆಳದಿಂಗಳು!" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

೩. **"ಕಂಡ ಕಂಡವರೇನು ಬಲ್ಲರಿದನು"**

ಉತ್ತರ: ಆಯ್ಕೆ: ಈ ವಾಕ್ಯವನ್ನು ಚೆನ್ನವೀರ ಕಣವಿ ಅವರು ಬರೆದಿರುವ 'ಆಕಾಶಬುಟ್ಟಿ' ಕವನ ಸಂಕಲನದಿಂದ ಆಯ್ದ 'ಗೆಳೆತನ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಗೆಳೆತನದ ಪರಿಶುದ್ಧತೆ ಮತ್ತು ಅದರ ಮಹತ್ವವನ್ನು ಕಂಡಕಂಡವರೆಲ್ಲ ತಿಳಿಯಲು ಸಾಧ್ಯವಿಲ್ಲ. ಗೆಳೆತನವನ್ನು ನಿಜವಾಗಿ ಅನುಭವಿಸಿದವರಿಗೆ ಮಾತ್ರ ತಿಳಿಯುತ್ತದೆ. ಎಂದು ಕವಿಯು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಗೆಳೆತನದ ಬಗ್ಗೆ ಮಾತನಾಡುವವರಿಗೆಲ್ಲಾ ಅದರ ಮಹತ್ವ ತಿಳಿಯುವುದಿಲ್ಲ. ಅನುಭವದಿಂದ ಮಾತ್ರ ಅದನ್ನು ಅರಿಯಲು ಸಾಧ್ಯ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

| ೩. "ಕಂಡ ಕಂಡವರೇನು ಬಲ್ಲರಿದನು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೪. "ಬಾಳುವರು ಗಂಧದೊಲು ಜೀವ ತೆಯ್ದು!"**

ಉತ್ತರ: ಆಯ್ಕೆ: ಈ ವಾಕ್ಯವನ್ನು ಚೆನ್ನವೀರ ಕಣವಿ ಅವರು ಬರೆದಿರುವ 'ಆಕಾಶಬುಟ್ಟಿ' ಕವನ ಸಂಕಲನದಿಂದ ಆಯ್ದ 'ಗೆಳೆತನ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ

ಸಂದರ್ಭ: ಗೆಳೆಯರು ಕಷ್ಟ–ಸುಖಗಳಲ್ಲಿ ಹೇಗೆ ಹೆಗಲಿಗೆ ಹೆಗಲುಕೊಟ್ಟು ಭಾಗಿಯಾಗುತ್ತಾರೆ. ಮತ್ತು ಗಂಧವು ತೇದಾಗ ಕಂಪು ನೀಡುವಂತೆ ಗೆಳೆಯರು ಹೇಗೆ ತ್ಯಾಗ ಮಾಡುತ್ತಾರೆ ಎಂಬುದನ್ನು ವರ್ಣಿಸುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ: ಗೆಳೆಯರ ತ್ಯಾಗ ಮನೋಭಾವನೆಯನ್ನು ಗಂಧ ತೇಯುವುದಕ್ಕೆ ಹೋಲಿಸಿರುವುದು ಇಲ್ಲಿನ ಸ್ವಾರಸ್ಯ.

| ೪. "ಬಾಳುವರು ಗಂಧದೊಲು ಜೀವ ತೆಯ್ದು!" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**ಚಟುವಟಿಕೆ– ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ, ಮುಂದಿರುವ ಖಾಲಿ ಜಾಗದಲ್ಲಿ ಬರೆಯಿರಿ.**

೧. ಹೆಗಲುಗೊಟ್ಟು, ಸಂತಸಬಟ್ಟು, ಉಂಡವನು. ------------------------------

೨. ಲೋಕ, ಅಮೃತ, ಎದೆ, ಸಾಹಸ. ------------------------------

೩. ಭಾವಜೀವಿ, ಕಾವ್ಯಾಕ್ಷಿ, ದೀಪಧಾರಿ, ಜೀವಧ್ವನಿ. ------------------------------

೪. ಬಾನು, ಭಾನು, ಗಗನ, ಆಗಸ ------------------------------

## ಪಠ್ಯ ಪೂರಕ ಅಧ್ಯಯನ –೫. **ಆಟೋರಿಕ್ಷಾದ ರಸಪ್ರಸಂಗಗಳು.**



–ಎಚ್.ನರಸಿಂಹಯ್ಯ.

**೧. ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರ ಅಭಿಪ್ರಾಯವೇನು?**

'ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವುದೇ ಒಂದು ಪ್ರಯಾಸದ ಕೆಲಸ. ಬಸ್‌ಗಳ ಟೈಮ್ ಅನಿಶ್ಚಿತ ಹಾಗೂ ತುಂಬಾ ಕಾಯಬೇಕಾಗಿದ್ದು ಆ ನೂಕುನುಗ್ಗಲಲ್ಲಿ ಬಸ್ ಸಂಚಾರ ಬಹಳ ದುಸ್ತರ.' ಎಂದು ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

**೨. ದೇಹಕ್ಕೆಲ್ಲ ನಟ್ಟು ಬೋಲ್ಟ್ ಹಾಕಿಸಿಕೊಳ್ಳುವುದಕ್ಕಿಂತ ಯಾವುದು ಲೇಸು?**

ದೇಹಕ್ಕೆಲ್ಲ ನಟ್ಟು ಬೋಲ್ಟ್ ಹಾಕಿಸಿಕೊಳ್ಳುವುದಕ್ಕಿಂತ ಭಗವಂತನ ಪಾದಾರವಿಂದವನ್ನು ಸೇರುವುದೇ ಲೇಸು.

**೩. ಸಿಡುಕಿನಿಂದ ಆಟೋ ಸ್ಟಾರ್ಟ್ ಮಾಡಿದ ಆಟೋ ಚಾಲಕ ಏನೆಂದು ಹೇಳಿದ?**

ಸಿಡುಕಿನಿಂದ ಆಟೋ ಸ್ಟಾರ್ಟ್ ಮಾಡಿದ ಆಟೋ ಚಾಲಕ "ರೀ ಸ್ವಾಮಿ, ಸುಮ್ಮನೆ ಕುಳಿತುಕೊಳ್ಳಿ. ನಿಮ್ಮಂತವರಿಂದಲೇ ಆಕ್ಸಿಡೆಂಟ್ ಆಗುವುದು. ಹತ್ತುವುದಕ್ಕಿಂತ ಮುಂಚೇನೆ ಅಪಶಕುನ" ಎಂದು ಹೇಳಿದನು.

**೪. ಲೇಖಕರಿಗೆ ವಿಮಾನ ಯಾನದ ಬಗ್ಗೆ ಭಯವಿಲ್ಲವೇಕೆ?**

ಲೇಖಕರಿಗೆ ವಿಮಾನ ಯಾನದ ಬಗ್ಗೆ ಭಯವಿಲ್ಲ. ಏಕೆಂದರೆ ವಿಮಾನಕ್ಕೆ ಯಾವಾಗಲೂ ಎಮ್ಮೆ, ಹಸು, ಜನ ಅಡ್ಡ ಬರಲಿಲ್ಲ. ಜೊತೆಗೆ ವಿಮಾನವನ್ನು ಓವರ್‌ಟೇಕ್ ಮಾಡಿದ ಪ್ರಸಂಗವೂ ಇಲ್ಲ".

**೫. ಪ್ರಾರ್ಥನೆಯಿಂದ ಮಳೆ ಬರಿಸುವುದಾಗಿ ಹೇಳಿದ್ದವನಾರು?**

ಪ್ರಾರ್ಥನೆಯಿಂದ ಮಳೆ ಬರಿಸುವುದಾಗಿ ಹೇಳಿದ್ದವನು ಬಾಲಯೋಗಿ.

೬. ಲೇಖಕರು ಆಟೋ ಚಾಲಕರಲ್ಲಿಯೂ ಮಾನವೀಯತೆಯನ್ನು ಅರಿತ ಪ್ರಸಂಗದ ಬಗ್ಗೆ ತಿಳಿಸಿ.

ಒಂದು ಸಂಜೆ ಜಯನಗರದಲ್ಲಿರುವ ನ್ಯಾಷನಲ್ ಕಾಲೇಜಿನಲ್ಲಿ ಒಂದು ಕಾರ್ಯಕ್ರಮ ಮುಗಿಸಿಕೊಂಡು ಹೋಗುವುದು ರಾತ್ರಿ ೧೦ ಘಂಟೆಯಾಯಿತು. ಕೆಲವು ಉಪಾಧ್ಯಾಯರು "ಇಷ್ಟು ಹೊತ್ತಿನಲ್ಲಿ ಹಾಸ್ಟೆಲ್‌ನಲ್ಲಿ ಊಟ ಇರುವುದಿಲ್ಲ; ಆದುದರಿಂದ ನಮ್ಮ ಮನೆಗೆ ಬಂದು ಊಟಮಾಡಿಕೊಂಡು ಹೋಗಿ" ಎಂದು ಅವರನ್ನು ಒತ್ತಾಯಪಡಿಸುತ್ತಿದ್ದರು. "ಪರವಾಗಿಲ್ಲ, ಒಂದು ಹೊತ್ತು ಊಟ ಇಲ್ಲದೇ ಇದ್ದರೆ ಚಿಂತೆ ಇಲ್ಲ. ತುಂಬಾ ಹೊತ್ತಾಗಿದೆ" ಎಂದು ಲೇಖಕರು ಹೇಳಿದರು. ಇದನ್ನೆಲ್ಲಾ ಕೇಳುತ್ತಿದ್ದ ಆಟೋ ಚಾಲಕರು 'ಯಾಕೆ ಸಾರ್, ನಿಮಗೆ ಮನೆ ಇಲ್ಲವೇ?' ಎಂದು ಕೇಳಿದರು. "ಇಲ್ಲಪ್ಪ, ಹಾಸ್ಟೆಲಿನಲ್ಲಿದ್ದೇನೆ" ಅಂದರು. ಆಗ ಅವನು "ಇಷ್ಟು ಹೊತ್ತಿನಲ್ಲಿ ಉಪವಾಸ ಮಲಗಿಕೊಳ್ಳಬಾರದು ಸಾರ್. ವಿಶ್ವೇಶ್ವರಪುರದಲ್ಲಿರುವ ಸಜ್ಜನರಾವ್ ಸರ್ಕಲ್‌ಗೆ ಹೋಗೋಣ ಬನ್ನಿ. ಅಲ್ಲಿ ಇಡ್ಲಿ ಮಾರುತ್ತಾರೆ. ನೀವು ಇಡ್ಲಿ ತಿನ್ನುವತನಕ ಕಾಯುತ್ತೇನೆ" ಎಂದು ತುಂಬಾ ಆತ್ಮೀಯವಾಗಿ ವಿನಂತಿಸಿಕೊಂಡನು. ಲೇಖಕರು ಅವನಿಗೆ ವಂದಿಸಿದರು

ಚಟುವಟಿಕೆ–೧. ಮೇಲಿನ ಉತ್ತರಗಳನ್ನು ಪುನಃ ಬರೆದು ರೂಢಿಸಿಕೊಳ್ಳುವುದು.

೧.

೨.

೩.

৩.

৪.

৫.

**ಸರ್ಕಾರಿ ಪ್ರೌಢ ಶಾಲೆ**

ಸಮಯ-೪೦ ನಿ. **ಮೌಲ್ಯಮಾಪನ-೩** ೨೦ ಅಂಕಗಳು

**ಅ.ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** ೧x೪=೦೪

೧. ಮುದುಕಿಯ ಕಿರಿಯ ಮಗಳು ಏಕೆ ಹೂವಿನ ಗಿಡವಾದಳು?

೨. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ?

೩. 'ರಾಯ' 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದಾರೆ?

೪. ಕೋಟೆಗೋಡೆಗೆ ಮೆಟ್ಟಿಲುಗಳು ಯಾವುದು?

**ಆ. ಕೊಟ್ಟಿರುವ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿ.** ೨x೩=೦೬

೧. "ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ"

೨. "ಭಾವ ಶುದ್ಧ ಸ್ಪಟಿಕ ಬೆಳದಿಂಗಳು!"

**ಇ. ಕೆಳಗೆ ಹೆಸರಿಸಿದ ಕವಿ ಪರಿಚಯ ಬರೆಯಿರಿ.** ೩x೧=೦೩

೧. ಕುವೆಂಪು.

**ಈ. ಕೊಟ್ಟಿರುವ ವಾಕ್ಯಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.** **೧x೩=೦೩**

೧. ನೀನು ಹೂ ತಕ್ಕೊಂಡು ಹೋಗಿ ಮಾಡ್ಕೊಂಡು ಬಂದ್ಬಿಡೇ.

೨. ದಾದೇರು ಗೋಗರೆದದ್ದಕ್ಕೆ ಒಪ್ಕೊತಾಳೆ.

೩. ತಾಯಿ ಅಣ್ಣನ ಕೇಳ್ಕೊಂಡು ಕಕ್ಕೊಂಡೋಗು ಅನ್ತಾಳೆ.

**ಉ. ವರ್ಗಾವಣೆ ಪ್ರಮಾಣ ಪತ್ರ ಕೋರಿ, ಒಂದು ಮನವಿ ಪತ್ರವನ್ನು ನಿಮ್ಮ ಮುಖ್ಯಶಿಕ್ಷಕರಿಗೆ ಬರೆಯಿರಿ.** **೪x೧=೦೪**

ಇಂದ,

ಗೆ,

ಮಾನ್ಯರೇ,

| | | |
|---|---|---|
| ೪.ವಿಷಯ | : | |

ವಿಷಯ

ಕೋರಿಕೆ

**೬.** ಧನ್ಯವಾದಗಳೊಂದಿಗೆ.

| | |
|---|---|
| **೭.** ಸ್ಥಳ:– | |
| ದಿನಾಂಕ:– | |

| |
|---|
| **೮.**ಇಂತಿ/ ಇತಿ ನಿಮ್ಮ ವಿಶ್ವಾಸಿ |
| ಸಹಿ:– |

## ಗದ್ಯಭಾಗ–೭. **ಅಮ್ಮ**



**– ಡಾ॥ ಯು.ಆರ್. ಅನಂತಮೂರ್ತಿ**

ಡಾ। ಯು.ಆರ್. ಅನಂತಮೂರ್ತಿಯವರು ಇವರ ಪೂರ್ಣ ಹೆಸರು ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ.ಇವರ ಕಾಲ ಕ್ರಿ.ಶ. ೧೯೩೨–೨೦೧೪. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆ ಗ್ರಾಮದಲ್ಲಿ ಜನಿಸಿದರು. ಇವರ ಪ್ರಮುಖ ಕೃತಿಗಳೆಂದರೆ: 'ಸಂಸ್ಕಾರ', 'ಭವ', 'ಅವಸ್ಥೆ', 'ಭಾರತೀಪುರ' ಮುಂತಾದ ಕಾದಂಬರಿಗಳು, 'ಆವಾಹನೆ' (ನಾಟಕ) 'ಮೌನಿ', 'ಪ್ರಶ್ನೆ', 'ಎಂದೆಂದೂ ಮುಗಿಯದ ಕಥೆ' – ಕಥಾ ಸಂಕಲನಗಳು, 'ಮಿಥುನ', 'ಅಜ್ಜನ ಹೆಗಲ ಸುಕ್ಕುಗಳು' ಮುಂತಾದ ಕವನಸಂಕಲನಗಳು ಹೀಗೆ ವಿವಿಧ ಸಾಹಿತ್ಯ ಪ್ರಕಾರದಲ್ಲಿ ನೂರಾರು ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ಗೌರವ ಡಿ.ಲಿಟ್. ರಾಜ್ಯೋತ್ಸವ ಪ್ರಶಸ್ತಿ, ಭಾರತ ಸರ್ಕಾರದ ಪದ್ಮಭೂಷಣ ಪುರಸ್ಕಾರ, ೧೯೯೪ರಲ್ಲಿ 'ಭಾರತೀಯ ಜ್ಞಾನಪೀಠ ಪ್ರಶಸ್ತಿ' ಪುರಸ್ಕಾರಗಳು ಲಭಿಸಿವೆ. ೨೦೦೨ರಲ್ಲಿ ತುಮಕೂರಿನಲ್ಲಿ ನಡೆದ ೬೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಗದ್ಯಭಾಗವನ್ನು ಯು.ಆರ್.ಅನಂತಮೂರ್ತಿಯವರ 'ಸುರಗಿ' ಎಂಬ ಆತ್ಮಕಥನದಿಂದ ಆಯ್ಕೆಮಾಡಲಾಗಿದೆ.

**ಚಟುವಟಿಕೆ–೧. ಈ ಮೇಲಿನ ವಿವರಣೆಯನ್ನು ಓದಿಕೊಂಡು ಸಂಕ್ಷಿಪ್ತವಾಗಿ ಲೇಖಕರ ಪರಿಚಯವನ್ನು ಬರೆಯಿರಿ.**

ಚಟುವಟಿಕೆ– ೨. ಕೆಳಗಿರುವ ಚಿತ್ರವನ್ನು ನೋಡಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.



**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಬಾಲ್ಯದಲ್ಲಿ ಲೇಖಕರು ಭಯವಾದಾಗ ಯಾವ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು?
ಉತ್ತರ: ಬಾಲ್ಯದಲ್ಲಿ ಲೇಖಕರು ಭಯವಾದಾಗ "ಅರ್ಜುನಃ ಫಲ್ಗುಣೋ ಪಾರ್ಥಃ ಕಿರೀಟೀ ಶ್ವೇತವಾಹನಃ" ಎಂಬ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು.
೨. ಲೇಖಕರ ಮೊದಲ ವಿದ್ಯಾಗುರು ಯಾರು?
ಉತ್ತರ: ಲೇಖಕರ ಮೊದಲ ವಿದ್ಯಾಗುರು ಅವರ ಅಮ್ಮ.
೩. ಸಣ್ಣ ಕುಳಿಯೊಳಗಿನ ಕಪ್ಪುಹುಳುವನ್ನು ಯಾವ ಹೆಸರಿನಿಂದ ಕರೆಯುತ್ತಾರೆ?
ಉತ್ತರ: ಸಣ್ಣ ಕುಳಿಯೊಳಗಿನ ಕಪ್ಪುಹುಳುವನ್ನು 'ತನ್ನಾದೇವಿ', 'ಗುಬ್ಬಿ' ಎಂಬೆಲ್ಲಾ ಹೆಸರಿನಿಂದ ಕರೆಯುತ್ತಾರೆ.
೪. ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕ ಯಾವುದಾಗಿತ್ತು?
ಉತ್ತರ: ಕೃಷ್ಣಪ್ಪಯ್ಯ ಮೇಷ್ಟಿಗಾಗಿ ಆತಂಕದಲ್ಲಿ ಕಾಯುತ್ತ 'ಇವತ್ತು ಮೇಷ್ಟಿಗೆ ಜ್ವರ ಬರಲಿ ದೇವರೇ' ಎಂದು ಮನಸ್ಸಲ್ಲೇ ಪ್ರಾರ್ಥಿಸುತ್ತ ಇರುವುದೇ ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕವಾಗಿತ್ತು.
೫. ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು ಯಾರು?
ಉತ್ತರ: ತಿಂಗಳಿಗೊಮ್ಮೆ ಕಾಫಿ ಬೀಜವನ್ನು ಬ್ಯಾರಿಯೊಬ್ಬರು ತಂದು ಕೊಡುತ್ತಿದ್ದರು.

**ಚಟುವಟಿಕೆ–೨. ಮಾದರಿಯಂತೆ ಉತ್ತರ ಬರೆಯಿರಿ.**

೧.

೨.

೩.

೪.

೫.

**ಕೆಳಗಿರುವ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣಿ"
ಆಯ್ಕೆ: ಈ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ 'ಸುರಗಿ' ಎಂಬ ಆತ್ಮಕಥನದಿಂದ ಆಯ್ಕೆಮಾಡಿಕೊಳ್ಳಲಾಗಿರುವ 'ಅಮ್ಮ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಲೇಖಕರಿಗೆ ಅವರ ಅಮ್ಮ ಅಕ್ಷರಾಭ್ಯಾಸ ಪ್ರಾರಂಭಿಸಿದ ಬಗ್ಗೆ ವಿವರಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಲೇಖಕರ ಅಮ್ಮ ಕೆರೆಕೊಪ್ಪದ ಮನೆಯಲ್ಲಿದ್ದಾಗಲೇ ಹಬ್ಬದ ದಿನ "ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣೀ, ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ" ಎಂದು ಹೇಳಿ ನೆಲದಲ್ಲಿ ಮರಳು ಹರಡಿ, ಕೂರಿಸಿ ಬೆರಳನ್ನು ಹಿಡಿದುಕೊಂಡು 'ಅ' ಎಂಬ ಅಕ್ಷರವನ್ನು ಬರೆಯಿಸಿದರು.
ಸ್ವಾರಸ್ಯ: 'ಮನೆಯೇ ಮೊದಲ ಪಾಠಶಾಲೆ, ಜನನಿತಾನೆ ಮೊದಲ ಗುರು' ಎಂಬುದು ಈ ಸಂದರ್ಭದಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

**ಚಟುವಟಿಕೆ–೩. ಈ ಮೇಲಿನ ಮಾದರಿಯಂತೆ ಉತ್ತರ ಬರೆಯಿರಿ.**

| ೧. "ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣಿ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೨. "ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು"**

ಆಯ್ಕೆ: ಈ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ 'ಸುರಗಿ' ಎಂಬ ಆತ್ಮಕಥನದಿಂದ ಆಯ್ಕೆಮಾಡಿಕೊಳ್ಳಲಾಗಿರುವ 'ಅಮ್ಮ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಲೇಖಕರು ತಮಗೆ ಚೌಲವಾಗುವುದಕ್ಕೆ ಮೊದಲು ರಂಜದ ಹೂವನ್ನು ಮುಡಿದುಕೊಳ್ಳುತ್ತಿದ್ದುದರ ಬಗ್ಗೆ ತಿಳಿಸುವ ಸಂದರ್ಭದಲ್ಲಿ ತಮಗೆ ಉದ್ದ ಕೂದಲಿದ್ದುದನ್ನು ಸ್ಮರಿಸುತ್ತಾ ಈ ಮಾತನ್ನು ಹೇಳುತ್ತಾರೆ. ಲೇಖಕರಿಗೆ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು. ಮಗಳು ಬೇಕೆಂಬುದು ಅವರ ಅಮ್ಮನ ಆಸೆಯೂ ಆಗಿತ್ತು. ಅವರು ಒಂದೊಂದು ಸಾರಿ ಲೇಖಕರಿಗೆ ಹುಡುಗಿಯರ ಉಡುಪು ತೊಡಿಸಿ ರಂಜದ ಹೂವು ಮುಡಿಸುತ್ತಿದ್ದರು.

ಸ್ವಾರಸ್ಯ: ಲೇಖಕರು ತಮಗೂ ಉದ್ದ ಕೂದಲಿದ್ದುದು ಹಾಗೂ ಇಷ್ಟಪಟ್ಟು ರಂಜದ ಹೂವನ್ನು ಮುಡಿಯುತ್ತಿದ್ದುದು ಇಲ್ಲಿ ಸ್ವಾರಸ್ಯಪೂರ್ಣವಾಗಿದೆ.

| ೨. "ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೩. "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"**

ಆಯ್ಕೆ: ಈ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ 'ಸುರಗಿ' ಎಂಬ ಆತ್ಮಕಥನದಿಂದ ಆಯ್ಕೆಮಾಡಿಕೊಳ್ಳಲಾಗಿರುವ 'ಅಮ್ಮ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಲೇಖಕರಿಗೆ ಬಾಲ್ಯದಲ್ಲಿ ಕೃಷ್ಣಪ್ಪಯ್ಯ ಎಂಬ ಮೇಷ್ಟು ಮನೆಪಾಠ ಹೇಳಿಕೊಡುತ್ತಿದ್ದರು. ಅವರು ಬಹಳ ಕಟ್ಟುನಿಟ್ಟು, ಹಾಗಾಗಿ ಲೇಖಕರಿಗೆ ಅವರು ಪಾಠ ಹೇಳಲು ಬರುವುದು ಇಷ್ಟವಿರಲಿಲ್ಲ. ಆದ್ದರಿಂದ "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ" ಎಂದು ಮನಸ್ಸಿನಲ್ಲೇ ಪ್ರಾರ್ಥಿಸುತ್ತಿದ್ದ ಬಗ್ಗೆ ಈ ಸಂದರ್ಭದಲ್ಲಿ ಹೇಳಿದ್ದಾರೆ.

ಸ್ವಾರಸ್ಯ: ಮೇಷ್ಟ್ರಿಗೆ ಜ್ವರ ಬಂದರೆ ಅವರು ಪಾಠ ಹೇಳಿಕೊಡಲು ಬರುವುದಿಲ್ಲ ಎಂದು ಲೇಖಕರು ಹೇಳುವ ಮಾತು ಬಹಳ ಸ್ವಾರಸ್ಯಕರವಾಗಿದೆ.

| ೩. "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೪. "ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು"**

ಆಯ್ಕೆ: ಈ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ 'ಸುರಗಿ' ಎಂಬ ಆತ್ಮಕಥನದಿಂದ ಆಯ್ಕೆಮಾಡಿಕೊಳ್ಳಲಾಗಿರುವ 'ಅಮ್ಮ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಲೇಖಕರಿಗೆ ಅವರ ಅಮ್ಮ ಚರಟದ ಕಾಫಿಕೊಟ್ಟು ತಂದೆಗೆ 'ಒರಿಜಿನಲ್' ಕಾಫಿ ಕೊಡುತ್ತಿದ್ದ ಬಗ್ಗೆ ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ. ಮನೆಯಲ್ಲಿ ಎಲ್ಲರಿಗೂ ಕಾಫಿ ಮಾಡುವಷ್ಟು ಅನುಕೂಲ ಇರುತ್ತಿರಲಿಲ್ಲ. ಆದ್ದರಿಂದ ತಂದೆಗೆ ಮಾತ್ರ ಶುದ್ಧ ಕಾಫಿ ಕೊಟ್ಟು ಮನೆಯ ಉಳಿದವರಿಗೆ ಚರಟದ ಕಾಫಿ ನೀಡುತ್ತಿದ್ದರು. ಅಪರೂಪಕ್ಕೆಂಬಂತೆ ಒಂದೊಂದು ಸಾರಿ ಮಾತ್ರ ಒಳ್ಳೆಯ ಕಾಫಿ ಸಿಗುತ್ತಿತ್ತೆಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ: ಮನೆಯವರೆಲ್ಲರೂ ಒಳ್ಳೆಯ ಕಾಫಿ ಬೀಜದಿಂದ ಮಾಡಿದ ಕಾಫಿ ಕುಡಿಯುವುದಕ್ಕೂ ಕಷ್ಟವಾಗಿದ್ದ ಅಂದಿನ ಆರ್ಥಿಕ ಪರಿಸ್ಥಿತಿ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿದೆ.

| ೪. "ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೫. "ನನಗೆ ಚರಟದಲ್ಲಿ ಕಾಫಿಯೋ?"**

ಆಯ್ಕೆ: ಈ ವಾಕ್ಯವನ್ನು ಯು.ಆರ್.ಅನಂತಮೂರ್ತಿಯವರ 'ಸುರಗಿ' ಎಂಬ ಆತ್ಮಕಥನದಿಂದ ಆಯ್ಕೆಮಾಡಿಕೊಳ್ಳಲಾಗಿರುವ 'ಅಮ್ಮ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಲೇಖಕರ ಮನೆಯಲ್ಲಿ ಅವರ ತಂದೆಗೆ 'ಒರಿಜಿನಲ್' ಕಾಫಿ ಕಾಫಿಕೊಟ್ಟು ಉಳಿದವರಿಗೆ ಚರಟದ ಕಾಫಿ ಕೊಡುತ್ತಿದ್ದ ಬಗ್ಗೆ ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳಿದ್ದಾರೆ. ಈ ರೀತಿ ಚರಟದ ಕಾಫಿ ನೀಡಿದಾಗ ಮನೆಯ ಯಜಮಾನನಾದ ನನಗೇ ಚರಟದ ಕಾಫಿಯೋ? ಎಂದು ಪ್ರಶ್ನಿಸುತ್ತಿದ್ದರು.

ಸ್ವಾರಸ್ಯ: ಲೇಖಕರ ಮನೆಯಲ್ಲಿ ಅವರ ಅಜ್ಜನಿಗಿಂತ ಹೆಚ್ಚಾಗಿ ಅವರ ತಂದೆಯವರಿಗೆ ಘನತೆ–ಗೌರವ ಹೆಚ್ಚಾಗಿದ್ದ ಸಂಗತಿ ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ.

| ೫. "ನನಗೆ ಚರಟದಲ್ಲಿ ಕಾಫಿಯೋ?" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

ಚಟುವಟಿಕೆ–೪.

**ಕೆಳಗಿರವ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಿದ್ದು ಸರಿಯಾದ ಉತ್ತರವನ್ನು ಆರಿಸಿ ಖಾಲಿ ಜಾಗದಲ್ಲಿ ಬರೆಯಿರಿ**

೧. ಅಧಿಕೃತವಾಗಿ ಲೇಖಕರ ಮೊದಲ ಶಿಕ್ಷಕರು ----------------------------------------

ಕೃಷ್ಣಪ್ಪಯ್ಯ, ಅಮ್ಮ, ತಂದೆ, ಶೇಷಗಿರಿ.

೨. ಮಳೆಗಾಲದಲ್ಲಿ ಮಲೆನಾಡಿನಲ್ಲಿ ಯಥೇಚ್ಛವಾಗಿ ಸಿಗುತ್ತಿದ್ದ ಹಣ್ಣು. -------------------------------

ಮಾವಿನಹಣ್ಣು, ಸೀಬೆಹಣ್ಣು, ಹಲಸಿನ ಹಣ್ಣು, ಬಾಳೆಹಣ್ಣು.

೩. 'ಪಟ್ಪಾಂಗ' ಈ ಪದದ ಅರ್ಥ ----------------------------------------

ಒಳ್ಳೆಯಮಾತು, ಹರಟೆ, ಪಟ್ಟಕಟ್ಟುವುದು, ಕೆಟ್ಟಮಾತು.

೪. 'ಕಡೆಗೋಲು' ಪದವು ಈ ಸಂಧಿಗೆ ಉದಾಹರಣೆಯಾಗಿದೆ. ------------------------------------

ಆಗಮಸಂಧಿ, ಗುಣಸಂಧಿ, ಲೋಪಸಂಧಿ, ಆದೇಶಸಂಧಿ

೫. 'ಸಕ್ಕರೆ' ಪದದ ತತ್ಸಮ ರೂಪ ----------------------------------------

ಸಕ್ಕರಿ, ಸಕ್ಕಾರಿ, ಶರ್ಕರಾ, ಸರಕಾರಿ

**ಚಟುವಟಿಕೆ–೫. ಮೇಲಿನ ಉತ್ತರಗಳನ್ನು ಓದಿ ಮತ್ತೊಮ್ಮೆ ಬರೆಯಿರಿ.**

೧. ----------------------------------------

೨. ----------------------------------------

೩. ----------------------------------------

೪. ----------------------------------------

೫. ----------------------------------------

## ಸಮಾಸ ಪರಿಚಯ

ಜಯಪುರದ ಅರಮನೆ ಸುಂದರವಾಗಿದೆ. ರಸ್ತೆಯ ವಿಸ್ತರಣೆಗಾಗಿ ಹೆದ್ದಾರಿಯ ಬದಿಯಲ್ಲಿರುವ ಮರಗಳನ್ನು ಕಡಿಯಲಾಗಿದೆ. ಈ ಎರಡು ವಾಕ್ಯಗಳಲ್ಲಿರುವ 'ಅರಮನೆ', 'ಹೆದ್ದಾರಿ' ಎಂಬ ಎರಡು ಪದಗಳನ್ನು ಗಮನಿಸಿದಾಗ 'ಅರಮನೆ' ಎಂಬ ಪದ 'ಅರಸನ ಮನೆ' ಎಂಬ ಅರ್ಥವನ್ನೂ 'ಹೆದ್ದಾರಿ' ಎಂಬ ಪದ 'ಹಿರಿದಾದ ದಾರಿ' ಎಂಬ ಅರ್ಥವನ್ನೂ ಕೊಡುವ ಪದಗಳೆಂದು ತಿಳಿಯುತ್ತದೆ. ಹೀಗೆ – ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕನುಸಾರ ಒಟ್ಟು ಸೇರಿ ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದರೆ ಅದು ಲೋಪವಾಗಿ ಒಂದೇ ಪದವಾಗುವುದೇ ಸಮಾಸ.

ಕನ್ನಡ ಭಾಷೆಯಲ್ಲಿ ತತ್ಪುರುಷ, ಕರ್ಮಧಾರಯ, ದ್ವಿಗು, ಅಂಶಿ, ದ್ವಂದ್ವ, ಬಹುವ್ರೀಹಿ, ಕ್ರಿಯಾ ಮತ್ತು ಗಮಕ ಎಂಬ ಎಂಟು ವಿಧದ ಸಮಾಸಗಳು ಬಳಕೆಯಲ್ಲಿವೆ. ಸಮಾಸ ಪದಗಳನ್ನು ಬಿಡಿಸಿ ಬರೆಯುವ ಕ್ರಮವನ್ನು ವಿಗ್ರಹವಾಕ್ಯ ಅಥವಾ ವಿಗ್ರಹಿಸುವುದು ಎನ್ನುತ್ತಾರೆ. ಉದಾ: ತೈಲದ ಬಿಂದುಗಳು > ತೈಲ ಬಿಂದುಗಳು..

**೧. ತತ್ಪುರುಷ ಸಮಾಸ:**

ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು ಪೂರ್ವಪದದ ಅಂತ್ಯದಲ್ಲಿರುವ ವಿಭಕ್ತಿಪ್ರತ್ಯಯ ಸಮಾಸವಾಗುವಾಗ ಲೋಪವಾದರೆ ಅದನ್ನು ತತ್ಪುರುಷ ಸಮಾಸ ಎನ್ನವರು. ಇದರಲ್ಲಿ ಉತ್ತರಪದದ ಅರ್ಥ ಪ್ರಧಾನವಾಗಿರುವುದು.

ಬೆಟ್ಟದ + ತಾವರೆ > ಬೆಟ್ಟದಾವರೆ (ಷಷ್ಠಿ ತತ್ಪುರುಷ)

ವಯಸ್ಸಿನಿಂದ + ವೃದ್ಧ > ವಯೋವೃದ್ಧ (ತೃತೀಯಾ ತತ್ಪುರುಷ)

ಹಗಲಿನಲ್ಲಿ + ಕನಸು > ಹಗಲುಗನಸು (ಸಪ್ತಮೀ ತತ್ಪುರುಷ)

ಚಟುವಟಿಕೆ–೫. ಮಾದರಿಯಂತೆ ಸಮಾಸ ಪದಗಳನ್ನು ವಿಗ್ರಹವಾಕ್ಯಗೊಳಿಸಿ ಹೆಸರಿಸಿರಿ..

೧. ಚೋರಭಯ–

೨. ಹೊಟ್ಟೆನೋವು–

೩. ತಲೆದಿಂಬು–

೪. ಮಳೆಗಾಲ–

**೨. ಕರ್ಮಧಾರಯ ಸಮಾಸ:**

ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ–ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರಯ ಸಮಾಸ. ಇದರಲ್ಲಿ ಉತ್ತರ ಪದದ ಅರ್ಥವೇ ಪ್ರಧಾನ.

ಹಿರಿದು + ಮರ > ಹೆಮ್ಮರ

ಮೆಲ್ಲಿತು + ನುಡಿ > ಮೆಲ್ನುಡಿ

ದಿವ್ಯವಾದ + ಪ್ರಕಾಶ > ದಿವ್ಯಪ್ರಕಾಶ

**ಚಟುವಟಿಕೆ–೬. ಮಾದರಿಯಂತೆ ಸಮಾಸ ಪದಗಳನ್ನು ವಿಗ್ರಹವಾಕ್ಯಗೊಳಿಸಿ ಹೆಸರಿಸಿರಿ.**

೧. ಹೆದ್ದಾರಿ–

೨. ಹೆಬ್ಬಂಡೆ–

೩. ಕೆಂದಾವರೆ–

೪. ಉರಿಬೇಸಿಗೆ–

**೩. ದ್ವಿಗು ಸಮಾಸ:**

ಪೂರ್ವಪದ ಸಂಖ್ಯಾವಾಚಕವಾಗಿದ್ದು ಉತ್ತರಪದ ನಾಮಪದವಾಗಿದ್ದರೆ ಅದನ್ನು ದ್ವಿಗು ಸಮಾಸ ಎನ್ನುವರು.

೧. ಮೂರು + ಮಡಿ > ಮುಮ್ಮಡಿ.

೨. ನಾಲ್ಕು + ದೆಸೆ > ನಾಲ್ದೆಸೆ.

೩. ಪಂಚಗಳಾದ + ಇಂದ್ರಿಯ > ಪಂಚೇಂದ್ರಿಯ.

ಈ ಮೂರು ಸಮಾಸಗಳಲ್ಲಿ ಪೂರ್ವಪದ ಸಂಖ್ಯಾವಾಚಕಗಳಾಗಿವೆ. ಮೂರನೆಯದಾದ ಪಂಚೇಂದ್ರಿಯ ಎಂಬ ಪದದಲ್ಲಿ ಎರಡೂ ಪದಗಳು ಸಂಸ್ಕೃತವಾದುದರಿಂದ ಆದ ಎಂಬ ಪದ ಪೂರ್ವಪದದೊಂದಿಗೆ ಸೇರಿಕೊಂಡಿದೆ.

**ಚಟುವಟಿಕೆ–೬. ಮಾದರಿಯಂತೆ ಸಮಾಸ ಪದಗಳನ್ನು ವಿಗ್ರಹವಾಕ್ಯಗೊಳಿಸಿ ಹೆಸರಿಸಿರಿ.**

೧. ಸಪ್ತಸಾಗರ–

೨. ನಾಲ್ವಡಿ–

೩. ಷಡಾನನ–

೪. ಸಪ್ತಸ್ವರಗಳು–

**ಚಟುವಟಿಕೆ–೮. ಮೇಲೆ ತಿಳಿದುಕೊಂಡ ಸಮಾಸಗಳಿಗೆ ಉದಾಹರಣೆಯಾಗುವ ಪದಗಳನ್ನು ಸಂಗ್ರಹಿಸಿ ಬರೆಯಿರಿ.**

| | |
|---|---|
| ತತ್ಪುರುಷ ಸಮಾಸ | |
| ಕರ್ಮಧಾರಯ ಸಮಾಸ | |
| ದ್ವಿಗು ಸಮಾಸ | |

## ಪದ್ಯ ಭಾಗ–೭. ವಚನಾಮೃತ.

| | |
|---|---|
|  | ಅಲ್ಲಮಪ್ರಭು: ಅಲ್ಲಮಪ್ರಭು ೧೨ನೇ ಶತಮಾನದ ಪ್ರಸಿದ್ಧ ಚಿಂತಕ, ತತ್ವಜ್ಞಾನಿ, ಶಿವಶರಣ ಮತ್ತು ವಚನಕಾರ. ಈತನು ಜನಿಸಿದ್ದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯಲ್ಲಿ, ಈತನ ತಂದೆ ನಿರಹಂಕಾರ ಮತ್ತು ತಾಯಿ ಸುಜ್ಞಾನಿ. ಈತ ಕಲ್ಯಾಣದಲ್ಲಿ ಬಸವಣ್ಣ ಸ್ಥಾಪಿಸಿದ 'ಶೂನ್ಯ ಪೀಠ'ದ ಅಧ್ಯಕ್ಷನಾಗಿ ಅನೇಕರಿಗೆ ಮಾರ್ಗದರ್ಶನ ನೀಡಿದವನು. 'ಗುಹೇಶ್ವರಾ' ಎಂಬುದು ಈತನ ವಚನಗಳ ಅಂಕಿತ. |
|  | ಆಯ್ದಕ್ಕಿ ಮಾರಯ್ಯ: ಈತನ ಸಾ.ಶ.ಸು ೧೧೬೦. ಶಿವಶರಣ ಹಾಗೂ ವಚನಕಾರ, ರಾಯಚೂರು ಜಿಲ್ಲೆಯ ಅಮರೇಶ್ವರದ ಆಯ್ದಕ್ಕಿ ಲಕ್ಕಮ್ಮನ ಪತಿ. ಆಯ್ದಕ್ಕಿಮಾರಯ್ಯ ಎಂದೇ ಪ್ರಸಿದ್ಧ. ಈವರೆಗೆ ಈತನ ಸುಮಾರು ೩೨ ವಚನಗಳು ದೊರೆತಿವೆ. ಈತನ ಅಂಕಿತ 'ಅಮರೇಶ್ವರಲಿಂಗ' ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ದಾಸೋಹ ಮಾಡುವುದೇ ಅವರ ಕಾಯಕವಾಗಿತ್ತು. |
|  | ಅಮುಗೆರಾಯಮ್ಮ: ಇವಲ ಕಾಲ ಸಾ.ಶ. ಸುಮಾರು ೧೧೬೦. ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬಳು. ಈಕೆ ಸೊನ್ನಲಿಗೆಯವಳು (ಈಗಿನ ಸೊಲ್ಲಾಪುರ), ಪತಿ ಅಮುಗೆ ದೇವಯ್ಯ. ನೇಯ್ಗೆ ಇವರ ಕಾಯಕ. ಈಕೆಯ ಅಂಕಿತನಾಮ 'ಅಮುಗೇಶ್ವರ'. |
|  | ಶಿವಶರಣೆ ಲಿಂಗಮ್ಮ: ಈಕೆಯ ಕಾಲ ಸಾ.ಶ. ಸುಮಾರು ೧೧೬೦. ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬಳು. ಕ್ಷೌರಿಕ ವೃತ್ತಿಯ ಹಡಪದ ಅಪ್ಪಣ್ಣನವರ ಧರ್ಮಪತ್ನಿ. ಈಕೆಯ ಅಂಕಿತನಾಮ 'ಅಪ್ಪಣ್ಣಪ್ರಿಯ ಚನ್ನಬಸವಣ್ಣ' ಎಂಬುದು. |

ಚಟುವಟಿಕೆ–೧. ಮೇಲಿನ ವಚನಕಾರರ ಪರಿಚಯವನ್ನು ಓದಿ, ಅವರ ಕುರಿತು ಸಂಕ್ಷಿಪ್ತ ಪರಿಚಯ ಬರೆಯಿರಿ.

**ಅಲ್ಲಮಪ್ರಭು:**

**ಆಯ್ದಕ್ಕಿ ಮಾರಯ್ಯ:**

**ಅಮುಗೆರಾಯಮ್ಮ:**

**ಶಿವಶರಣೆ ಲಿಂಗಮ್ಮ:**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ಬುದ್ದಿಯನ್ನು ಹೇಗೆ ಹೇಳಬೇಕಿದೆ?

ಉತ್ತರ: ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ವಂದಿಸಿ ಬುದ್ದಿಯನ್ನು ಹೇಳಬೇಕಿದೆ.

೨. ಕಾಯಕದಲಿ ನಿರತನಾದವನು ಯಾವುದನ್ನು ಮರೆಯಬೇಕು?

ಉತ್ತರ: ಕಾಯಕದಲಿ ನಿರತನಾದವನು ಗುರು ದರ್ಶನ, ಲಿಂಗಪೂಜೆಯನ್ನಾದರೂ ಮರೆಯಬೇಕು.

೩. ಆಯ್ದಕ್ಕಿ ಮಾರಯ್ಯನ ಪ್ರಕಾರ ಕೈಲಾಸ ಯಾವುದು?

ಉತ್ತರ: ಆಯ್ದಕ್ಕಿ ಮಾರಯ್ಯನ ಪ್ರಕಾರ ಕಾಯಕವೇ ಕೈಲಾಸ.

೪. ಕಾಗೆಯು ಏನಾಗಲು ಸಾಧ್ಯವಿಲ್ಲ?

ಉತ್ತರ: ಕಾಗೆಯು ಕೋಗಿಲೆಯಾಗಲು ಸಾಧ್ಯವಿಲ್ಲ.

೫. ಯಾರ ಮುಖವನ್ನು ನೋಡಲಾಗದು?

ಉತ್ತರ: ನಾಮವನ್ನು ಹಾಕಿಕೊಂಡು ಜ್ಞಾನಿಯಂತೆ ಮೆರೆಯುವ ದಡ್ಡರ ಮುಖವನ್ನು ನೋಡಲಾಗದು.

೬. ಶರಣರು ಕೆಡಿಸುವ ನಿದ್ದೆಯನ್ನು ಹೇಗೆ ಗೆದ್ದಿದ್ದಾರೆ?

ಉತ್ತರ: ಶರಣರು ಕೆಡಿಸುವ ನಿದ್ದೆಯನ್ನು ಯೋಗ ಸಮಾಧಿಯನ್ನಾಗಿ ಮಾಡಿಕೊಂಡು ಗೆದ್ದಿದ್ದಾರೆ.

**ಚಟುವಟಿಕೆ–೨. ಮೇಲಿನ ಉತ್ತರಗಳನ್ನು ಗ್ರಹಿಸಿಕೊಂಡು ಪ್ರಶ್ನೆಗಳ ಸಂಖ್ಯೆಯ ಮುಂದೆ ಉತ್ತರವನ್ನು ಬರೆಯಿರಿ.**

೧.

೨.

೩.

೪.

೫.

೬.

**ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

**೧. "ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆ"**

ಆಯ್ಕೆ: ಈ ವಾಕ್ಯವನ್ನು ಎಂ.ಎಂ.ಕಲಬುರ್ಗಿ ಅವರು ಸಂಪಾದಿಸಿರುವ 'ಸಮಗ್ರ ವಚನ ಸಂಪುಟ' ಕೃತಿಯಿಂದ ಆರಿಸಲಾದ ಅಲ್ಲಮಪ್ರಭುವಿನ ವಚನದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ: ವಿವಿಧ ಯುಗಗಳ ಕಾಲಘಟ್ಟಗಳಲ್ಲಿ ಗುರುಗಳು ಶಿಷ್ಯರಿಗೆ ಶಿಕ್ಷಣ ನೀಡುತ್ತಿದ್ದ ಬಗೆಯನ್ನು ವರ್ಣಿಸುವ ಸಂದರ್ಭದಲ್ಲಿ ಅಲ್ಲಮಪ್ರಭು ಈ ಮಾತನ್ನು ಹೇಳಿದ್ದಾರೆ. ಕೃತಯುಗದಲ್ಲಿ ಗುರುವು ಶಿಷ್ಯನಿಗೆ ಬಡಿದು, ತ್ರೇತಾಯುಗದಲ್ಲಿ ಬೈದು, ದ್ವಾಪರ ಯುಗದಲ್ಲಿ ಗದರಿಸಿ ಬುದ್ದಿಯನ್ನು ಕಲಿಸಿದರೆ ಆಗ ಅದನ್ನು ಮಹಾ ಪ್ರಸಾದವೆಂದು ಸ್ವೀಕರಿಸಿದನು. ಆದರೆ ಈ ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ವಂದಿಸಿ ಬುದ್ಧಿಯನ್ನು ಕಲಿಸಿದರೆ ಮಾತ್ರ ಅದನ್ನು ಶಿಷ್ಯನು ಮಹಾ ಪ್ರಸಾದವೆಂದು ಸ್ವೀಕರಿಸುತ್ತಾನೆ. ಎಂದು ಅಲ್ಲಮಪ್ರಭು ಅಭಿಪ್ರಾಯಪಟ್ಟಿದ್ದಾರೆ.

ಸ್ವಾರಸ್ಯ: ಕಾಲದಿಂದ ಕಾಲಕ್ಕೆ ಗುರುವಿನ ಬಗ್ಗೆ ಶಿಷ್ಯರಿಗಿರುವ ಗೌರವ ಭಾವನೆ ಕ್ಷೀಣಿಸುತ್ತಿರುವುದು ಮತ್ತು ಶಿಷ್ಯರಲ್ಲಿ ನೈತಿಕ ಮಟ್ಟ ಕುಸಿಯುತ್ತಿರುವುದನ್ನು ಸ್ವಾರಸ್ಯಕರವಾಗಿ ಚಿತ್ರಿಸಿದೆ.

**ಚಟುವಟಿಕೆ–೩. ಮಾದರಿಯಂತೆ ಉತ್ತರ ಬರೆಯಿರಿ.**

| ೧. "ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೨. "ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ಮುಖವ ನೋಡಲಾಗದು"**

ಆಯ್ಕೆ: ಈ ವಾಕ್ಯವನ್ನು ಎಂ.ಎಂ.ಕಲಬುರ್ಗಿ ಅವರು ಅವರು ಸಂಪಾದಿಸಿರುವ ಸಂಪಾದಿಸಿ 'ಸಮಗ್ರ ವಚನ ಸಂಪುಟ' ಕೃತಿಯಿಂದ ಆಯ್ದ, ಅಮುಗೆರಾಯಮ್ಮ ಅವರ ವಚನದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ: ಡಾಂಭಿಕ ಆಚರಣೆ ಮತ್ತು ಹುಟ್ಟುಗುಣವನ್ನು ಬದಲಿಸಲು ಸಾಧ್ಯವಿಲ್ಲ ಎಂದು ತಿಳಿಸುವ ಸಂದರ್ಭದಲ್ಲಿ ಅಮುಗೆ ರಾಯಮ್ಮ ಈ ಮಾತನ್ನು ಹೇಳಿದ್ದಾರೆ. ಕಾಗೆಯ ಮರಿ ಕೋಗಿಲೆ ಆಗಲು, ಆಡಿನ ಮರಿ ಆನೆಯಾಗಲು, ಕಾಡುನಾಯಿ (ಸೀಳು ನಾಯಿ) ಸಿಂಹದ ಮರಿಯಾಗಲು ಸಾಧ್ಯವಿಲ್ಲ. ಅರಿವು, ಸದಾಚಾರ ಹಾಗೂ ಒಳ್ಳೆಯ ವಿವೇಕ ಇಲ್ಲದೆ ಕೇವಲ ನಾಮವನ್ನು ಹಾಕಿಕೊಂಡು ಜ್ಞಾನಿಯಂತೆ ಮೆರೆಯುವವರು ದಡ್ಡರು. ಅಂತಹವರ ಮುಖ ನೋಡಲು ಸಾಧ್ಯವಾಗದು ಎಂದು ರಾಯಮ್ಮ ಹೇಳಿದ್ದಾರೆ.

ಸ್ವಾರಸ್ಯ: ಹುಟ್ಟುಗುಣ ಸುಟ್ಟರೂ ಹೋಗದು ಎಂಬುದನ್ನು ಇಲ್ಲಿ ಸ್ವಾರಸ್ಯಕರವಾಗಿ ಹೇಳಲಾಗಿದೆ.

| ೨. " ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ಮುಖವ ನೋಡಲಾಗದು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೩. "ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು"**

ಆಯ್ಕೆ: ಈ ವಾಕ್ಯವನ್ನು ಎಂ.ಎಂ.ಕಲಬುರ್ಗಿ ಅವರು ಸಂಪಾದಿಸಿರುವ 'ಸಮಗ್ರ ವಚನ ಸಂಪುಟ' ಕೃತಿಯಿಂದ ಆರಿಸಲಾದ, ಆಯ್ದಕ್ಕಿ ಮಾರಯ್ಯ ಅವರ ವಚನದಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ: ಕಾಯಕದ ಮಹತ್ವವನ್ನು ತಿಳಿಸುವ ಸಂದರ್ಭದಲ್ಲಿ ಆಯ್ದಕ್ಕಿ ಮಾರಯ್ಯ ಈ ಮಾತನ್ನು ಹೇಳಿದ್ದಾರೆ. ಕಾಯಕದಲ್ಲಿ ತೊಡಗಿದ್ದಾಗ ಗುರುದರ್ಶನ ಅಥವಾ ಲಿಂಗಪೂಜೆಯನ್ನಾದರೂ ಮರೆಯಬೇಕು. ಜಂಗಮ ಮುಂದೆ ನಿಂತಿದ್ದರೂ ಮೊದಲು ಕಾಯಕಕ್ಕೆ ಮಹತ್ವ ನೀಡಬೇಕು. 'ಕಾಯಕವೇ ಕೈಲಾಸ' ಎಂದು ಭಾವಿಸಿ ದೇವರಿಗಿಂತ ಕಾಯಕಕ್ಕೆ ಮೊದಲ ಪ್ರಾಧಾನ್ಯತೆ ನೀಡಬೇಕೆಂದು ಆಯ್ದಕ್ಕಿ ಮಾರಯ್ಯನು ಕಾಯಕದ ಮಹತ್ವವನ್ನು ತಿಳಿಸಿದ್ದಾನೆ.
ಸ್ವಾರಸ್ಯ: ಕಾಯಕ ಎಂದರೆ ಕೆಲಸ. ಇಲ್ಲಿ ಕೆಲಸವೇ ದೇವರು ಎಂದು ಪ್ರತಿಪಾದಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

| ೩. "ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೪. "ಕಾಯವನೇ ಪ್ರಸಾದ ಕಾಯಕ ಮಾಡಿ ಸಲಹಿದರು"**
ಆಯ್ಕೆ: ಈ ವಾಕ್ಯವನ್ನು ಎಂ.ಎಂ.ಕಲಬುರ್ಗಿ ಅವರು ಸಂಪಾದಿಸಿರುವ 'ಸಮಗ್ರ ವಚನ ಸಂಪುಟ' ಕೃತಿಯಿಂದ ಆರಿಸಲಾದ ಶಿವಶರಣೆ ಲಿಂಗಮ್ಮ ಅವರ ವಚನದಿಂದ ತೆಗೆದುಕೊಳ್ಳಲಾಗಿದೆ.
ಸಂದರ್ಭ: ತಮ್ಮ ಮನವನ್ನು ಗೆದ್ದೆವೆಂದು ಯೋಗಿಯ ಸೋಗು ಹಾಕುವ ಬುದ್ಧಿಹೀನರಿಗೂ ನಿಜವಾಗಿ ತಮ್ಮ ಮನವನ್ನು ಗೆದ್ದ ಜಂಗಮರಿಗೂ ಇರುವ ವ್ಯತ್ಯಾಸವನ್ನು ತಿಳಿಸುವ ಸಂದರ್ಭದಲ್ಲಿ ಶಿವಶರಣೆ ಲಿಂಗಮ್ಮ ಅವರು ಈ ಮಾತನ್ನು ಹೇಳಿದ್ದಾರೆ. ಕೆಲವರು ಕಾಯಕ ಮಾಡದೆ ಕೇವಲ ದೈಹಿಕ ದಂಡನೆ ಮಾಡಿ. ಮನವನ್ನು ಶುದ್ಧಮಾಡಿಕೊಳ್ಳದೆ: ನಿದ್ದಗೆಟ್ಟು ವಿದ್ಯೆ ಕಲಿತಿರುವೆನೆಂದು ಹೇಳಿಕೊಳ್ಳುತ್ತಾರೆ. ಆದರೆ ನಿಜವಾಗಿ ಕಾಯಕವನ್ನೆ ಪ್ರಸಾದವೆಂದು ತಿಳಿದು, ಸುಖವನ್ನು ತೊರೆದು ಜಗತ್ತನ್ನೇ ಗೆದ್ದವರೆಂದರೆ ಶರಣರು ಎಂದು ಶಿವಶರಣೆ ಲಿಂಗಮ್ಮ ಅಭಿಪ್ರಾಯಪಟ್ಟಿದ್ದಾರೆ.
ಸ್ವಾರಸ್ಯ: ದೈಹಿಕ ದಂಡನೆ ಮಾಡಿ ಆರೋಗ್ಯ ವೃದ್ಧಿಸಿಕೊಳ್ಳುವುದರ ಬದಲು ಯಾವುದಾದರೊಂದು ಕಾಯಕ ಮಾಡಿದರೆ ಕೆಲಸದ ಜೊತೆಗೆ ಆರೋಗ್ಯವೂ ವೃದ್ಧಿಯಾಗುತ್ತದೆ ಎಂಬ ವಿಚಾರ ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

| ೪. " ಕಾಯವನೇ ಪ್ರಸಾದ ಕಾಯಕ ಮಾಡಿ ಸಲಹಿದರು" | |
|---|---|
| **ಆಯ್ಕೆ** | |
| **ಸಂದರ್ಭ** | |
| **ಸ್ವಾರಸ್ಯ** | |

**ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರ ಪದವನ್ನು ಆರಿಸಿ ಖಾಲಿಯಿರುವ ಜಾಗದಲ್ಲಿ ಬರೆಯಿರಿ.**

೧. ತ್ರೇತಾಯುಗದಲ್ಲಿ ಶ್ರೀಗುರುವು ಶಿಷ್ಯನಿಗೆ ಬುದ್ದಿಯನ್ನು ಹೀಗೆ ಕಲಿಸುತ್ತಿದ್ದರು. ----------------------------

ಅ)ಬಡಿದು ಆ)ಬೈದು ಇ)ವಂದಿಸಿ ಈ)ಝುಂಕಿಸಿ

೨. ಆಯ್ದಕ್ಕಿ ಮಾರಯ್ಯನ ಅಂಕಿತನಾಮವಿದು. ----------------------------

ಅ)ಗುಹೇಶ್ವರ ಆ)ಅಮುಗೇಶ್ವರ ಇ)ಅಮರೇಶ್ವರಲಿಂಗ ಈ)ಅಪ್ಪಣ್ಣಪ್ರಿಯ.

೩. ‘ಕೋಗಿಲೆ’ ಪದದ ತದ್ಭವ ರೂಪ. ----------------------------

ಅ) ಕೋಕಿಲ ಆ)ಸಂಕಿಲಾ ಇ)ಕೋಕಿಲೆ ಈ)ಕೊಕಿಲಾ

೪. ‘ಜಂಗಮ’ ಪದದ ವಿರುದ್ಧಾರ್ಥಕ ಪದ ----------------------------

ಅ)ವಿರಕ್ತಿ ಆ)ವಿದ್ವಾಂಸ ಇ)ಗುರು ಈ)ಸ್ಥಾವರ

೫. "ತನುವ ಕರಗಿಸಿ ಕಾಯ ಮರುಗಿಸಿ ವಿದ್ಯೆಯನ್ನು ಕಲಿತಿಹೆ" ಎನ್ನುವವರು. ----------------------------

ಅ)ಶಿವಶರಣರು ಆ)ಬುದ್ಧಿಹೀನರು ಇ)ಸಾಮಾನ್ಯರು ಈ)ವಿದ್ಯಾರ್ಥಿಗಳು

**ಚಟುವಟಿಕೆ–೪. ಮಾದರಿಯಂತೆ ಉತ್ತರಗಳನ್ನು ಪುನಃ ಬರೆಯಿರಿ.**

೧.

೨.

೩.

೪.

೫.

**ಗುಂಪಿಗೆ ಸೇರದ ಪದಗಳನ್ನು ಆಯ್ದು ಕೊಟ್ಟಿರುವ ಖಾಲಿ ಜಾಗದಲ್ಲಿ ಬರೆಯಿರಿ.**

೧. ಆನೆ, ಗಜ, ಹಯ, ಕರಿ. ----------------------------

೨. ಬಸವಣ್ಣ, ಕನಕದಾಸರು, ಅಲ್ಲಮಪ್ರಭು, ಅಮುಗೆರಾಯಮ್ಮ. ----------------------------

೩. ಕಾಮ, ಕ್ರೋಧ, ಧನ, ಲೋಭ. ----------------------------

೪. ದ್ವಾಪರಯುಗ, ಕೃತಯುಗ, ಸುವರ್ಣಯುಗ, ಕಲಿಯುಗ. ----------------------------

೫. ತನು, ದೇಹ, ಮಾಯ, ಕಾಯ. ----------------------------

**ಚಟುವಟಿಕೆ–೫. ಈ ಮೇಲಿನ ಉತ್ತರಗಳನ್ನು ಬರೆದು ರೂಢಿಸಿಕೊಳ್ಳಿರಿ.**

೧.

೨.

೩.

೪.

೫.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ.**

ಕಾಯಕದಲ್ಲಿ ನಿರತನಾದೊಡೆ

___________________________

__________________________

__________________________

__________________________

ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

ಕಾಗೆಯಮರಿ ಕೋಗಿಲೆಯಾಗಬಲ್ಲುದೆ?

__________________________

__________________________

__________________________

ಮುಖವ ನೋಡಲಾಗದು ಅಮುಗೇಶ್ವರಾ.

## ಪಠ್ಯ ಪೂರಕ ಅಧ್ಯಯನ-೩. ಸೀಮೆ



–ಚಂದ್ರಶೇಖರ ಕಂಬಾರ

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಮುದುಕಿಯನ್ನು ಭೇಟಿಯಾದ ವ್ಯಕ್ತಿ ಯಾರು?

ಮುದುಕಿಯನ್ನು ಭೇಟಿಯಾದ ವ್ಯಕ್ತಿ ತಿಮ್ಮರಾಯ.

೨. ತಿಮ್ಮರಾಯನಿಗೆ ಮುದುಕಿಯು ವಿಧಿಸಿದ ಸೀಮೆಗಳನ್ನು ತಿಳಿಸಿ.

ಹಣ್ಣಿನ ಮರ ಕಡಿಯಲೇ ಬೇಡ. ನೀರಿನ ಮರಕ್ಕೆ ಒಂದಕ್ಕಿಂತ ಹೆಚ್ಚಿಗೆ ಏಟು ಹಾಕಲೇಬೇಡ. ಮೂರನೇ ಹಾಲಿನ ಮರಕ್ಕೆ ಒಂದಕ್ಕಿಂತ ಹೆಚ್ಚು ಏಟು ಹಾಕಿದರೆ ನನ್ನ ನಾಯಿ ಬೊಗಳುತ್ತದೆ. ಆಗ ನನಗೆ ಕೋಪ ಬರುತ್ತದೆ. ಇದಿಷ್ಟು ನಿನ್ನ ಸೀಮೆ ಎಂದು ಮುದುಕಿ ಸೀಮೆಯನ್ನು ವಿಧಿಸಿದಳು.

೩. ಶಿವಪುರದಲ್ಲಿನ ಮುದುಕ ಹೇಗೆ ಚಿಂತಿಸುತ್ತಿದ್ದರು?

ಆಕಾಶ ತನ್ನ ತಲೆಮೇಲೇ ಹರಿದು ಬೀಳುತ್ತದೆ ಎಂಬಂತೆ ಶಿವಪುರದಲ್ಲಿನ ಮುದುಕ ಚಿಂತಿಸುತ್ತಿದ್ದರು.

೪. ಮುದುಕನು ಹೇಳುವಂತೆ ಕಥೆಯ ನಿಜ ಸಂಗತಿ ಯಾವುದು?

ಪರಿಸರದ ಜೀವನಾಡಿ ಮರಗಳಾಗಿವೆ. ಅತಿಯಾಸೆ ಸ್ವಾರ್ಥಗಳಿಂದ ಮನುಷ್ಯ ಮರಗಳನ್ನು ಕಡಿಯುತ್ತಿರುವುದು ವಿಪರ್ಯಾಸ. 'ಹಸಿರೇ ಉಸಿರು' ಎನ್ನುವುದು ತಿಳಿದಿದ್ದರೂ ಸಕಲ ಜೀವಿಗಳಿಗೆ ಅಗತ್ಯವಾದ ಮರಗಳನ್ನು ಕಡಿಯುತ್ತಿರುವುದು ವಿಪರ್ಯಾಸ.

**೫. ಆಸೆ ಮಿತಿಮೀರಿ ತಿಮ್ಮರಾಯ ಮಾಡಿದ್ದೇನು?**

ಅವಿವೇಕದಿಂದ ಮನುಷ್ಯ ಮರಗಳನ್ನು ಕಡಿಯುತ್ತಾ ಆತ್ಮಹತ್ಯೆಯ ಹಾದಿಯತ್ತ ಸಾಗುತ್ತಿರುವುದು ಕಥೆಯ ನಿಜ ಸಂಗತಿ. ಆಸೆ ಮಿತಿಮೀರಿ ನಾಯಿ ಬೊಗಳಿದರೂ ಕ್ಯಾರೇ ಮಾಡದ ಸ್ಥಿತಿಗೆ ಬಂದ. ಹಾಲಿನ ಮರಕ್ಕೆ ಮತ್ತೆ ಮತ್ತೆ ಎರಡನೇ, ಹಲವೇಟು ಹಾಕಿ ಪಟ್ಟಣಕ್ಕೊಯ್ದು ಹಾಲು ಹಣ್ಣು ಮಾರತೊಡಗಿದ. ಮುದುಕಿ ಕೋಪ ಮಾಡಿಕೊಂಡರೆ ಮತ್ತೆ ಏಟು ಹಾಕುತ್ತಿದ್ದ. ಒಂದು ದಿನ ಹಾಲು ಸಾಲದೆ ಮುದುಕಿಯ ಎದುರಿನಲ್ಲೇ ಹಾಲಿನ ಮರಕ್ಕೆ ನೂರೇಟು ಹಾಕಿದ.

ಚಟುವಟಿಕೆ–೧. ಮಾದರಿಯಂತೆ ಉತ್ತರ ಬರೆಯಿರಿ.

೧.

೨.

೩.

೪.

೫.

## ಗದ್ಯ ಭಾಗ-೮. ಸಪ್ತಾಕ್ಷರಿ ಮಂತ್ರ

–ಮುದ್ದಣ (ನಂದಳಿಕೆ ಲಕ್ಷ್ಮೀನಾರಾಯಣ)



**ಮುದ್ದಣ**–ಲಕ್ಷ್ಮೀನಾರಾಯಣಪ್ಪ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ನಂದಳಿಕೆಯಲ್ಲಿ ೧೮೭೦ ಜನವರಿ ೨೪ ರಂದು ಜನಿಸಿದರು. ತಂದೆ ತಿಮ್ಮಪ್ಪಯ್ಯ ಮತ್ತು ತಾಯಿ ಮಹಾಲಕ್ಷಮ್ಮ. ಈತನನ್ನು ತಾಯಿ 'ಮುದ್ದಣ' ಎಂದು ಮುದ್ದಿನಿಂದ ಕರೆಯುತ್ತಿದ್ದಳು. ಹಾಗಾಗಿ ಕನ್ನಡನಾಡು ಈತನನ್ನು 'ಮುದ್ದಣ' ಎಂದೇ ಕರೆಯಿತು. ಈತನ ಪ್ರಮುಖ ಕೃತಿಗಳೆಂದರೆ; 'ರತ್ನಾವತಿಕಲ್ಯಾಣ' ಮತ್ತು 'ಕುಮಾರವಿಜಯ' (ಯಕ್ಷಗಾನ ಪ್ರಸಂಗಗಳು), ವಾರ್ಧಕ ಷಟ್ಪದಿಯಲ್ಲಿ ರಚಿಸಲ್ಪಟ್ಟ 'ಶ್ರೀರಾಮಪಟ್ಟಾಭಿಷೇಕಂ' ಕಾವ್ಯ, ಹಳಗನ್ನಡ ಶೈಲಿಯಲ್ಲಿ ಬರೆಯಲ್ಪಟ್ಟ 'ಅದ್ಭುತರಾಮಾಯಣ' ಮತ್ತು 'ಶ್ರೀರಾಮಾಶ್ವಮೇಧಂ' ಗದ್ಯಕಾವ್ಯಗ ಮುದ್ದಣನಿಂದ ರಚಿತವಾದುವು. 'ಹೊಸಗನ್ನಡದ ಅರುಣೋದಯದ ಮುಂಗೋಳಿ' ಎಂಬ ಪ್ರಶಂಸೆಗೆ ಭಾಜನನಾಗಿದ್ದಾನೆ. ಅವರು ೧೯೦೧ರ ಫೆಬ್ರವರಿ ೧೫ ರಂದು ಇಹಲೋಕ ತ್ಯಜಿಸಿದರು.

ಪ್ರಸ್ತುತ ಗದ್ಯಭಾಗವನ್ನು 'ಸಪ್ತಾಕ್ಷರಿ ಮಂತ್ರ' ಗದ್ಯಭಾಗವನ್ನು ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ, 'ಮುದ್ದಣ ಭಂಡಾರ' ಕೃತಿಯಿದ ಆರಿಸಿಕೊಳ್ಳಲಾಗಿದೆ.

ಚಟುವಟಿಕೆ–೧. ಮಾದರಿಯಂತೆ ಲೇಖಕರ ಪರಿಚಯವನ್ನು ಮತ್ತೊಮ್ಮೆ ಬರೆಯಿರಿ.

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ರಾಘವನ ಯಜ್ಞಾಶ್ವ ಯಾರ ಆಶ್ರಮವನ್ನು ಹೊಕ್ಕಿತು?

ಉತ್ತರ: ರಾಘವನ ಯಜ್ಞಾಶ್ವ ಅರಣ್ಯಕ ಮುನಿಯ ಆಶ್ರಮವನ್ನು ಹೊಕ್ಕಿತು.

೨. ಮನೋರಮೆಯಲ್ಲಿ ಮೂಡಿದ ಸಂದೇಹವೇನು?

ಉತ್ತರ: 'ಸಾವಿರ ಸಾವಿರ ಸಂಖ್ಯೆಯಲ್ಲಿದ್ದ ಸೈನಿಕರಿಗೆ ಭೋಜನವನ್ನು ನೀಡಲು ಅರಣ್ಯಕ ಮುನಿಗೆ ಹೇಗೆ ಸಾಧ್ಯವಾಯಿತು' ಎಂದು ಮನೋರಮೆಗೆ ಸಂದೇಹ ಮೂಡಿತು.

೩. ಮುನಿಗಳಲ್ಲಿರುವ ಮಂತ್ರದ ಶಕ್ತಿ ಯಾವುದು?

ಉತ್ತರ: ಬೇಡಿದ ವಸ್ತುವನ್ನು ನೀಡುವ ಮಂತ್ರದ ಶಕ್ತಿ ಮುನಿಗಳಲ್ಲಿದೆ.

೪. ತಪಸ್ವಿಗಳಿಗೆ ಬೇರೆ ಗೊಡವೆ ಇಲ್ಲದಿರಲು ಕಾರಣವೇನು?

ಉತ್ತರ: ಬೇಡಿದ ವಸ್ತುವನ್ನು ನೀಡುವ ಮಂತ್ರದ ಶಕ್ತಿ ಇರುವುದರಿಂದ ತಪಸ್ವಿಗಳಿಗೆ ಬೇರೆ ಗೊಡವೆ ಇಲ್ಲ.

೫. ಮುದ್ದಣನಿಗೆ ಸಿದ್ದಿಸಿದ ಮಂತ್ರದ ಹೆಸರೇನು?

ಉತ್ತರ: ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರು 'ಭವತಿ ಭಿಕ್ಷಾಂದೇಹಿ'.

ಚಟುವಟಿಕೆ–೨. ಮಾದರಿಯಂತೆ ಉತ್ತರ ಬರೆಯಿರಿ.

೧.

೨.

೩.

೪

೫.

ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

**೧. "ಎನಗಿದಚ್ಚರಿ ಎಂತುಟಾರ್ತಂ"**

ಆಯ್ಕೆ: ಈ ವಾಕ್ಯವನ್ನು ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ 'ಮುದ್ದಣ ಭಂಡಾರ' ಕೃತಿಯಿಂದ ಆರಿಸಲಾದ 'ಸಪ್ತಾಕ್ಷರಿ ಮಂತ್ರ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:– ಮುದ್ದಣನು ಮನೋರಮೆಗೆ ರಾಮಾಶ್ವಮೇಧದ ಕಥೆ ಹೇಳುತ್ತಾ ಯಜ್ಞದ ಕುದುರೆ ಅರಣ್ಯಕ ಮುನಿಗಳ ಆಶ್ರಮವನ್ನು ಪ್ರವೇಶಿಸಿದಾಗ ಶತ್ರುಘ್ನ ಮೊದಲಾದವರನ್ನು ಮುನಿಗಳು ಸತ್ಕರಿಸಿದ ಬಗೆಯನ್ನು ವರ್ಣಿಸಿದ ಸಂದರ್ಭದಲ್ಲಿ ಮನೋರಮೆ ಈ ಮಾತನ್ನು ಹೇಳುತ್ತಾಳೆ. ಆಶ್ರಮವಾಸಿಗಳಾಗಿದ್ದುಕೊಂಡು ಸಾವಿರಾರು ಜನರಿಗೆ ಸತ್ಕರಿಸಲು ಹೇಗೆ ಸಾಧ್ಯವಾಯಿತು? ಎಂದು ಅಚ್ಚರಿಗೊಂಡು ಅವಳು ಹೀಗೆ ಕೇಳುತ್ತಾಳೆ.

ಸ್ವಾರಸ್ಯ: ಮುನಿಯಾದವರು ಸಾವಿರಾರು ಜನರಿಗೆ ಸತ್ಕಾರ ಮಾಡಿದ ಪ್ರಂಸಗವನ್ನು ಕೇಳಿ ಮನೋರಮೆ ಅಚ್ಚರಿ ಪಟ್ಟಿರುವುದು ಇಲ್ಲಿ ಸ್ವಾರಸ್ಯವಾಗಿದೆ.

ಚಟುವಟಿಕೆ–೩. ಮಾದರಿಯಂತೆ ಉತ್ತರ ಬರೆಯಿರಿ.

| ೧. "ಎನಗಿದಚ್ಚರಿ ಎಂತುಟಾರ್ತಂ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೨. "ಅಪ್ಪುದಪ್ಪುದು ತಪ್ಪೇಂ"**

ಆಯ್ಕೆ: ಈ ವಾಕ್ಯವನ್ನು ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ 'ಮುದ್ದಣ ಭಂಡಾರ' ಕೃತಿಯಿಂದ ಆರಿಸಲಾದ 'ಸಪ್ತಾಕ್ಷರಿ ಮಂತ್ರ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:ಸಾವಿರಾರು ಜನರಿಗೆ ಸತ್ಕಾರ ಮಾಡಲು ಅರಣ್ಯಕ ಮುನಿಗೆ ಹೇಗೆ ಸಾಧ್ಯವಾಯಿತು ಎಂದು ಮನೋರಮೆ ಮುದ್ದಣನನ್ನು ಕೇಳಿದಾಗ ಮುನಿಗಳಿಗೆ ಹಲವಾರು ಮಂತ್ರಗಳ ಶಕ್ತಿ ಇದೆ ಎಂದು ಮುದ್ದಣ ಹೇಳುತ್ತಾನೆ. ಆಗ ಮನೋರಮೆ "ಓಹೋ ಆದ್ದರಿಂದಲೇ ತಪಸ್ವಿಗಳಿಗೆ ಯಾವುದೇ ಚಿಂತ ಇಲ್ಲ" ಎಂದು ಹೇಳಿದ ಸಂದರ್ಭದಲ್ಲಿ ಮುದ್ದಣನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: ಮುನಿಯಾದವರಿಗೆ ಮಂತ್ರಗಳ ಶಕ್ತಿ ಇರುವುದರಲ್ಲಿ ತಪ್ಪೇನಿದೆ? ಎಂದು ಮುದ್ದಣ ಸಮರ್ಥಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

| ೨. "ಅಪ್ಪುದಪ್ಪುದು ತಪ್ಪೇಂ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೩. "ಎಮ್ಮವರೊಂದಿರಕೆ ನಗುವ?"**

ಆಯ್ಕೆ: ಈ ವಾಕ್ಯವನ್ನು ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ 'ಮುದ್ದಣ ಭಂಡಾರ' ಕೃತಿಯಿಂದ ಆರಿಸಲಾದ 'ಸಪ್ತಾಕ್ಷರಿ ಮಂತ್ರ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಅರಣ್ಯಕ ಮುನಿಗಳು ತಮಗಿರುವ ಮಂತ್ರ ಶಕ್ತಿಯಿಂದ ಅತಿಥಿಗಳಿಗೆ ಸತ್ಕಾರ ಮಾಡಲು ಸಾಧ್ಯವಾಯಿತು ಎಂದು ಹೇಳಿದಾಗ ಮನೋರಮೆಯು 'ತಪಸ್ವಿಗಳಿಗೇನು ಸಂಸಾರದ ಚಿಂತೆಯೇ? ನಿಮ್ಮಂತಹ ಕವಿಗಳು ಸಂಸಾರದ ಗೊಡವೆ ಇಲ್ಲದೆ ಹಾಳು ಕಥೆ ಬರೆದುಕೊಂಡಿರುವಿರಿ. ನೀವೂ ಕೂಡ ಹಿರಿಯ ಮುನಿಗಳಿಂದ ಮಂತ್ರಶಕ್ತಿಯ ಉಪದೇಶ ಪಡೆದುಕೊಂಡರಾಗದೆ?' ಎಂದು ಛೇಡಿಸಿದ ಸಂದರ್ಭದಲ್ಲಿ ಮುದ್ದಣನು ಈ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ: ಹಿಂದೆ ಕವಿ–ಸಾಹಿತಿಗಳು ಸಾಹಿತ್ಯರಚನೆಯಲ್ಲಿ ಮುಳುಗಿದ್ದು ಬಡತನದಿಂದ ಸಂಸಾರವನ್ನು ನಡೆಸುತ್ತಿದ್ದ ಬಗೆಯನ್ನು ಇಲ್ಲಿ ಸ್ವಾರಸ್ಯಕರವಾಗಿ ಚಿತ್ರಿಸಲಾಗಿದೆ.

| ೩. "ಎಮ್ಮವರೊಂದಿರಕೆ ನಗುವ?" | |
|---|---|
| **ಆಯ್ಕೆ** | |
| **ಸಂದರ್ಭ** | |
| **ಸ್ವಾರಸ್ಯ** | |

೪. " ಸಾಲ್ಗುಮೀ ಪರಿಹಾಸಂ "

ಆಯ್ಕೆ: ಈ ವಾಕ್ಯವನ್ನು ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ 'ಮುದ್ದಣ ಭಂಡಾರ' ಕೃತಿಯಿಂದ ಆರಿಸಲಾದ 'ಸಪ್ತಾಕ್ಷರಿ ಮಂತ್ರ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಮುದ್ದಣನು ತನೆಗೆ ಒಲಿದಿರುವ ಮಂತ್ರ 'ಭವತೀ ಭಿಕ್ಷಾಂದೇಹಿ' ಎಂದು ಹೇಳಿದಾಗ ಮನೋರಮೆ ಹುಸಿಮುನಿಸಿನಿಂದ ನಿನ್ನ ಮಾತನ ನಿಜವೆಂದೇ ನಂಬಿದೆ. ನೀನೇನು ಕವಿಯೋ ಹಾಸ್ಯಗಾರನೋ ಎಂದು ಹೇಳತ್ತಾಳೆ. ಆ ಸಂದರ್ಭದಲ್ಲಿ ಮುದ್ದಣನು ಈ ಹಾಸ್ಯ ಇಲ್ಲಿಗೇ ಸಾಕು. ಮುಂದಿನ ಕಥೆಯನ್ನು ಕೇಳು ಎಂದು ಕಥೆ ಮುಂದುವರೆಸುತ್ತಾನೆ.

ಸ್ವಾರಸ್ಯ: ಇಲ್ಲಿ ಮುದ್ದಣನ ಹಾಸ್ಯ ಪ್ರಜ್ಞೆ, ಮುದ್ದಣ ಮತ್ತು ಆತನ ಪತ್ನಿಯ ನಡುವಿನ ಸರಸ–ಸಲ್ಲಾಪಗಳು ಸ್ವಾರಸ್ಯಕರವಾಗಿ ಮೂಡಿ ಬಂದಿದೆ.

| ೪. " ಸಾಲ್ಗುಮೀ ಪರಿಹಾಸಂ" | |
|---|---|
| **ಆಯ್ಕೆ** | |
| **ಸಂದರ್ಭ** | |
| **ಸ್ವಾರಸ್ಯ** | |

**ಚಟುವಟಿಕೆ-೪. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ಮೃಷ್ಟಾನ್ನ : ಸವರ್ಣದೀರ್ಘ ಸಂಧಿ :: ಒಡನಿರ್ದು : ಲೋಪಸಂಧಿ

೨. ಕಾವ್ಯ : ಕಬ್ಬ : ಆಶ್ಚರ್ಯ : ಅಚ್ಚರಿ

೩. ಮನ್ನಿಸಿ : ಗೌರವಿಸಿ :: ಬಾವನ್ನ : ಸುಗಂಧ (ಶ್ರೀಗಂಧ)

೪. ಕುವೆಂಪು : ಕುಪ್ಪಳಿ :: ಮುದ್ದಣ : ನಂದಳಿಕೆ

೧.

೨.

೩.

೪.

**ಕೊಟ್ಟಿರುವ ಸಮಾಸ ಪದಗಳನ್ನು ವಿಗ್ರಹಿಸಿ, ಸಮಾಸವನ್ನು ಹೆಸರಿಸಿ.**

ಚಳಿಗಾಲ = ಚಳಿಯಾದ + ಕಾಲ. ಕರ್ಮಧಾರಯ ಸಮಾಸ

ಯಜ್ಞತುರಂಗ = ಯಜ್ಞದ + ತುರಗ. ತತ್ಪುರುಷ ಸಮಾಸ

ಬಾಯುಪಚಾರ = ಬಾಯಿಯಿಂದ+ಉಪಚಾರ ತತ್ಪುರುಷ ಸಮಾಸ

ಸವಿಗೂಳು= ಸವಿಯಾದ + ಕೂಳು- ಕರ್ಮಧಾರಯ ಸಮಾಸ

ಮೃಷ್ಟಾನ್ನ= ಮೃಷ್ಟವಾದ + ಅನ್ನ- ಕರ್ಮಧಾರಯ ಸಮಾಸ

**ಚಟುವಟಿಕೆ-೫.ಮಾದರಿಯಂತೆ ಕೆಲವು ಸಮಾಸ ಪದಗಳನ್ನು ಗುರುತಿಸಿ ಬರೆಯಿರಿ.**

## ಪದ್ಯ ಭಾಗ-೮. ರಾಮಧಾನ್ಯ ಚರಿತೆ



– **ಕನಕದಾಸರು.**

ಇವರ ಮೊದಲ ಹೆಸರು ತಿಮ್ಮಪ್ಪನಾಯಕ. ಇವರು ಸಾ.ಶ. ೧೫೦೮ ರಲ್ಲಿ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಬೀರಪ್ಪ ಹಾಗೂ ತಾಯಿ ಬಚ್ಚಮ್ಮ. ಇವರ ಆರಾಧ್ಯ ದೈವ ಹಾಗೂ ಅಂಕಿತನಾಮ ಕಾಗಿನೆಲೆ ಆದಿಕೇಶವ. ಇವರು ರಚಿಸಿರುವ ಕೃತಿಗಳು: ಹರಿಭಕ್ತಿಸಾರ, ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ನಳಚರಿತ್ರೆ. ಇವಲ್ಲದೆ ನೂರಾರು ಕೀರ್ತನೆಗಳು, ಉಗಾಭೋಗ, ಸುಳಾದಿಗಳು ಮತ್ತು ಮಂಡಿಗೆಗಳನ್ನು ರಚಿಸಿದ್ದಾರೆ. ಪ್ರಸ್ತುತ ಪದ್ಯವನ್ನು ಡಾ. ಸಾ.ಶಿ.ಮರುಳಯ್ಯ ಅವರು ಸಂಪಾದಿಸಿರುವ ಕನಕದಾಸರ ಕಾವ್ಯಭಾಗ-೧ ಕೃತಿಯಿಂದ ಆಯ್ಕೆಮಾಡಿಕೊಳ್ಳಲಾಗಿದೆ.

ಚಟುವಟಿಕೆ-೧. ಮಾದರಿಯಂತೆ ಉತ್ತರ ಬರೆಯಿರಿ.

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ದೇಶಕೆ ಅತಿಶಯವಾದ ಧಾನ್ಯ ಯಾವುದು?

ಉತ್ತರ: ದೇಶಕೆ ಅತಿಶಯವಾದ ಧಾನ್ಯ 'ರಾಗಿ' (ನರೆದಲೆಗ).

೨. ವ್ರಿಹಿ ಯಾರ ಬಾಯಿಗೆ ತುತ್ತು ಎಂದು ಹೇಳಿದೆ?

ಉತ್ತರ: ವ್ರಿಹಿ ಹೆಣದ ಬಾಯಿಗೆ ತುತ್ತು ಎಂದು ಹೇಳಿದೆ.

೩. ದಾಶರಥಿ ಎಂದರೆ ಯಾರು?

ಉತ್ತರ: ದಾಶರಥಿ ಎಂದರೆ ಶ್ರೀರಾಮ.

೪. ನರೆದಲೆಗೆ ಯಾರನ್ನು ಆದರಿಸಿ ಸಲಹುತ್ತದೆ?

ಉತ್ತರ: ನರೆದಲೆಗ ಬರಗಾಲದಲ್ಲಿ ಆಹಾರವಿಲ್ಲದೆ ಸಾಯುವ ಪ್ರಾಣಿಗಳನ್ನು ಆದರಿಸಿ ಸಲಹುತ್ತದೆ.

೫. ಹರಿಹರ ವಿರಂಚಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ?

ಉತ್ತರ: ನರೆದಲೆಗ (ರಾಗಿ) ಮತ್ತು ವ್ರಿಹಿ (ಭತ್ತ) ಇವುಗಳಲ್ಲಿ ಯಾರು ಶ್ರೇಷ್ಠ ಎಂಬ ವಿವಾದವನ್ನು ಬಗೆಹರಿಸಲು ಹರಿಹರ ವಿರಂಚಿಗಳನ್ನು ಅಯೋಧ್ಯೆಗೆ ಕರೆಸಲಾಗುತ್ತದೆ.

೬. ಸೆರೆಗೆ ಯಾರು ಯಾರನ್ನು ಹಾಕಲಾಗುತ್ತದೆ?

ಉತ್ತರ: ಸೆರೆಗೆ ನರೆದಲೆಗ ಮತ್ತು ವ್ರಿಹಿಯನ್ನು ಹಾಕಲಾಗುತ್ತದೆ.

**ಚಟುವಟಿಕೆ-೨. ಮಾದರಿಯಂತೆ ಉತ್ತರವನ್ನು ಪ್ರಶ್ನೆಗಳ ಸಂಖ್ಯೆಯ ಮುಂದೆ ಬರೆಯಿರಿ.**

೧.

೨.

೩.

೪

೫.

೬.

ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

**೧. "ನಮ್ಮಯ ದೇಶಕತಿಶಯ ನರೆದಲೆಗ"**

ಆಯ್ಕೆ: ಈ ವಾಕ್ಯವನ್ನು ಕನಕದಾಸರು ಬರೆದಿರುವ 'ರಾಮಧಾನ್ಯ ಚರಿತೆ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ರಾಮಧಾನ್ಯ ಚರಿತೆ' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಗೌತಮ ಮುನಿಗಳು ಶ್ರೀರಾಮನಿಗೆ ಹೇಳುತ್ತಾರೆ. "ನಮ್ಮ ದೇಶದಲ್ಲಿ ಶ್ರೇಷ್ಠವೆಂದರೆ ರಾಗಿಯೇ ಸರಿ. ಇವನು ಶಕ್ತಿ (ಸತ್ವ) ಹೊಂದಿರುವವನು. ಉಳಿದ ಧಾನ್ಯಗಳೇಕೆ?" ಎನ್ನುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ: ಸತ್ವಯುತವಾದದ್ದು ರಾಗಿ ಹಾಗೂ ರಾಗಿಯನ್ನೇ ಪ್ರಧಾನ ಆಹಾರವಾಗಿ ಬಳಸುವ ಶ್ರಮಿಕವರ್ಗ ಎಂಬುದನ್ನು ಇಲ್ಲಿ ಕನಕದಾಸರು ಸ್ವಾರಸ್ಯಪೂರ್ಣವಾಗಿ ಪ್ರತಿಪಾದಿಸಿದ್ದಾರೆ.

ಚಟುವಟಿಕೆ–೩. ಮಾದರಿಯಂತೆ ಉತ್ತರ ಬರೆಯಿರಿ.

| ೧. "ನಮ್ಮಯ ದೇಶಕತಿಶಯ ನರೆದಲೆಗ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೨. "ಕುಲಹೀನ ನೀನು ಪ್ರತಿಷ್ಠ ಸುಡು ಮತಿಹೀನ ನೀನು"**

ಆಯ್ಕೆ: ಈ ವಾಕ್ಯವನ್ನು ಕನಕದಾಸರು ಬರೆದಿರುವ 'ರಾಮಧಾನ್ಯ ಚರಿತೆ' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ವ್ರಿಹಿಗನು ನರೆದಲೆಗನಿಗೆ ಹೇಳುತ್ತಾನೆ. ಗೌತಮರು ರಾಗಿ (ನರೆದಲೆಗ) ಶ್ರೇಷ್ಠ ಎಂಬ ಮಾತನ್ನು ಕೇಳಿ ಕೋಪಗೊಂಡ ವ್ರಿಹಿಗ ನರೆದಲೆಗನಿಗೆ "ಭಗವಂತನೇ ನಮ್ಮಿಬ್ಬರಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎಂಬುದನ್ನು ಬಲ್ಲನು. ಜಾನಕಿಯ ಪತಿಯಾದ ಶ್ರೀ ರಾಮನ ಸನಿಹದಲ್ಲಿ ನೀನು ಕುಲಹೀನ, ಅಹಂಕಾರಿ, ಬುದ್ಧಿಗೇಡಿ" ಎಂದು ಈ ಸಂದರ್ಭದಲ್ಲಿ ಹೀಯಾಳಿಸುತ್ತದೆ.

ಸ್ವಾರಸ್ಯ: ಕೆಳವರ್ಗದ ಮೇಲೆ ಮೇಲ್ವರ್ಗದ ಶೋಷಣೆ ಈ ಮಾತಿನಲ್ಲಿ ವ್ಯಕ್ತವಾಗಿರುವುದು ಸ್ವಾರಸ್ಯವಾಗಿದೆ.

| "ಕುಲಹೀನ ನೀನು ಪ್ರತಿಷ್ಠ ಸುಡು ಮತಿಹೀನ ನೀನು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೩. "ವಿಲಯಕಾಲದೊಳನ್ನವಿಲ್ಲದೆ ಅಳಿದ ಪ್ರಾಣಿಗಳಾಧರಿಸಿ ಸಲಹುವೆ"**

ಆಯ್ಕೆ: ಈ ವಾಕ್ಯವನ್ನು ಕನಕದಾಸರು ಬರೆದಿರುವ 'ರಾಮಧಾನ್ಯ ಚರಿತೆ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ರಾಮಧಾನ್ಯ ಚರಿತೆ' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ವಿಹಿಗನು ನರೆದಲೆಗನನ್ನು ಹೀಯಾಳಿಸಿದಾಗ ನರೆದಲೆಗನು ವಿಹಿಯನ್ನು ಕುರಿತು ಈ ಮಾತನ್ನು ಹೇಳುತ್ತದೆ. "ಈ ಜಗತ್ತಿಗೆಲ್ಲ ತಿಳಿದಿರುವಂತೆ ಮಳೆ ಹೋಗಿ, ಬೆಳೆ ಇಲ್ಲದಂತಾಗಿ, ಘೋರ ಬರಗಾಲದಲ್ಲಿ ಅನ್ನವಿಲ್ಲದೆ ನಾಶವಾಗುವ ಪ್ರಾಣಿಗಳನ್ನು ನಾನು ಆದರಿಸಿ ಕಾಪಾಡುತ್ತೇನೆ. ಎಲವೋ ಆಗ ನೀನೆಲ್ಲಿರುವೆಯೋ ನಿನ್ನ ಬಳಗ ಎಲ್ಲಿರುವುದೋ" ಎಂದು ಈ ಸಂದರ್ಭದಲ್ಲಿ ಹೇಳುತ್ತದೆ.

ಸ್ವಾರಸ್ಯ: ಬರಗಾಲದಲ್ಲಿ ಎಲ್ಲರನ್ನು ಸಂರಕ್ಷಿಸುವ ರಾಗಿಯ ಮಹತ್ವವನ್ನು ಇಲ್ಲಿ ಸ್ವಾರಸ್ಯಕರವಾಗಿ ಬಣ್ಣಿಸಿದೆ.

| ೩. "ವಿಲಯಕಾಲದೊಳನ್ನವಿಲ್ಲದೆ ಅಳಿದ ಪ್ರಾಣಿಗಳಾಧರಿಸಿ ಸಲಹುವೆ" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

**೪. "ಇವರಿರಲಿ ಸೆರೆಯೊಳಗಾರು ತಿಂಗಳು"**

ಆಯ್ಕೆ: ಈ ವಾಕ್ಯವನ್ನು ಕನಕದಾಸರು ಬರೆದಿರುವ 'ರಾಮಧಾನ್ಯ ಚರಿತೆ' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ರಾಮಧಾನ್ಯ ಚರಿತೆ' ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಈ ಮಾತನ್ನು ಶ್ರೀರಾಮನು ಬ್ರಹಿಗ ಮತ್ತು ನರೆದಲೆಗನ ವಿವಾದವನ್ನು ಬಗೆಹರಿಸುವ ಬಗ್ಗೆ ಸಭೆಯನ್ನು ಕುರಿತು ಈ ಮಾತನ್ನು ಹೇಳುತ್ತಾನೆ. ರಾಗಿ ಮತ್ತು ಭತ್ತ ಇವೆರಡರ ವಾದವಿವಾದಗಳನ್ನು ಆಲಿಸಿದ ರಾಮನು ಅವರಿಬ್ಬರ ಸತ್ವ ತಿಳಿಯಬೇಕಾದರೆ ಆರುತಿಂಗಳು ಸೆರೆಗೆ ಹಾಕಬೇಕೆಂದು ಈ ಸಂದರ್ಭದಲ್ಲಿ ತೀರ್ಮಾನಿಸುತ್ತಾನೆ.

ಸ್ವಾರಸ್ಯ: ರಾಗಿ ಮತ್ತು ಭತ್ತ ಇವೆರಡರಲ್ಲಿ ರಾಗಿಯೇ ಶ್ರೇಷ್ಠವೆಂದು ತಿಳಿದಿದ್ದರೂ ಅದನ್ನು ನಿರೂಪಿಸಲು ರಾಮನು ನಸುನಗುತ್ತಾ ಅವುಗಳ ಸತ್ವ ಪರೀಕ್ಷೆಗೆ ಸೆರೆವಾಸ ವಿಧಿಸಿದ್ದು ಸ್ವಾರಸ್ಯಕರವಾಗಿದೆ.

| ೪. "ಇವರಿರಲಿ ಸೆರೆಯೊಳಗಾರು ತಿಂಗಳು" | |
|---|---|
| ಆಯ್ಕೆ | |
| ಸಂದರ್ಭ | |
| ಸ್ವಾರಸ್ಯ | |

ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

೧. ಪುರಂದರದಾಸರು : ಪುರಂದರವಿಠಲ : : ಕನಕದಾಸರು : ಕಾಗಿನೆಲೆ ಆದಿಕೇಶವ.

೨. ವ್ರಿಹಿ : ಭತ್ತ : : ನರೆದಲೆಗೆ : ರಾಗಿ.

೩. ಬಾಣಂತಿಯರಿಗೆ : ಪಥ್ಯ : : ಹೆಣದ ಬಾಯಿಗೆ : ತುತ್ತು.

೪. ಕ್ಷಿತಿ : ಭೂಮಿ: : ವಿರಂಚಿ : ಬ್ರಹ್ಮ.

೫. ಸೆರೆಯೊಳಗೆ : ಆಗಮಸಂಧಿ : : ತಾನೆಲ್ಲಿ : ಲೋಪಸಂಧಿ.

ಚಟುವಟಿಕೆ–೪. ಮಾದರಿಯಂತೆ ಉತ್ತರ ಪದಗಳನ್ನು ಬರೆಯಿರಿ.

| |
|---|
| ೧. |
| ೨. |
| ೩. |
| ೪. |
| ೫. |

## ಸರ್ಕಾರಿ ಪ್ರೌಢ ಶಾಲೆ

ಸಮಯ–೪೦ ನಿ. **ಮೌಲ್ಯಮಾಪನ–೪** ೨೦ ಅಂಕಗಳು

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧X೪=೦೪**

೧. ಮುದುಕಿಯನ್ನು ಭೇಟಿಯಾದ ವ್ಯಕ್ತಿ ಯಾರು?

೨. ಕಾಯಕದಲಿ ನಿರತನಾದವನು ಯಾವುದನ್ನು ಮರೆಯಬೇಕು?

೩. ಮುನಿಗಳಲ್ಲಿರುವ ಮಂತ್ರದ ಶಕ್ತಿ ಯಾವುದು?

೪. ನರೆದಲೆಗೆ ಯಾರನ್ನು ಆದರಿಸಿ ಸಲಹುತ್ತದೆ?

**ಆ. ಕೊಟ್ಟಿರುವ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿ,** **೨X೩=೦೬**

೧. "ನಮ್ಮಯ ದೇಶಕತಿಶಯ ನರೆದಲೆಗ''

೨. " ಸಾಲ್ಗುಮೀ ಪರಿಹಾಸಂ"

**ಇ. ಈ ಕೆಳಗಿನ ಕವಿಯ ಪರಿಚಯವನ್ನು ಬರೆಯಿರಿ.** **೩X೧=೦೩**

೧. ಕನಕದಾಸ.

**ಈ. ಕೊಟ್ಟಿರುವ ಈ ಪದ್ಯವನ್ನು ಪೂರ್ಣಗೊಳಿಸಿ.** ೧x೩=೦೩

ಕಾಗೆಯಮರಿ ಕೋಗಿಲೆಯಾಗಬಲ್ಲುದೆ ?

----------------------

----------------------

----------------------

ಮುಖವ ನೋಡಲಾಗದು ಅಮುಗೇಶ್ವರಾ.

**ಉ. ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.** ೧x೪=೦೪

೧. ಪುರಂದರದಾಸರು : ಪುರಂದರವಿಠಲ : : ಕನಕದಾಸರು : -----

೨. ವ್ರಿಹಿ : ಭತ್ತ : : ನರೆದಲೆಗೆ :-----

೩. ಬಾಣಂತಿಯರಿಗೆ : ಪಥ್ಯ : : ಹೆಣದ ಬಾಯಿಗೆ :-----

೪. ಕ್ಷಿತಿ : ಭೂಮಿ: : ವಿರಂಚಿ : ------

ಈ ಕೆಳಗಿರುವ ಖಾಲಿ ಜಾಗದಲ್ಲಿ ಸರಿಯಾದ ಉತ್ತರದ ಪದಗಳನ್ನು ಬರೆಯಿರಿ.

೧.

೨.

೩.

೪.